
ನಮ್ಮ ಮಾನಸ

ಸಂಪುಟ : 6 ಜುಲೈ 2012 ಸಂಚಿಕೆ: 3 ಬೆಲೆ: 10/-



ನಮ್ಮ ಮಾನಸ

ಜುಲೈ 2012
ಸಂಪುಟ : 6 ಸಂಚಿಕೆ : 3

Editor, Printer and Publisher
Rajeshwari H.S.,
No. 114/5, 9th Cross, 2nd Main
Chamarajpet, Bangalore - 560 018.
Mobile : 98804 67372 / 98869 18910

Printed at
ILA Mudrana
No. 36, 40 Ft. Road, Raghavanagara,
New Timberyard Layout
Bangalore-26.
✆ : 26757159

ಸಂಪಾದಕ ಮಂಡಳಿ
ಲೇಖಾ ಅಡವಿ, ದಿಶಾ ಕೆ.ಆರ್., ಜಾನವಿ ಎ., ನಿಹಾರಿಕ ಶೆಣೈ, ಸಮುದ್ಯತಾ ಕಂಜರ್ಪಣೆ, ಶೀತಲ ಭಟ್

ಸಲಹೆ – ಸಹಕಾರ, ಮಾನಸ ಬಳಗ
ಸವಿತಾ ಎ., ಚಂಪಾವತಿ ಹೆಚ್.ಎಸ್., ನೀಲಾಂಜನ, ಗೀತಾ, ಶಾರದ ಬಿ.ಎಸ್. ತಸ್ನೀಂತಾಜ್, ಸುಪ್ರಿಯ

ಚಂದಾ ವಿವರ

ಬಿಡಿಪ್ರತಿ	10–00 ರೂ.
ವಾರ್ಷಿಕ ಚಂದಾ (ವಿಶೇಷ ಸಂಚಿಕೆಯೊಂದಿಗೆ)	100–00 ರೂ.
ಸಂಸ್ಥೆಗಳಿಗೆ	150–00 ರೂ.

ನಮ್ಮ ಮಾನಸ
114/5, 9ನೇ ತಿರುವು, 2ನೇ ಮುಖ್ಯರಸ್ತೆ, ಚಾಮರಾಜಪೇಟೆ, ಬೆಂಗಳೂರು – 560 018

ಚಂದಾಹಣವನ್ನು ಈ ವಿಳಾಸಕ್ಕೆ ಚೆಕ್ ಅಥವಾ ಡಿ.ಡಿ. ಮೂಲಕ ಕಳಿಸಬಹುದು

ಪ್ರಾರಂಭ : 'ಮಾನವಿ' (1985ರಲ್ಲಿ), ಅನಂತರ 'ಮಾನಸ', ಈಗ 'ನಮ್ಮ ಮಾನಸ'

ಒಳಗಿನ ಪುಟಗಳಲ್ಲಿ....

ಸಹೃದಯ ಓದುಗರಲ್ಲಿ...

ನೀವು ನಮ್ಮ ಚಿಂತನೆ–ಗುರಿಯನ್ನು ಬಲಪಡಿಸುವಿರೆಂದು ನಮಗೆ ನಂಬಿಕೆ ಇದೆ. ನೀವು ಓದುತ್ತಿರುವ ಮಾನಸವನ್ನು ಹೊರತರಲು ನಿಮ್ಮ ಆರ್ಥಿಕ ನೆರವು, ಪ್ರೋತ್ಸಾಹ ಮುಖ್ಯ. ಮಾನಸವನ್ನು ಮತ್ತೊಮ್ಮೆ ನಿರಂತರವಾಗಿ ಜೀವಂತವಾಗಿಡಲು ಸಹೃದಯ ಓದುಗರ ಬೆಂಬಲದ ಅಗತ್ಯವಿದೆ. ನೀವು ಯಾವುದಾದರೊಂದು ಬಗೆಯಲ್ಲಿ ನಮ್ಮೊಂದಿಗೆ ಕೈಜೋಡಿಸಬಹುದು.

- ಪ್ರತಿ ತಿಂಗಳಿಗೊಮ್ಮೆ ಲೇಖನಗಳನ್ನು ಬರೆಯಿರಿ ಇಲ್ಲವೇ ಬೇರೆಯವರಿಂದ ಬರೆಯಿಸಿ ಕಳುಹಿಸಿ.
- ವಾರ್ಷಿಕ ಚಂದಾದಾರರಾಗಿ ಮತ್ತು ಇನ್ನಷ್ಟು ಚಂದಾದಾರರನ್ನು ಪರಿಚಯಿಸಿ.
- ಮಾನಸದ ಒಂದು ತಿಂಗಳ ಮುದ್ರಣದ ಖರ್ಚು ರೂ. 7,000/– ರಲ್ಲಿ ಪೂರ್ತಿ ಇಲ್ಲವೇ ನಿಮಗೆ ಸಾಧ್ಯವಾದಷ್ಟು ಹಣವನ್ನು ಕೊಟ್ಟು ಬೆಂಬಲಿಸಿ ಕೈ ಜೋಡಿಸುವಿರೆಂಬ ಆಶಯದೊಂದಿಗೆ,

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ

E-mail: nammamanasa@gmail.com
Contact: Disha K.R.: 9880467372, Lekha: 9686757053, Samudyatha : 97388 22836

ಈ ಸಂಚಿಕೆಯನ್ನು ತರುವಲ್ಲಿ ನಮ್ಮೊಡನೆ ಕೈಜೋಡಿಸಿದವರು ಡಾ. ಎಸ್.ಪದ್ಮಿನಿ ನಾಗರಾಜು, ಸರೋಜ ಕೆ., ಲೀಲಾವತಿ ಎಸ್.ರಾವ್, ಹೆಚ್.ವಿ. ವೆಂಕಟಸುಬ್ಬಯ್ಯ ಹಾಗೂ ಮಾನಸ ಬಳಗ

ಸಂಪಾದಕೀಯ

ಪುರುಷ ಪ್ರಧಾನಮೌಲ್ಯಗಳು ಹಾಗೂ ಮಹಿಳೆಯರ ಆರೋಗ್ಯ

ನಮ್ಮ ಸಮಾಜದಲ್ಲಿ ಮಹಿಳೆಯರಿಗಿರುವ ದ್ವಿತೀಯ ಸ್ಥಾನಮಾನಕ್ಕೂ ಅವಳ ಆರೋಗ್ಯದ ಸ್ಥಿತಿಗತಿಗೂ ನೇರವಾದ ಸಂಬಂಧವಿದೆ. ಸಮಾಜದ ಆರ್ಥಿಕ, ಸಾಮಾಜಿಕ ಹಾಗೂ ಧಾರ್ಮಿಕ ಸನ್ನಿವೇಶಗಳು ಆಕೆಯ ಆರೋಗ್ಯದ ಮೇಲೆ ನಿರ್ಣಾಯಕ ಪ್ರಭಾವವನ್ನು ಬೀರುತ್ತವೆ. ಪುರುಷಪ್ರಧಾನ ಮೌಲ್ಯಗಳು, ಪುರುಷರ ಹಿಡಿತದಲ್ಲಿರುವ ಸಂಪನ್ಮೂಲಗಳು, ಮೂಲಭೂತ ಸೌಕರ್ಯಗಳ ಕೊರತೆ, ಬಡತನ, ಅನಕ್ಷರತೆ ಮುಂತಾದ ಸಮಸ್ಯೆಗಳಿಂದಾಗಿ ಮಹಿಳೆ ನರಳುವಂತಾಗಿದೆ. ಮೂಲಭೂತವಾಗಿ ಮಹಿಳೆಯರ ಬಗೆಗಿನ ಪಿತೃಪ್ರಧಾನ ಧೋರಣೆಗಳು, ಧೋರಣೆಯ ಹಿನ್ನೆಲೆಯಲ್ಲಿ ರೂಪಿತವಾಗುವ ಯೋಜನೆಗಳು, ಯೋಜನೆಗಳು ಜಾರಿಗೊಳ್ಳುವ ವಿಧಾನಗಳಿಂದಾಗಿ ಮಹಿಳೆಯರು ಆತಂಕಕಾರಿ ಸ್ಥಿತಿಯಲ್ಲಿದ್ದಾರೆ. ಮಹಿಳೆಯರ ಆರೋಗ್ಯವನ್ನು ಸಂತಾನೋತ್ಪತ್ತಿಯ ಹಿನ್ನೆಲೆಯಲ್ಲಿ ವಿಶ್ಲೇಷಿಸಲಾಗುತ್ತಿದೆಯೆ ವಿನಃ ಆಕೆಯ ಮೂಲಭೂತ ಹಕ್ಕು ಬಾಧ್ಯತೆಯ ದೃಷ್ಟಿಕೋನದಿಂದ ನೋಡಲಾಗುತ್ತಿಲ್ಲ.

ಪುರುಷಪ್ರಧಾನ ಮೌಲ್ಯಗಳು ಹಾಗೂ ಇಂತಹ ಮೌಲ್ಯಗಳನ್ನು ಪ್ರತಿಬಿಂಬಿಸುವ ಸರ್ಕಾರಗಳು ಮಹಿಳೆಯರನ್ನು ಹೆರುವ ಯಂತ್ರವೆಂದೇ ಪರಿಗಣಿಸುತ್ತಿವೆ. ಮಕ್ಕಳನ್ನು ಹೆರುವುದು, ಮಕ್ಕಳ ಪಾಲನೆ ಪೋಷಣೆಯೇ ಆಕೆಯ ಆದ್ಯ ಕರ್ತವ್ಯವಾಗಿದೆ. 'ಸಂತಾನೋತ್ಪತ್ತಿ'ಗೆ ಸಂಬಂಧಪಟ್ಟಂತೆ ಆಕೆಗಿರುವ ಹಕ್ಕನ್ನು ಹಾಗೂ ಆಯ್ಕೆಯನ್ನು ಸಂಪೂರ್ಣವಾಗಿ ನಿರಾಕರಿಸಲಾಗಿದೆ.

ಮಹಿಳೆಯರ ಪ್ರಾಥಮಿಕ ಆರೋಗ್ಯಕ್ಕೂ, ಸಂತಾನೋತ್ಪತ್ತಿಯ ಆರೋಗ್ಯಕ್ಕೂ ನೇರವಾದ ಸಂಬಂಧವಿದೆ. ಪ್ರಾಥಮಿಕ ಆರೋಗ್ಯದಿಂದ ವಂಚಿತರಾಗುವ ಮಹಿಳೆಯರು ಜೀವನಪರ್ಯಂತ ಸಮಸ್ಯೆಗಳಿಂದ ನರಳುತ್ತಾರೆ. ಪೌಷ್ಟಿಕಾಂಶದ ಕೊರತೆ, ಸ್ವಚ್ಛವಾದ ಕುಡಿಯುವ ನೀರಿನ ಅಭಾವ, ಶುಚಿತ್ವದ ಕೊರತೆ, ಮೂಢನಂಬಿಕೆ ಹಾಗೂ ಗ್ರಾಮೀಣ ಪ್ರದೇಶದ ಮಹಿಳೆಯರಿಗೆ ಸಮರ್ಪಕ ಶೌಚಾಲಯದ ಕೊರತೆ ಮುಂತಾದವು ಆಕೆಯ ಆರೊಗ್ಯದ ಮೇಲೆ ದುಷ್ಪರಿಣಾಮಗಳನ್ನು ಬೀರುತ್ತಿವೆ. ನಗರ ಪ್ರದೇಶಗಳ ಸ್ಲಂಗಳಲ್ಲಿ, ಗಾಮೀಣ ಪ್ರದೇಶಗಳಲ್ಲಿ ಹಾಗೂ ಬುಡಕಟ್ಟು ಜನಾಂಗದ ಪ್ರದೇಶಗಳಲ್ಲಿ ವಾಸಿಸುವ ಮಹಿಳೆಯರ ಆರೋಗ್ಯದ ಸಮಸ್ಯೆಗಳು ವಿಭಿನ್ನವಾಗಿರುತ್ತವೆ. ನೀರಿನಲ್ಲಿ ಕಂಡುಬರುವ ಫ್ಲೋರಾಯಿಡ್ ಅಂಶ ಹಾಗೂ ಕೃಷಿಕ್ಷೇತ್ರದಲ್ಲಿ ಬಳಸುವ ರಾಸಾಯನಿಕಗಳು ಮಹಿಳೆಯರ ಪ್ರಾಥಮಿಕ ಹಾಗೂ ಸಂತಾನೋತ್ಪತ್ತಿ ಆರೋಗ್ಯದ ಮೇಲೆ ಭಿನ್ನವಾದ ದುಷ್ಪರಿಣಾಮಗಳನ್ನು ಬೀರುತ್ತಿರುವುದನ್ನು ನೋಡಬಹುದು.

ಪುರುಷಪ್ರಧಾನ ಸಮಾಜ ಹಾಗೂ ಲಿಂಗತಾರತಮ್ಯ ಮೌಲ್ಯಗಳು ಸಂತಾನೋತ್ಪತ್ತಿಗೆ ಸಂಬಂಧಪಟ್ಟ ಹಾಗೆ ಆಕೆಯ ಹಕ್ಕನ್ನು ಸಂಪೂರ್ಣವಾಗಿ ಕಿತ್ತುಕೊಂಡಿವೆ. ಮಕ್ಕಳು ಬೇಕೋ ಬೇಡವೋ ಎಂದು ನಿರ್ಧರಿಸುವ ಹಕ್ಕು ಅವಳಿಗಿಲ್ಲ. ಗರ್ಭಪಾತದ ಹಕ್ಕು, ಗಂಡುಮಗುವಿಗಾಗಿ ಹೆರುತ್ತಲೇ ಇರುವ ಒತ್ತಡಗಳು ಮುಂತಾದ ವಿಚಾರಗಳಲ್ಲಿ ಆಕೆಯ ದೇಹದ ಮೇಲೆ ಆಕೆಗೆ ಯಾವುದೇ ಅಧಿಕಾರವಿಲ್ಲವಾಗಿದೆ.

ಪುರುಷಪ್ರಧಾನ ಮೌಲ್ಯಗಳಿಂದ ರೂಪಿತಗೊಂಡಿರುವ ಕುಟುಂಬಗಳು 'ತಾಯ್ತನ'ವನ್ನು ಭಾವನಾತ್ಮಕ ನೆಲೆಯಲ್ಲಿ ನೋಡುತ್ತಿವೆ. ಇದರ ಜೊತೆಯಲ್ಲಿ ಕೈ ಜೋಡಿಸುವ ಬಂಡವಾಳಶಾಹಿ ಸಮಾಜ ಹಾಗೂ ಖಾಸಗೀಕರಣ ಮಹಿಳೆಯರ ಮೇಲಿನ ಶೋಷಣೆಯನ್ನು ಹೆಚ್ಚಿಸುತ್ತಿವೆ. ಮಹಿಳೆಯು ಜನಾಂಗವನ್ನು ಮುಂದುವರೆಸುವ ಸಾಧನವೆಂದು ಬಿಂಬಿತವಾಗಿದ್ದಾಳೆ. ನಮ್ಮ ಧರ್ಮ, ಸಂಸ್ಕೃತಿ ಹಾಗೂ ಸಾಮಾಜಿಕ ಮೌಲ್ಯಗಳು ಆಕೆಯ ತಾಯ್ತನವನ್ನು, ತಾಯ್ತನದ ಸಂಬಂಧವನ್ನು ವಿಜೃಂಭಿಸುವ ಮೂಲಕ ಆಕೆಗಿರುವ ಹಕ್ಕು ಮತ್ತು ಆಯ್ಕೆಯನ್ನು ತಿರಸ್ಕರಿಸಿವೆ.

ಪ್ರಾರಂಭದ ಪಂಚವಾರ್ಷಿಕ ಯೋಜನೆಗಳಲ್ಲಿ ಮಹಿಳೆಯರ ಸ್ಥಾನಮಾನಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿತ್ತು. ಕ್ರಮೇಣ ವಿಶ್ವ ಸಂಸ್ಥೆಯ ಒತ್ತಡದಿಂದಾಗಿ ಮಹಿಳೆಯರ ಆರೋಗ್ಯದ ಬಗ್ಗೆ ಗಮನ ನೀಡಲು ಪ್ರಾರಂಭಿಸಲಾಯಿತು. ಶಿಶುಮರಣ ಸಂಖ್ಯೆ ಕಡಿಮೆಮಾಡುವ ದೃಷ್ಟಿಯಿಂದ ಮಹಿಳೆಯರ ಆರೋಗ್ಯವನ್ನು ಕೇಂದ್ರೀಕರಿಸಲಾಯಿತು. 1978ರ ಮೊದಲಿನ ಯೋಜನೆಗಳಲ್ಲಿ ಮಹಿಳೆಯರನ್ನು ಹೆರುವ ಯಂತ್ರವೆಂದು ಪರಿಗಣಿಸಿ, ಜನಸಂಖ್ಯೆಯ ನಿಯಂತ್ರಣಕ್ಕೆ ಹಲವಾರು ಯೋಜನೆಗಳನ್ನು ರೂಪಿಸಿರುವುದು ಕಂಡುಬಂದಿದೆ. ಇದು ಭಾರತದಲ್ಲಿ ಮಾತ್ರವಲ್ಲದೆ ಇತರ ರಾಷ್ಟ್ರಗಳಲ್ಲೂ ಕಂಡುಬರುತ್ತಿದೆ. ಜನಸಂಖ್ಯೆಯ ನಿಯಂತ್ರಣಕ್ಕೆ ಮಹಿಳೆಯರ ಮೇಲೆ ಹೇರಿರುವ ನಿರ್ಬಂಧಗಳನ್ನು ಹಾಗೂ ಜನಸಂಖ್ಯೆಯನ್ನು ಹೆಚ್ಚಿಸಲು ಆಮಿಷಗಳನ್ನು ಒಡ್ಡುವ ಮೂಲಕ ಮಹಿಳೆಯರನ್ನು ಹಾಗೂ ಆಕೆಯ ದೇಹವನ್ನು ಒಂದು ಸಾಧನವೆಂಬಂತೆ ಪರಿಗಣಿಸಲಾಗಿದೆ.

1975ರ ನಂತರ ಮಹಿಳಾ ಚಳವಳಿ ಸಮಾಜದಲ್ಲಿ ಮಹಿಳೆಯರ ಸ್ಥಾನಮಾನ, ಸಮಾನತೆ, ಹಕ್ಕುಬಾಧ್ಯತೆ, ಲಿಂಗತಾರತಮ್ಯದ ಹಿನ್ನೆಲೆಯಲ್ಲಿ ರಾಷ್ಟ್ರಾದ್ಯಂತ ಎತ್ತಿದ ಪ್ರಶ್ನೆಗಳು ಸರ್ಕಾರಿ ಯೋಜನೆಗಳ ಮೇಲೂ ಮಹತ್ವವಾದ ಪರಿಣಾಮವನ್ನು ಬೀರಿದವು.

ಅಪೌಷ್ಟಿಕತೆ, ರಕ್ತಹೀನತೆ, ತಾಯಂದಿರ ಮರಣ ಸಂಖ್ಯೆ, ಕಿಶೋರಿಯರ ಆರೋಗ್ಯ ಮುಂತಾದ ಸಮಸ್ಯೆಗಳಿಗೆ ಕೇಂದ್ರ ಸರ್ಕಾರ ಎಲ್ಲಾ ರಾಜ್ಯಗಳಲ್ಲಿ ವಿವಿಧ ಯೋಜನೆಗಳನ್ನು ವಿವಿಧ ಹಂತಗಳಲ್ಲಿ ಜಾರಿಗೆ ತಂದಿದೆ.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯು ಗ್ರಾಮೀಣ ಪ್ರದೇಶಗಳಲ್ಲಿ ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರ ಮೂಲಕ ಗರ್ಭಿಣಿ ಮಹಿಳೆಯರ ಸ್ಥಿತಿಗಳನ್ನು ಸುಧಾರಿಸುವ ಪ್ರಯತ್ನವನ್ನು ಮಾಡುತ್ತಿದೆಯಾದರೂ ಇತ್ತೀಚೆಗೆ ನಮ್ಮ ರಾಜ್ಯದ ಕೆಲವು ಜಿಲ್ಲೆಯ ಮಕ್ಕಳು ಅಪೌಷ್ಟಿಕತೆಯಿಂದ ನರಳುತ್ತಿರುವುದು ಅಂತರಾಷ್ಟ್ರೀಯ ಸುದ್ದಿಯಾಗಿದೆ. ಇದು ಆತಂಕಕಾರಿ ಸಂಗತಿಯಾಗಿದೆ.

ಜಾಗತೀಕರಣದ ಪ್ರಭಾವದಿಂದ ಬಹುರಾಷ್ಟ್ರೀಯ ಕಂಪನಿಗಳು ತಯಾರಿಸುವ ರಾಸಾಯನಿಕಗಳು ಮಹಿಳೆಯರ ಸಂತಾನೋತ್ಪತ್ತಿ ಕ್ರಿಯೆಯ ಮೇಲೆ ದುಷ್ಪರಿಣಾಮಗಳನ್ನು ಉಂಟುಮಾಡುತ್ತಿವೆ. ಎಂಡೊಸಲ್ಫಾನ್ ಬಳಕೆಯಿಂದ ಬಹಳಷ್ಟು ಮಹಿಳೆಯರು ಇಂತಹ ಸಮಸ್ಯೆಗಳಿಂದ ನರಳುತ್ತಿರುವುದು ದೃಢಪಟ್ಟಿದೆ. ಜಪಾನಿನ ಹಿರೋಶಿಮ ಹಾಗೂ ನಾಗಸಾಕಿಯ ಮೇಲೆ ಹಾಕಿದ ಅಣುಬಾಂಬ್ ಇತಿಹಾಸದಲ್ಲಿ ಹುದುಗಿಹೋಗಿಲ್ಲ. ಭೋಪಾಲ್ ದುರಂತದಲ್ಲಿ ನೊಂದ ಮಹಿಳೆಯರು ಇಂದಿಗೂ ತಮ್ಮ ಹೋರಾಟವನ್ನು ಮುಂದುವರಿಸಿದ್ದಾರೆ.

ಮಹಿಳೆಯರು ತೆಗೆದುಕೊಳ್ಳುವ ಕ್ಯಾಲರಿ ಪ್ರಮಾಣ ಕಡಿಮೆ ಇರುವುದರಿಂದ ಅದು ಅವರ ಆರೋಗ್ಯದ ಮೇಲೆ ತೀವ್ರವಾದ ಪರಿಣಾಮವನ್ನು ಬೀರುತ್ತದೆ. ಇದರಿಂದ ಅವರ ಸಾಮಾನ್ಯ ಆರೋಗ್ಯ ಹದಗೆಡುವುದಲ್ಲದೆ ಅವರ ಸಂತಾನೋತ್ಪತ್ತಿಯ ಕ್ರಿಯೆಯ ಮೇಲೂ ನಕಾರಾತ್ಮಕ ಪರಿಣಾಮವನ್ನು ಬೀರುತ್ತಿವೆ. ಕೇರಳ, ತಮಿಳುನಾಡು, ಆಂಧ್ರಪ್ರದೇಶ, ಮಹಾರಾಷ್ಟ್ರ, ಮಧ್ಯಪ್ರದೇಶ, ಉತ್ತರಪ್ರದೇಶ ಹಾಗೂ ಪಶ್ಚಿಮಬಂಗಾಳದಲ್ಲಿ ವಯಸ್ಕ ಮಹಿಳೆಯರು ತೆಗೆದುಕೊಳ್ಳುವ ಕ್ಯಾಲರಿ ಪ್ರಮಾಣ ಕಡಿಮೆ ಇದ್ದೂ ಇವರಲ್ಲಿ ಬಹುಪಾಲು ಮಹಿಳೆಯರು ಮನೆಯಿಂದ ಹೊರಗಡೆ ದುಡಿಯುವ ಮಹಿಳಾ ಕಾರ್ಮಿಕರಾಗಿದ್ದಾರೆ.

15 ವರ್ಷಕ್ಕಿಂತ ಕಡಿಮೆ ವಯಸ್ಸಿನಲ್ಲಿ ಹೆಣ್ಣುಮಕ್ಕಳು ಎದುರಿಸುವ ರಕ್ತಹೀನತೆ, ಅಪೌಷ್ಟಿಕತೆ ಮುಂತಾದ ಸಮಸ್ಯೆಗಳು ಜೀವನಪರ್ಯಂತ ಸಮಸ್ಯೆಗಳಾಗೇ ಉಳಿಯುತ್ತವೆ.

ಮೂಲಭೂತವಾಗಿ ಮಹಿಳೆಯರು ಬಾಲ್ಯದಿಂದ ಮುಪ್ಪಿನವರೆಗು ಎದುರಿಸುವ ಆರೋಗ್ಯದ ಸಮಸ್ಯೆಗಳು ವಿವಿಧ ಕ್ಷೇತ್ರಗಳಲ್ಲಿ ನಡೆಯುವ ಮಹಿಳಾ ಶೋಷಣೆಯ ಮೇಲೆ ಆಧಾರಿತವಾಗಿವೆ. ಪಿತೃಪ್ರಧಾನ ಕುಟುಂಬ ವ್ಯವಸ್ಥೆ, ಬಂಡವಾಳಶಾಹಿ ಸಮಾಜ ಮತ್ತು ಆರ್ಥಿಕ ನೀತಿಯು ಆಕೆಯ ಆರೋಗ್ಯದ ಮೇಲೆ ಅನೇಕ ರೀತಿಯ ಒತ್ತಡಗಳನ್ನು ಹೇರುತ್ತಿವೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತಮ್ಮ ಪಾಲಿಸಿಗಳನ್ನು ಮಹಿಳೆಯರ ಮೇಲೆ ಹೇರುತ್ತಿವೆ. ಬಹುಪಾಲು ಮಹಿಳೆಯರು ತಮ್ಮ ಮೂಲಭೂತ ಅಗತ್ಯಗಳಾದ ಆಹಾರ, ಮನೆ, ನೀರು ಮುಂತಾದ ಸಮಸ್ಯೆಗಳಿಗೆ ಹೋರಾಡುವುದೇ ದೈನಂದಿನ ಬದುಕಿನ ಪ್ರಶ್ನೆಯಾಗಿರುವ ಸ್ಥಿತಿಯಲ್ಲಿ ಆರೋಗ್ಯಕ್ಕೆ ಸಂಬಂಧಪಟ್ಟ ಹಾಗೆ ತಮ್ಮ ಹಕ್ಕು ಮತ್ತು ಆಯ್ಕೆಯ ಪ್ರಶ್ನೆಗಳನ್ನು ಮುಖ್ಯವಾಹಿನಿಗೆ ತರುವುದಾದರೂ ಹೇಗೆ? ಮಹಿಳೆಯರು ಈ ಸಮಸ್ಯೆಗಳನ್ನು ರಾಜಕೀಯ, ಆರ್ಥಿಕ ಹಾಗೂ ಹಕ್ಕು ಬಾಧ್ಯತೆಯ ಹಿನ್ನೆಲೆಯಲ್ಲಿ ವಿಶ್ಲೇಷಿಸಿ ತಮ್ಮ ಹೋರಾಟವನ್ನು ರೂಪಿಸಬೇಕಿದೆ.

❑




ಬಾಲ್ಯ

ಅಮ್ಮನ ಬೆಚ್ಚಗಿನ ಮಡಿಲಲ್ಲಿ ಮಲಗಿದ್ದು
ಎದೆಹಾಲು ಕುಡಿದು ಕುಣಿದದ್ದು
ಅಮ್ಮನ ಕೈಹಿಡಿದು ಎದ್ದು ನಿಂತದ್ದು
ತಪ್ಪು ಹೆಜ್ಜೆಯಿಟ್ಟು ಬಿದ್ದ ಎದ್ದದ್ದು
ಮೊದಲ ಸಲ ಹೊಸ್ತಿಲ ದಾಟಿದ್ದು
ಸುತ್ತಲ ಮನೆಯವರಿಗೆ ಅಮ್ಮ
ನನ್ನ ತೋರಿಸಿ ಸಿಹಿ ಹಂಚಿದ್ದು
ಮೊದಲ ಅನ್ನಪ್ರಾಶನ ಅದಕ್ಕೊಂದು ಸಂಭ್ರಮ
ಕೈಹಿಡಿದು ಅಕ್ಕಿಯ ಮೇಲೆ ಓಂ ಬರೆದದ್ದು
ಜಗಕ್ಕೆಲ್ಲಾ ನನ್ನನ್ನು ತೋರಿಹಾಡಿ ಹೊಗಳಿದ್ದು
ಇಂದು ನೆನಪಾಗಿ ಬಿಕ್ಕುತ್ತೇನೆ ಅಮ್ಮನ ನೆನಪಾಗಿ
ಅಪ್ಪನ ತೊಡೆಯೇರಿ ಕುಳಿತದ್ದ ಚಿತ್ರಪಟ ನೋಡಿ
ಹಳೆಯದೆಲ್ಲಾ ಮತ್ತೆ ಸ್ಮೃತಿಪಟಲದಲ್ಲಿ ತೊಳೆಯಾಗಿದೆ
ಆದರೆ ಕಾಲ ಎಲ್ಲವನ್ನು ಮರೆಸುತ್ತದೆ
ಬಾಲ್ಯದ ಬಣ್ಣದ ಬದುಕು ಕೆದಕಲು ಸಮಯವಿಲ್ಲ
ನೆನಪು ಮಕ್ಕಳೊಂದಿಗೆ ಹಂಚಿಕೊಂಡರೆ
ಮುದುಕಿಯ ನರಳುವಿಕೆ ಎಂದೆಲ್ಲ ಗೊಣಗುತ್ತಾರೆ
ನೀರಿಗೆ ಹಾತೊರೆಯುವ ಮೀನಿನಂತೆ ಬಳಬರುವ ಬಾಲ್ಯವನ್ನು
ಮತ್ತೆ ಕೈಹಿಡಿಯುತ್ತೇನೆ ಕಾಲ ಮರೆಸುತ್ತಿದೆ
ಮರೆವು ದಾಳಿಯಿಡುತ್ತಿದೆ ಆದರೆ
ಮೊದಲ ಪ್ರಯತ್ನಗಳೆಲ್ಲವೂ ಅಮ್ಮನ ಅಪ್ಪುಗೆಯಂತೆ
ಬೆಚ್ಚನೆಯ ನೆನಪು ಕಟ್ಟಿಕೊಡುತ್ತವೆ
ಕೊನೆಗಾಲದಲ್ಲೂ ಮರೆಯದಂತೆ ಮರುಮಾತಾಡುತ್ತವೆ.

■ ಡಾ. ಎಸ್.ಪಿ.ಪದ್ಮಿನಿ ನಾಗರಾಜು

ಇತ್ತೀಚೆಗೆ ಬೆಂಗಳೂರಿನಲ್ಲಿ ಹೆಣ್ಣು ಮಗುವಿನ ಮೇಲೆ ನಡೆಯುತ್ತಿರುವ ಅತ್ಯಾಚಾರವನ್ನು ಎಲ್ಲಾ ಸಂಘ ಸಂಸ್ಥೆಗಳೂ ಖಂಡಿಸಿವೆ. ಫ್ರೆಂಚ್ ಕಾನ್ಸುಲೇಟ್ ಜನರಲ್ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವ ಫಾಸ್ಕಲ್ ಮಝುರಿಯರ್ ತನ್ನ ಮೂರುವರೆ ವರ್ಷದ ಹೆಣ್ಣುಮಗುವಿನ ಮೇಲೆ ನಡೆಸಿದ ಅತ್ಯಾಚಾರವನ್ನು 'ನಮ್ಮ ಮಾನಸ' ಖಂಡಿಸುತ್ತದೆ.




ಆಪ್ತಧಾಟಿಯಲ್ಲಿ ಸಾಗುವ 'ರಂಗಸಾಂಗತ್ಯ'

■ಎಸ್. ಮಾಲತಿ, ಸಾಗರ

ಡಾ. ವಿಜಯಾ ಅವರ 'ರಂಗಸಾಂಗತ್ಯ' ಕೃತಿಯಲ್ಲಿ 20 ಲೇಖನಗಳಿವೆ. ಮಂಜೇಶ್ವರ ಗೋವಿಂದ ಪೈಗಳ ನಾಟಕಗಳ ವಿಸ್ತೃತವಾದ ಚರ್ಚೆಯಿದ್ದು, ಬಿ. ಚಂದ್ರಶೇಖರ ಅವರು ಕನ್ನಡ ರಂಗಭೂಮಿಗೆ ಕೊಟ್ಟ ಕೊಡುಗೆಯನ್ನು ಮೆಚ್ಚುಗೆಯಿಂದ ಸ್ಮರಿಸಲಾಗಿದೆ. ಬಿ.ವಿ. ಕಾರಂತರನ್ನು ಕುರಿತಂತೆ ಎರಡು ಲೇಖನಗಳಿದ್ದು, ಕಾರಂತರು ರಂಗಭೂಮಿಯಲ್ಲಿ ನಡೆದು ಬಂದ ದಾರಿಯನ್ನು ದಾಖಲಿಸಲಾಗಿದೆ. ಶ್ರೀರಂಗರನ್ನು ಕುರಿತಂತೆ ಆಪ್ತ ಬರಹವಿದೆ. 1999ರಲ್ಲಿ ಪ್ರಸನ್ನರೊಂದಿಗೆ ನಡೆಸಿದ ಸಂದರ್ಶನವಿದೆ. ಮಾರಿಯಾ ನಗರದಲ್ಲಿ ನೂರಾರು ಕಲಾವಿದರಿಗೆ ಇಕ್ಬಾಲ್ ಅಹಮದ್ ನಿರ್ದೇಶಿಸಿದ 'ಕ್ರಿಸ್ತದನಿ' ನಾಟಕದ ಹಿನ್ನೆಲೆಯಲ್ಲಿ ಇಕ್ಬಾಲರ ಬದುಕನ್ನು ನಿರೂಪಿಸುವ ಚಿತ್ರಣವಿದೆ. ಬೀದಿನಾಟಕಗಳ ಬಗ್ಗೆ ಮೂರು ಲೇಖನಗಳಿವೆ. ರಂಗಭೂಮಿಯಲ್ಲಿ ಮಹಿಳೆಯ ಸ್ಥಾನಮಾನ ಕುರಿತಂತೆ ಎರಡು ಲೇಖನಗಳಿವೆ. ಚಿಂದೋಡಿ ಲೀಲಾ ಅವರನ್ನು ಕುರಿತಂತೆ ದಿಟ್ಟ ಚಿತ್ರಣವಿದೆ. ಇನ್ನುಳಿದಂತೆ, ಮಾಸ್ತಿಯವರ–ಎಲ್.ಎಸ್. ಶೇಷಗಿರಿರಾಯರ ನಾಟಕಗಳ ವಿಮರ್ಶೆ, ಕಾಸರಗೋಡು ಚಿನ್ನಾ ಅವರ ಅನುವಾದಿತ ನಾಟಕ 'ಸಂಹಾರ'ಕ್ಕೆ ಬರೆದ ಮುನ್ನುಡಿ, 'ರೆಕ್ಕೆ ಕಟ್ಟುವಿರಾ?' ಯುದ್ಧ ವಿರೋಧಿ ನಾಟಕದ ವಿಮರ್ಶೆ, ರೂಪಾಂತರ–ಅಳವಡಿಕೆಗೆಗಳ ಬಗ್ಗೆ, ಕಲೆಯ ಪ್ರಯೋಜನದ ಬಗ್ಗೆ ತಾತ್ವಿಕ ಚಿಂತನೆಯಿದೆ.


ರಂಗಸಾಂಗತ್ಯ
ಲೇಖಕಿ : ಡಾ. ವಿಜಯಾ
ಪುಟ : xiv + 254
ಬೆಲೆ : ರೂ. 180/–
ಪ್ರಕಾಶನ: **ಇಳಾ ಪ್ರಕಾಶನ**
ನಂ.36, 40 ಅಡಿರಸ್ತೆ, ರಾಘವನಗರ,
ಎನ್.ಟಿ.ವೈ. ಲೇಔಟ್, ಬೆಂಗಳೂರು–26



ಗೋವಿಂದ ಪೈಗಳ 'ಚಿತ್ರಭಾನು' ನಾಟಕದ ಬಗ್ಗೆ ವಿಮರ್ಶೆ ಮಾಡುತ್ತ, ಈ ನಾಟಕದಲ್ಲಿ ಬೇರೆ ಬೇರೆ ರಸಾನುಭವ ಅಥವಾ ತನ್ಮಯತೆ ತರುವ ಪ್ರಯತ್ನವಿದ್ದರೂ ನಾಟಕವೊಂದು ಅಗತ್ಯವಾಗಿ ಬೇಡುವ ಬದುಕಿನ ಬದ್ಧತೆ ಇಲ್ಲವಾಗಿದೆ, ಹೀಗಾಗಿ ಈ ನಾಟಕ ಕೃತಿ ತನ್ನ ದರ್ಶನ ಸಾಧ್ಯತೆಯಿಂದ ವಂಚಿತವಾಗುತ್ತದೆ, ನಾಟಕಕ್ಕೆ ಅತ್ಯಗತ್ಯವಾದ ಮೌನ ಇಲ್ಲಿ ಕಾಣುವುದಿಲ್ಲ ಎನ್ನುತ್ತಾರೆ. 'ಈ ನಾಟಕವನ್ನು ರಂಗಪ್ರಯೋಗಕ್ಕಿಂತ ಮಿಗಿಲಾಗಿ 1942ರ ಭಾರತದ ಸ್ವಾತಂತ್ರ್ಯ ಹೋರಾಟ, ಪ್ರಜ್ಞಾವಂತ ಮನಸ್ಸುಗಳ ಆಲೋಚನೆಗಳಿಗಾಗಿ ವಿಶ್ಲೇಷಿಸುವುದು ಸೂಕ್ತ' ಎಂಬ ಅಭಿಪ್ರಾಯಕ್ಕೆ ತಲುಪುತ್ತಾರೆ. ಜೊತೆಗೆ ಪೈ ಗಳ 'ತಾಯಿ' ನಾಟಕ, ನ್ಹೋ ನಾಟಕಗಳ ವಿಮರ್ಶೆ ಮಾಡುತ್ತ ಕೊನೆಯಲ್ಲಿ 'ಹೆಬ್ಬೆರಳು' ನಾಟಕದ ಜೊತೆಗೆ ಕೈಲಾಸಂರ 'ಪರ್ಪಸ್', ಕುವೆಂಪುರವರ 'ಬೆರಳ್ಗೆ ಕೊರಳ್', ಡಾ॥ ಸಿದ್ಧಲಿಂಗಯ್ಯನವರ 'ಏಕಲವ್ಯ', ಹರಿಹರಪ್ರಿಯರ 'ದಾರುಣ ಭಾರತ' ನಾಟಕಗಳು ಜೊತೆಗಿಟ್ಟು ತೌಲನಿಕ ಅಧ್ಯಯನ ಮಾಡಿದ್ದಾರೆ.

'ರಂಗಪ್ರಾಚಾರ್ಯನಿಗೆ ನಮಸ್ಕಾರ' ಎಂಬ ಲೇಖನದಲ್ಲಿ ಪ್ರೊ.ಬಿ.ಸಿ.ಯವರು ರಂಗಭೂಮಿಗಿತ್ತ ಕೊಡುಗೆಯನ್ನು, ಬಿ.ವಿ. ಕಾರಂತರು ಕರ್ನಾಟಕ ರಂಗಭೂಮಿಗೆ ಪ್ರವೇಶ ಕೊಡುವ ಮೊದಲು ಈ ಭೂಮಿಯನ್ನು ಹರವಾಗಿ, ಹದವಾಗಿ, ತಮ್ಮ ರಂಗಚಿಂತನೆಗಳಿಂದ ಶ್ರೀಮಂತವಾಗಿರಿಸಿದ್ದನ್ನು ನೆನೆಯುತ್ತಾರೆ. ಬಿ.ವಿ. ಕಾರಂತರ ರಂಗಯಾತ್ರೆಯ ಎಲ್ಲ ಘಟ್ಟಗಳನ್ನೂ ದಾಖಲಿಸುತ್ತ, ರಂಗಸಂಗೀತಕ್ಕೆ ಅವರಿತ್ತ ಕೊಡುಗೆಯನ್ನು ವಿಶೇಷವಾಗಿ ಸ್ಮರಿಸುತ್ತ ವಿಸ್ಮಯ ಪಡುತ್ತಾರೆ. ಶ್ರೀರಂಗರ ಬಗೆಗಿನ ಲೇಖನದಲ್ಲಿ ಅವರ ವ್ಯಕ್ತಿತ್ವವನ್ನು ಆಪ್ತವಾಗಿ ಕಡೆದಿಡುತ್ತಾರೆ. ಪ್ರಸನ್ನರ ಜೊತೆಗಿನ ಸಂದರ್ಶನದಲ್ಲಿ ಅವರ ಖಾಸಗಿ, ವೃತ್ತಿ, ಅಂತರಂಗದ ಬದುಕುಗಳೆಲ್ಲ ಅನಾವರಣಗೊಳ್ಳುತ್ತವೆ. 'ಕಿರಿಗಡಿಗೆಯಲ್ಲಿ ಹಿರಿಗುಂಬಳ' ಲೇಖನದಲ್ಲಿ ಇಕ್ಬಾಲ ಅಹಮದ್‌ರ ಸೃಜನಶೀಲತೆಯ ಮೂಲಸೆಲೆಗಳು ಅನಾವರಣಗೊಂಡಿವೆ. ಡಾ. ವಿಜಯಾ ಅವರಿಗೆ ಬೀದಿ ನಾಟಕಗಳ ಬಗ್ಗೆ ಇರುವ ಪ್ರೇಮ, ಈ ಕೃತಿಯ ಮೂರು ಲೇಖನಗಳಲ್ಲಿ ಹೊರಹೊಮ್ಮಿದೆ. ಮಹಿಳೆ ಮತ್ತು ರಂಗಭೂಮಿಗಳ ಕುರಿತು ಬರೆದ ಲೇಖನಗಳಲ್ಲಿ ಮಹಿಳೆಯರ ವಿಶಿಷ್ಟ ಸಮಸ್ಯೆಗಳು, ಸವಾಲುಗಳು–ಸಾಧನೆಗಳನ್ನು ಕುರಿತ ವಿಶಿಷ್ಟ ಒಳನೋಟಗಳನ್ನು ನೀಡುತ್ತಾರೆ. 'ರಂಗನಾಯಕಿ; ಅವಳು ಕನ್ನಡ ನಾಯಕಿ' ಎಂಬ ಚಿಂದೋಡಿ ಲೀಲಾ ಅವರನ್ನು ಕುರಿತ ಲೇಖನದಲ್ಲಿ ನಮಗೆ ಗೊತ್ತಿಲ್ಲದಿರುವ ಚಿಂದೋಡಿ ಲೀಲಾರ ಜೀವನದ ದಾರುಣ, ದಿಟ್ಟ, ಸಾರ್ಥಕ ಕ್ಷಣಗಳು ಚಿತ್ರಿತವಾಗಿವೆ. ಮಾಸ್ತಿಯವರ ಹೆಚ್ಚು ಪ್ರಚಲಿತವಲ್ಲದ 'ಶಾನ್ತಾ' ಮತ್ತು 'ಉಷಾ' ನಾಟಕಗಳ ಹಿರಿಮೆಯನ್ನು ವಿವರವಾಗಿ ಬಿಚ್ಚಿಡುತ್ತಾರೆ. ಎಲ್.ಎಸ್. ಶೇಷಗಿರಿರಾಯರ 'ಆಕಾಂಕ್ಷೆ' ಮತ್ತು 'ಆಸ್ತಿ' ನಾಟಕಗಳ ಒಳನೋಟಗಳು, ರಂಗಸಾಧ್ಯತೆಗಳ ಬಗ್ಗೆ ಗಮನ ಸೆಳೆಯುತ್ತಾರೆ.

'ರಂಗಸಾಂಗತ್ಯ' ಓದಿದಾಗ ಗಮನ ಸೆಳೆಯುವ ವಿಷಯವೆಂದರೆ ಅದರ ಆಪ್ತ ಧಾಟಿ. ಯಾರ ಬಗ್ಗೆ ಬರೆಯುತ್ತಿದ್ದಾರೋ ಅವರ ಬಗ್ಗೆ ವಿಸ್ಮಯ, ಮೆಚ್ಚುಗೆ ಮೂಡುವಂತೆ ವಿಜಯಾ ಬರೆಯುತ್ತಾರೆ. ಕೆಲವೊಮ್ಮೆ ಕಟುವಿಮರ್ಶೆಯ ಸಂದರ್ಭ ಒದಗಿಬಂದರೂ, ಅವರ ಒಳ್ಳೆಯತನ ಅವೆಲ್ಲವನ್ನೂ ನಿರ್ಲಕ್ಷಿಸಿಬಿಡುತ್ತದೆ. ಆದರೆ, ರಂಗಭೂಮಿಯನ್ನು ಬಹಳ ಕಾಲದಿಂದ ಹತ್ತಿರದಿಂದ ಅವಲೋಕಿಸುತ್ತಿರುವ ವಿಜಯಾ, ಹಲವು ಒಳನೋಟಗಳನ್ನು ಮುಖ್ಯ ಮಾಹಿತಿಗಳನ್ನು ನೀಡಿದ್ದಾರೆ. ರಂಗಾಸಕ್ತರೆಲ್ಲ ಓದಲೇಬೇಕಾದ ಕೃತಿಯಿದು. ❑



ಉಡುಪಿಯಲ್ಲೊಬ್ಬಳು 'ವೀರ ಬಾಹುಕಿ'

■ ಶೀತಲಾ ಭಟ್, ನಿಹಾರಿಕ ಶೆಣೈ

ಮಹಿಳೆ ಅಬಲೆ ಮತ್ತು ಕೋಮಲೆ ಎಂದು ಸಾರುವ ಗುಂಪು ಒಂದೆಡೆಯಾದರೆ, ಸಮಾಜ ಪುರುಷಪ್ರಧಾನ ಮೌಲ್ಯಗಳಿಂದ ರಚಿತವಾಗಿದೆ, ಮಹಿಳಾ ಸಬಲೀಕರಣಕ್ಕೆ ಅವಕಾಶವೇ ಇಲ್ಲ ಎಂದು ವಾದಿಸುವವರು ಇನ್ನೊಂದೆಡೆಯಿದ್ದಾರೆ. ಇವೆರಡೂ ದೃಷ್ಟಿಕೋನಗಳ ಮಧ್ಯೆಯೇ ಅರಿವಿದ್ದೋ ಅರಿವಿಲ್ಲದೆಯೋ ಪುರುಷ ಪ್ರಾಧಾನ್ಯತೆ ಹಾಗೂ ನಿರಾಶಾವಾದ ಎರಡಕ್ಕೂ ಸೆಡ್ಡು ಹೊಡೆದು, ಜೀವನದ ಅನೇಕ ಪೆಟ್ಟುಗಳಿಂದ ಬಲಗೊಂಡು ಮಹಿಳೆಯ ಕುರಿತು ಇರುವ ಹಳಸಲು ದೃಷ್ಟಿಕೋನವನ್ನು ಬದಲಾಯಿಸಬಲ್ಲ ಅನೇಕ ಮಹಿಳೆಯರೂ ನಮ್ಮ ನಡುವೆ ಇದ್ದಾರೆ. ಅಂತಹವರಲ್ಲಿ ಉಡುಪಿಯ ಬೀಡಿನಗುಡ್ಡೆಯಲ್ಲಿ 22 ವರ್ಷಗಳಿಂದ ಒಬ್ಬೊಂಟಿಯಾಗಿ ಸ್ಮಶಾನ ಕಾಯುವ ಕಾಯಕ ನಡೆಸುತ್ತಿರುವ ಗಟ್ಟಿಗಿತ್ತಿ ವನಜಾ ಕೂಡಾ ಒಬ್ಬರು. ಇವರು ಕರ್ನಾಟಕದ ಏಕೈಕ ವೀರಬಾಹುಕಿಯೂ ಹೌದು. ನಾವು ಅವರನ್ನು ನೋಡಲು ಹೋದಾಗ ಅಲ್ಲಿ ಕಂಡ, ನಂಬಿಕೆ ಹಾಗೂ ಜೀವನ ಪ್ರೀತಿಯ ಮೇಲೆ ನಿಂತಿರುವ ಆಕೆಯ ಬದುಕಿನ ಕೆಲವು ನೋಟಗಳನ್ನು ಸೆರೆಹಿಡಿಯಲು ಇಲ್ಲಿ ಪ್ರಯತ್ನಿಸಿದ್ದೇವೆ.


ರಜೆಯಲ್ಲಿ ಉಡುಪಿಗೆ ಹೋಗಿದ್ದ ನಾವು ವನಜಾರ ಬಗ್ಗೆ ತಿಳಿದು, ಕುತೂಹಲಗೊಂಡು ಅವರನ್ನು ನೋಡಲು, ಉಡುಪಿಯಲ್ಲಿ ಪ್ರಾಧ್ಯಾಪಕರಾಗಿರುವ ಪ್ರಸಾದ್ ರಾವ್ ಜೊತೆ ಬೀಡಿನಗುಡ್ಡೆಗೆ ಹೋದೆವು. ಹೋಗುವಾಗಲೇ ಪ್ರಸಾದ್ ರಾವ್ ಆಕೆ ತುಂಬಾ ಮೂಡಿಯೆಂದೂ, ಮಾತನಾಡಲು ನಿರಾಕರಿಸುವ ಸಾಧ್ಯತೆ ಇದೆಯೆಂದೂ ಹೇಳುತ್ತಿದ್ದರು. ನಾವಲ್ಲಿ ಹೋದಾಗ ಬೆಳಗಿನ ಹತ್ತು ಗಂಟೆ. ಭೂತಾಕಾರದ ಮರಗಳಿರುವ ದೊಡ್ಡ ಸ್ಮಶಾನ ಅದು. ಗೇಟು ತೆಗೆದು ಒಳಗೆ ಹೋಗುತ್ತಿದ್ದಂತೆ ಕಾಣುವ ಪುಟ್ಟ ಮನೆಯಲ್ಲಿರುವ ಗಟ್ಟಿ ಹೆಂಗಸನ್ನು ನೋಡಿದೆವು. ಆಕೆಗೆ ಸರಿಯಾಗಿ ಕನ್ನಡ ಬರುತ್ತಿರಲಿಲ್ಲವಾದ್ದರಿಂದ ಪ್ರಸಾದ್‌ರಾವ್ ತುಳುವಿನಲ್ಲೇ ನಾವು ಬಂದಿರುವ ಕಾರಣ ಹೇಳಿದರು. ಕೂಡಲೇ ವನಜಕ್ಕ 'ನಂಗೆ ಇದಕ್ಕೆಲ್ಲ ಪುರುಸೊತ್ತಿಲ್ಲ. ಬರೋ ಹೆಣ ಎಲ್ಲ ಸುಟ್ಟು ತಂಗಿ ಮೊಮ್ಮಗನ ತೊಟ್ಟಿಲಿಗೆ ಹಾಕೋ ಸಮಾರಂಭಕ್ಕೆ ಹೋಗ್ಬೇಕು' ಎಂದು ರೇಗಿಯೇಬಿಟ್ಟರು. ಇನ್ನೇನು ಮಾಡೋದೂ ತಿಳಿಯದೇ ಆ ಮನೆಯ ಕಟ್ಟೆಯ ಮೇಲೆ ತೆಪ್ಪಗೆ ಕುಳಿತುಕೊಂಡೆವು. ಪ್ರಸಾದ್ ರಾವ್ 'ಇವರು ನಿಮ್ಮ ಜೊತೆ ಸ್ವಲ್ಪ ಹೊತ್ತು ಇರುತ್ತಾರಂತೆ ಅಷ್ಟೆ' ಎಂದರು. 'ಇರೋದಾದ್ರೆ ಇಲ್ಲಿ ನನ್ನಂತೂ ಮಾತಾಡೋಕೆ ಪುರುಸೊತ್ತಿಲ್ಲ' ಅಂತ ಹೇಳುತ್ತಲೇ ನಮ್ಮ ಜೊತೆ ಕಟ್ಟೆ ಮೇಲೆ ಕುಳಿತರು. ನಿಧಾನವಾಗಿ ತಮ್ಮ ಜೀವನದ ಕತೆಗಳ ಸುರುಳಿ ಬಿಚ್ಚುತ್ತಾ ಹೋದರು.

ಮಾತೃಪ್ರಧಾನ ಕುಟುಂಬದಿಂದ ಬಂದಿರುವುದರಿಂದ ಚಿಕ್ಕಂದಿನಲ್ಲೆ ಧೈರ್ಯಶಾಲಿಯಾಗಿ ಬೆಳೆದ ವನಜಾ ಮದುವೆಯಾಗಿದ್ದು ಸ್ಮಶಾನ ಕಾಯುವಾತನನ್ನು. ಆತನಿಗಾಗಿ ಊಟದ ಬುತ್ತಿ ಹೊತ್ತು ಸ್ಮಶಾನಕ್ಕೆ ಬರುತ್ತಿದ್ದವರು ಅಂತ್ಯಸಂಸ್ಕಾರದ ಕೆಲಸಗಳನ್ನೂ ಕಲಿತರು. ಕುಡಿತದ ದುಶ್ಚಟಕ್ಕೆ ಬಲಿಯಾದ ಗಂಡ ಅನಾರೋಗ್ಯದಿಂದ ಬಳಲುವಾಗ ಆತನನ್ನು ಕರೆದುಕೊಂಡು ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆದಾಡಿದಳು. ಆಕೆಯೇ ಹೇಳುವಂತೆ ಗಂಡನ ಅನಾರೋಗ್ಯ ಆಕೆಯನ್ನು ಇನ್ನಷ್ಟು ಗಟ್ಟಿಗೊಳಿಸಿತು. ಇದೇ ಅವರನ್ನು ಹೆಣ ಸುಡುವ ಕಾಯಕಕ್ಕೂ ಎಳೆತಂತು. ಒಂದು ದಿನ ಆತ ಆಸ್ಪತ್ರೆಯಲ್ಲಿರುವಾಗಲೇ ಆತನ ಅವಶ್ಯಕತೆ ಸ್ಮಶಾನದಲ್ಲಿ ಒದಗಿ ಬಂತು. ಆಗ ಕತ್ತಲಾಗುತ್ತಿದ್ದರಿಂದ ಶವವನ್ನು ಹಾಗೇ ಬಿಟ್ಟು ಹೋಗುವಂತಿರಲಿಲ್ಲ. ಅನಿವಾರ್ಯವಾಗಿ ವನಜಾರೇ ಆ ಕೆಲಸವನ್ನು ನಿರ್ವಹಿಸಬೇಕಾಯಿತು. ಇದು ಆಕೆ ಹೆಣ ಸುಡುವ ಕೆಲಸಕ್ಕೆ ಕಾಲಿರಿಸಿದ ಮೊದಲ ದಿನ.

ಪತಿಯ ಮರಣದ ನಂತರ ಜೀವನೋಪಾಯಕ್ಕಾಗಿ ಇದೇ ವೃತ್ತಿಯನ್ನು ಆಶ್ರಯಿಸಬೇಕಾಯಿತು. ಸ್ಮಶಾನದಲ್ಲೇ ಪುಟ್ಟ ಮನೆ ಕಟ್ಟಿ ತನ್ನ ಮೂವರು ಮಕ್ಕಳೊಂದಿಗೆ ಅಲ್ಲೇ ವಾಸಿಸಲಾರಂಭಿಸಿದರು. ಸ್ಮಶಾನ ವಾಸ ಭಯವಲ್ಲವೇ ಎಂದು ಕೇಳಿದರೆ 'ನಾನು ಇಲ್ಲೇ ಬದಕ್ತಾ ಇಲ್ವ' ಮರುಪ್ರಶ್ನೆ ಎಸೆದರು. 'ಹಾಗಾದ್ರೆ ದೆವ್ವ ಭೂತ ಏನೂ ಇಲ್ಲ ಅಂತೀರಾ' ಎಂದು ಕೆಣಕಿದರೆ 'ಜನ ಹೇಳ್ತಾರೆ ಇಲ್ಲಿ ದೆವ್ವ ಭೂತ ಎಲ್ಲ ನೋಡಿದೀವಿ

ಮೊದಲ ಅನುಭವ

'ನನ್ನ ಗಂಡ ಆಸ್ಪತ್ರೆಯಲ್ಲಿದ್ದದರಿಂದ ನಾನೇ ಹೆಣ ಸುಡಬೇಕಾಗಿ ಬಂತು. ಶವ ತಗೊಂಡು ಬಂದಿದ್ದ ಆ ಜನರಲ್ಲಿ ಸತ್ತೋನ ಬಗ್ಗೆ ಅಳೋದಕ್ಕಿಂತ ಹೆಚ್ಚು, ಪಾಪ ಹೆಂಗಸು ಇಂತಹ ಕೆಲಸ ಮಾಡಬೇಕಲ್ಲ ಅಂತಾನೇ ಬೇಜಾರು ಮಾಡ್ಕೋತಿದ್ರು.'



ಅಂತ, ಆದ್ರೆ ನನ್ಗೆ ಯಾವ್ದೂ ಏನೂ ಉಪದ್ರವ ಕೊಡಲ್ಲ' ಎಂದು ನಕ್ಕುಬಿಡುತ್ತಾರೆ. ಹಾಗೆಂದು ಈಕೆ ಇಂಥವನ್ನೆಲ್ಲ ಸಾರಾಸಗಟಾಗಿ ನಿರಾಕರಿಸುವ ಬುದ್ಧಿಜೀವಿಗಳಂತಲ್ಲ. ಇವರು ಜನರಿಗೆ ಬೂದಿ ನೀಡುತ್ತಾರೆ. ಅದರಿಂದ ರೋಗ ಗುಣವಾಗುತ್ತದೆ ಅನ್ನೊ ನಂಬಿಕೆಯೂ ಇದೆ. ಆದರೆ ತನ್ನಲ್ಲಿ ಅಂತಹ ವಿಶೇಷ ಶಕ್ತಿಯಿದೆಯೆಂದು ಹೇಳಿ ಜನರನ್ನು ಮೋಸಗೊಳಿಸುವವರೂ ಅಲ್ಲ. ಆಕೆಯೇ ಹೇಳ್ತಾರೆ 'ನಂಬಿಕೆ ಇಟ್ಟು ಬರ್ತಾರೆ, ಆದ್ರಿಂದ ಗುಣ ಆಗ್ಬಹುದು ಅಷ್ಟೆ' ಸಹಜತೆ, ನಂಬಿಕೆ ವಿಶ್ವಾಸಗಳನ್ನೇ ಅಪಾರವಾಗಿ ನೆಚ್ಚಿಕೊಂಡವರಿವರು. ಇವುಗಳೇ ನಮ್ಮನ್ನು ಅಪೂರ್ವ ಧೈರ್ಯದೊಂದಿಗೆ ಮುನ್ನಡೆಸಬಲ್ಲವು ಎನ್ನುವುದಕ್ಕೆ ವನಜಕ್ಕನೇ ಸಾಕ್ಷಿ.

ಜೀವನವನ್ನು ಬಂದಂತೆ ಒಪ್ಪಿಕೊಳ್ಳಬೇಕೆನ್ನುವ ತತ್ವ ಅವರದ್ದು. ತಾವಿದನ್ನು ಅನುಸರಿಸುವುದಲ್ಲದೇ ಅಲ್ಲಿಗೆ ಬರುವವರಿಗೂ ಈ ಪಾಠವನ್ನು ಕಲಿಸುತ್ತಾರೆ. ಹೀಗೆ ನೊಂದವರನೇಕರನ್ನು ಸ್ಮಶಾನ ಕಾಯುವ ವನಜಕ್ಕ ಮತ್ತೆ ಜೀವನ್ಮುಖಿಗಳಾಗಿಸಿದ್ದಾರೆ. ಒಮ್ಮೆ ಗಣ್ಯರೊಬ್ಬರು ಚಿಕ್ಕ ವಯಸ್ಸಿನಲ್ಲೇ ತೀರಿಕೊಂಡಿದ್ದರು. ಅವರಿಗೆ ಮಕ್ಕಳಿರಲಿಲ್ಲ. ಶವವನ್ನು ಬೀಡಿನಗುಡ್ಡೆಗೆ ತಂದಿದ್ದರು. ಮೃತರ ಹೆಂಡತಿ ಸರ್ವಸ್ವವನ್ನೂ ಕಳೆದುಕೊಂಡಂತೆ ದುಃಖಿಸುತ್ತಿದ್ದಾಗ ವನಜಕ್ಕ, 'ಸತ್ತವರಂತೂ ಹೋದರು ನಾವಾದರೂ ಧೈರ್ಯ ತಗೊಂಡು ಬಾಳು ಮುಂದುವರೆಸಬೇಕಲ್ವ' ಎಂದು ಸಂತೈಸಿ ಆಕೆಯಿಂದಲೇ ಶವಸಂಸ್ಕಾರ ಮಾಡಿಸಿದ್ದರು. ಕಟ್ಟುನಿಟ್ಟಾಗಿ ಸಂಪ್ರದಾಯದ ಪ್ರಕಾರ ಶವಸಂಸ್ಕಾರದ ಪದ್ಧತಿಗಳನ್ನು ಅನುಸರಿಸೋ ವನಜಕ್ಕ ಅಗತ್ಯ ಬಿದ್ದಾಗ ಸ್ಥಿತಿಸ್ಥಾಪಕತ್ವ ಗುಣವನ್ನೂ ಪ್ರದರ್ಶಿಸುತ್ತಾರೆ.

ವನಜಕ್ಕ ಅಂತಸ್ತು ಸ್ಥಾನಮಾನ ನೋಡಿ ಮಣೆ ಹಾಕುವವರಲ್ಲ. ಬರುವ ಎಲ್ಲರಿಗೂ ಒಂದೇ ಬಗೆಯ ಉಪಚಾರ. ಆಕೆಯ ವೃತ್ತಿ ಜೀವನದಲ್ಲಿ ಮರೆಯಲಾಗದ ಘಟನೆ ಅಧಿಕಾರಿಗಳ, ಗಣ್ಯರ ಸಂಸ್ಕಾರ ಮಾಡಿದ್ದಲ್ಲ. ಯಾರದೋ ಮೂರು ಮಕ್ಕಳು ಅಪಘಾತವೊಂದರಲ್ಲಿ ಒಂದೇ ಬಾರಿಗೆ ತೀರಿಕೊಂಡಾಗ, ಅವರ ಶವಗಳನ್ನೂ ಸುಟ್ಟ ಘಟನೆ ವನಜಕ್ಕನನ್ನು ಜೀವನದುದ್ದಕ್ಕೂ ಕಾಡಿದೆ. ಈಗಲೂ ಯಾವುದಾದರೂ ಹೆಣ ಸುಡುವಾಗ ಆ ಮಕ್ಕಳ ನೆನಪು ಬಂದು ಈಕೆ ಮೆತ್ತಗಾಗುತ್ತಾರೆ.

ಇವರು ನಮ್ಮ ಜೊತೆ ಹೀಗೆ ಮಾತನಾಡುತ್ತ ಕುಳಿತಿರುವಾಗ ಒಂದಿಷ್ಟು ಜನ ಹೆಣ ತೆಗೆದುಕೊಂಡು ಅಲ್ಲಿಗೆ ಬಂದರು. ವನಜಕ್ಕ ಕೂಡಲೇ ಎದ್ದು ದೊಡ್ಡ ದೊಡ್ಡ ಕಟ್ಟಿಗೆ ತುಂಡುಗಳನ್ನು ಹೆಣ ಸುಡುವ ಹಂಡೆಯಲ್ಲಿ ಜೋಡಿಸ ತೊಡಗಿದರು. ದೂರದಲ್ಲಿ ನಿಂತಿದ್ದ ನಮ್ಮನ್ನು 'ಯಾಕೆ ಹೆದರಿಕೇನಾ? ಬನ್ನಿ ಇಲ್ಲಿ' ಎಂದು ಕೂಗಿ ಕರೆದರು. ನಾವು ಹೋದೆವು. ಶವಸಂಸ್ಕಾರದ ವಿಧಿ ವಿಧಾನಗಳನ್ನು ಪ್ರಾರಂಭಿಸಿದರು. ಬೆಂಕಿ ಹಚ್ಚುವ ಮೊದಲು ಹೆಂಡವನ್ನು ಸುರಿಯುತ್ತಾರೆ. ವನಜಕ್ಕ 'ಸುಮ್ಮನೆ ಹೆಂಡವನ್ನು ವ್ಯರ್ಥ ಮಾಡ್ತೀರಾ' ಅಂತೆಲ್ಲಾ ಹೇಳುತ್ತಾ ವಾತಾವರಣ ತಿಳಿಯಾಗುವಂತೆ ಮಾತನಾಡುತ್ತಾ ಹೆಣವನ್ನು ಸುಟ್ಟು ಮುಗಿಸಿದರು. ಅಷ್ಟರಲ್ಲೇ ಇನ್ನೂ ಎರಡು ಹೆಣಗಳನ್ನು ತರುತ್ತಿದ್ದಾರೆಂಬ ಸುದ್ದಿ ತಿಳಿದಿದ್ದರಿಂದ ಅದಕ್ಕೆ ತಯಾರಿ ನಡೆಸಿದರು.

ಈಗ ಹೆಣ ಸುಡಲು ಹೊಸ ವ್ಯವಸ್ಥೆಗಳಿದ್ದು ಕೆಲಸ ಸ್ವಲ್ಪ ಸುಲಭವಾಗಿದೆ. ಮೊದಲು ನೆಲದ ಮೇಲೆ ಕಟ್ಟಿಗೆಗಳನ್ನು ಪೇರಿಸಿಟ್ಟು ಬೆಂಕಿ ಕೊಡಬೇಕಿತ್ತು. ಇದು ಹೆಚ್ಚಿನ ದೈಹಿಕ ಶ್ರಮವನ್ನು ಬೇಡುತ್ತಿತ್ತು. ಕೆಲವೊಮ್ಮೆ ಬೆಂಕಿ ಸಿಡಿಯುತ್ತಿದ್ದರಿಂದ ಹೆಂಗಸೊಬ್ಬಳಿಗೆ ಈ ಕೆಲಸ ನಿಜಕ್ಕೂ ತ್ರಾಸದಾಯಕವಾಗಿತ್ತು. ಆಗ ಆಕೆಗೆ ಸಹಾಯಮಾಡಲು ಯಾರೂ ಇರಲಿಲ್ಲ. ಆದರೂ ಎಲ್ಲವನ್ನೂ ಮೌನದಿಂದ ಎದುರಿಸಿದಾಕೆ ವನಜಾ. ಈಗ ಸರಿಯಾದ ವ್ಯವಸ್ಥೆ ಹಾಗೂ ಸಹಾಯಕರೂ ಆಕೆಗಿದ್ದಾರೆ. ಆದರೂ ತನ್ನಿಂದಾಗುವಷ್ಟು ತಾನೇ ಮಾಡಬೇಕೆನ್ನುವ ಸ್ವಾಭಿಮಾನಿ ವನಜಕ್ಕ.

ಕೆಲಸ ಮುಗಿಸಿ ಬಂದ ವನಜಕ್ಕ ನಾವು ಎಲ್ಲಿಂದ ಬಂದವರು, ಏನು ಓದುತ್ತಿರೋದು ಎಲ್ಲಾ ಕೇಳಿದರು.' ಹೆಣ್ಣುಮಕ್ಕಳು ಕಲೀಬೇಕು' ಎನ್ನತ್ತಾ ಮತ್ತೆ ಮಾತಿಗಿಳಿದರು. ಇಂದಿನ ಹೆಣ್ಣುಮಕ್ಕಳ ಸ್ಥಿತಿಗತಿಯನ್ನು ಕುರಿತು ವನಜಾರಿಗೆ ಖುಷಿ ಇದೆ – 'ನಮ್ಮ ಕಾಲದಲ್ಲಿ ನಾವು ಸೈಕಲ್ ಹೊಡೆದರೇ ನಮಗೆ ಏಟು ಬೀಳ್ತಿತ್ತು. ಈಗೀಗ ದೊಡ್ಡ ಮೋಟಾರು ಕಾರುಗಳನ್ನೂ ಹೆಣ್ಣುಮಕ್ಕಳು ಓಡಿಸುತ್ತಾರೆ. ಹೀಗೆ ಹೆಣ್ಣುಮಕ್ಕಳು ಧೈರ್ಯ ಮಾಡಿಕೊಂಡು ಮುಂದೆ ಬರಬೇಕು'. ವನಜಾ ಹೀಗೆ ಹೇಳುತ್ತಿದ್ದಂತೆ ಅಲ್ಲಿಗೆ ಸೀಮೆಎಣ್ಣೆ ಸುರಿದುಕೊಂಡು ಸತ್ತ ಹೆಣ್ಣೊಬ್ಬಳ ಹೆಣ ಬಂತು. ಕೂಡಲೇ ವನಜಕ್ಕ 'ಚಿಕ್ಕ ವಿಷಯಗಳಿಗೆಲ್ಲ ಹುಡುಗೀರು ಬೆಂಕಿ ಹಾಕ್ಕೊಳ್ಳೋದಾ? ಎದುರಿಸೋದನ್ನು ಕಲೀಬೇಕಲ್ವ' ಎಂದು ಬೇಸರಗೊಂಡರು. ಬಹಿರಂಗದಲ್ಲಿ ಸಿಕ್ಕಂತೆ ಕಾಣುವ ಸ್ವಾತಂತ್ರ್ಯ ಮಹಿಳೆಯ ಬದುಕಿನ ಒಳಗೆ ಇನ್ನೂ ಪೂರ್ಣವಾಗಿ ಇಳಿದಿಲ್ಲ ಎನ್ನುವ



'ನನ್ನ ಗಂಡ ಕುಡಿದು ಬಂದು ನನ್ನ ಹೊಡೀತಿದ್ದರು.ಒಂದು ದಿನ ತುಂಬಾ ಕೋಪದಲ್ಲಿ ಹೊಡೆಯೋಕೆ ಬಂದಾಗ ನಾನು ಹೆದರಿ ತಪ್ಪಿಸಿಕೊಂಡು ಸ್ಮಶಾನದ ಮೂಲೆಯ ದೊಡ್ಡ ಮರದ ಸಂದಿಯಲ್ಲಿ ಅಡಗಿಕೊಂಡೆ. ತಿರುಗಿ ಬಂದರೆ ಹೊಡೆದಾರೆಂಬ ಭಯ. ಆದರೂ ಅವರು ಅಲ್ಲೇ ಇದ್ದಿರಬಹುದು ಎಂಬ ಧೈರ್ಯದಿಂದ ರಾತ್ರಿಯೆಲ್ಲ ಅಲ್ಲೇ ಕೂತಿದ್ದೆ. ಬೆಳಿಗ್ಗೆ ಎದ್ದು ನೋಡಿದಾಗ ಅವರು ಕೋಪದಲ್ಲಿ ಮನೆಗೆ ಹೋಗಿಬಿಟ್ಟಿದ್ದರು!!." ಮೊದಲ ಬಾರಿಗೆ ಸ್ಮಶಾನದಲ್ಲಿ ಕಳೆದ ಅನುಭವವಿದು.ಇದನ್ನು ಹೇಳಿದ ವನಜಕ್ಕ ನಂತರ ತುಂಟನಗೆ ನಕ್ಕು ಅವರು ಮನೆಗೆ ಹೋಗಿದ್ದು ಗೊತ್ತಾಗಿದ್ರೆ ನಾನು ಅಲ್ಲಿ ಇರುತ್ತಿರಲಿಲ್ವೇನೊ' ಅಂದರು.

ಪ್ರಜ್ಞೆ ವನಜಕ್ಕನಂಥರಲ್ಲಿ ಅಸ್ಪಷ್ಟವಾಗಿಯಾದರೂ ಮೂಡಿದೆ.

ನಾವು ಮೊದಲು ಅಲ್ಲಿಗೆ ಹೋದಾಗ ತೊಟ್ಟಿಲಿಗೆ ಹಾಕೋ ಸಮಾರಂಭಕ್ಕೆ ಹೋಗ ಬೇಕೆಂದು ರೇಗಿದ ವನಜಕ್ಕ ಮಾತಾಡುತ್ತಾ ಮಾತಾಡುತ್ತಾ ನಮ್ಮ ಜೊತೆ ಸಲುಗೆ ಬೆಳೆಸಿದರು. ಅವರ ಸಂಬಂಧಿ ಹೆಂಗಸೊಬ್ಬಳು ಆ ಸಮಾರಂಭಕ್ಕೆ ಕರೆಯಲು ಬಂದಾಗ, 'ಅಲ್ಲಿ ತೊಟ್ಟಿಲಿಗೆ ಹಾಕೋದಕ್ಕೆ ನಾನು ಬಂದ್ಬಿಟ್ರೆ ಇಲ್ಲಿ ಹೆಣ ಬಂದ್ರೆ ಸುಡೋರ್‍ಯಾರು? ನಡೀ..' ಎಂದು ಬಂದವಳನ್ನು ಗದರಿಸಿ ಕಳುಹಿಸಿಯೇಬಿಟ್ಟರು. ಈ ವಿಚಿತ್ರ, ಅದ್ಭುತ ಹೆಂಗಸನ್ನು ಬೆರಗುಗಣ್ಣುಗಳಿಂದ ನೋಡುತ್ತಾ ನಾವು ಅವರಿಗೆ ವಿದಾಯ ಹೇಳಿ ಹೊರಡುವಾಗ ಮಧ್ಯಾಹ್ನವಾಗಿತ್ತು. ಶವವನ್ನು ಬೂದಿಯಾಗಿಸುತ್ತಿದ್ದ ಬೆಂಕಿ ಹಾಗೂ ವನಜಕ್ಕನ ಕಣ್ಣುಗಳಲ್ಲಿ ಕಾಣುತ್ತಿದ್ದ ಬೆಂಕಿ ಎರಡೂ ನಮ್ಮ ಮನಸಿನಾಳಕ್ಕೆ ಇಳಿಯುತ್ತಿತ್ತು.

ಹುಟ್ಟುವ ಹಿಂದೆ ಕತ್ತಲು ಸಾವಿನಾಚೆ ಕತ್ತಲು
ಎಂದು ಪಾಠ ಒಪ್ಪಿಸದೇ
ದುರಂತವ ಬದುಕಿದವ ಮಾತ್ರ
ಎರಡರ ನಡುವಿನ ಬೆಳಕ ಜೀವಿಸುವವನು.


– ಲಂಕೇಶ್

❑

ನಿನ್ನಲಿದೆ ಬಹು ಶಕ್ತಿ ಅದ ನೀನು ತೋರೆ
ತೋರಿಸಲಾಗದೆಯೆ ಆಗಿರುವೆ ನೀ ಸೆರೆ
ಧೈರ್ಯದಿ ಮುನ್ನುಗ್ಗಿ ಬಾ ಬಾರೆ ನೀರೆ
ಮರೆಯದಿರು ಈ ಜಗದಿ ನೀ ಮಿನುಗುತಾರೆ

– ಪವಿತ್ರ ಕೆ.ಎನ್

ಎಲಿನೊರ್ ಒಸ್ಟ್ರೊಂ



■ ನಿಹಾರಿಕ ಶೆಣೈ

ಜೂನ್ 12, 2012. ಅರ್ಥಶಾಸ್ತ್ರ ಮತ್ತು ರಾಜ್ಯಶಾಸ್ತ್ರಜ್ಞರ ವಲಯದ ಒಬ್ಬ ಮಾನವೀಯ, ಪರೋಪಕಾರಿ ಮಹಿಳೆ ಇಂದು ನಮ್ಮೊಡನಿಲ್ಲ. ಆಕೆ ಎಲಿನೊರ್ ಒಸ್ಟ್ರೊಂ- ಅರ್ಥಶಾಸ್ತ್ರದಲ್ಲಿ ನೊಬೆಲ್ ಪ್ರಶಸ್ತಿ ಪಡೆದಿರುವ ಮೊದಲ ಮಹಿಳೆ. ಎಲಿನೊರ್ ಒಸ್ಟ್ರೊಂ ಅಮೆರಿಕದ ಇಂಡಿಯಾನಾ ಯುನಿವರ್ಸಿಟಿಯಲ್ಲಿ ರಾಜ್ಯಶಾಸ್ತ್ರದ ಪ್ರಾಧ್ಯಾಪಕರಾಗಿ 50 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಒಸ್ಟ್ರೊಂ, ತಮ್ಮ ಸಂಶೋಧನೆಯ ಮೂಲಕ, ನಮ್ಮ ಸಂಪನ್ಮೂಲಗಳ ದುರ್ಬಳಕೆಯಿಂದ ಆಗುತ್ತಿರುವ ಪರಿಸರದ ನಾಶವನ್ನು ಸರಕಾರ ಅಥವಾ ಖಾಸಗಿ ಕಂಪೆನಿಗಳ ಮೇಲೆ ಅವಲಂಬಿತರಾಗದೆ ಸಾರ್ವಜನಿಕರೇ ಪರಿಣಾಮಕಾರಿಯಾಗಿ ನಿಭಾಯಿಸಬಲ್ಲರು ಎಂದು ತೋರಿಸಿಕೊಟ್ಟಿದ್ದಾರೆ. ದೇಶ ವಿದೇಶದಲ್ಲಿ ತಿರುಗಾಡಿ ನೈಸರ್ಗಿಕ ಸಂಪನ್ಮೂಲ ಹಾಗೂ ಅಲ್ಲಿಯ ಜನರ ಸಂಬಂಧ, ಸಮಸ್ಯೆಗಳಿಗೆ ಅವರು ಕಂಡುಕೊಂಡ ಸ್ಥಳೀಯ ಪರಿಹಾರ, ಜನರ ಹಾಗೂ ಅವರ ಪರಿಸರದ ಜತೆಗಿನ ಒಡನಾಟ, ಸಹಪ್ರಯತ್ನದಿಂದ ಪಡೆದ ಫಲಿತಾಂಶ ಮುಂತಾದವುಗಳನ್ನು ದಾಖಲಿಸಿದ್ದಾರೆ. ಅವರ ಈ ಸಂಶೋಧನೆಯ ಮಹತ್ವವನ್ನು ಗುರುತಿಸಿದ ರೊಯಲ್ ಸ್ವೀಡಿಶ್ ಅಕಾಡಮಿ ಆಫ್ ಸೈನ್ಸ್ 2009ರಲ್ಲಿ ಎಲಿನೊರ್ ಒಸ್ಟ್ರೊಂ ಮತ್ತು ಒಲಿವರ್ ವಿಲ್ಲಿಯಂಸನ್‌ರನ್ನು ನೊಬೆಲ್ ಪ್ರಶಸ್ತಿಯಿಂದ ಗೌರವಿಸಿತು. ಪುರುಷರೆ ಹೆಚ್ಚಿನ ಪ್ರಮಾಣದಲ್ಲಿರುವ ಅರ್ಥಶಾಸ್ತ್ರದ ಕ್ಷೇತ್ರದಲ್ಲಿ ಒಬ್ಬ ಮಹಿಳೆ ಇದನ್ನು ಸಾಧಿಸಿರುವುದು ಸಾಧಾರಣವೇನಲ್ಲ. ಇದರ ಹಿಂದಿನ ಹೋರಾಟ ಎಲಿನೊರ್ ವ್ಯಕ್ತಪಡಿಸುತ್ತಾರೆ : "ನಾನು ಲೊಸ್ ಎಂಜಲಿಸ್‌ನ ಬೆವರ್ಲಿ ಹಿಲ್ಸ್ ಹೈಸ್ಕೂಲಿನಲ್ಲಿ ಓದುತ್ತಿರುವಾಗ ಹೈಸ್ಕೂಲ್ ಆದ ಮೇಲೆ ಸಾಮಾನ್ಯವಾಗಿ ಎಲ್ಲರೂ ಕಾಲೇಜು ಸೇರುತ್ತಾರೆ ಅಂತ ತಿಳಿದೆ. ಆ ಪ್ರಕಾರ ನಾನೂ ಕಾಲೇಜು ಸೇರಲು ನಿರ್ಧರಿಸಿದೆ ಆದರೆ ಮನೆಯವರು ಇದಕ್ಕೆ ಬೆಂಬಲ ಕೊಡಲಿಲ್ಲ. ಕಾಲೇಜು ಶುಲ್ಕ ಅತ್ಯಂತ ಕಡಿಮೆಯಿದ್ದುದರಿಂದ ನಾನು ಸಣ್ಣ ಪುಟ್ಟ ಕೆಲಸಗಳನ್ನು ಮಾಡಿಕೊಂಡು, ಹೇಗೊ ಸುಧಾರಿಸಿಕೊಂಡೆ. ಪದವಿ ಪಡೆದ ಮೇಲೆ ಕೆಲಸ ಹುಡುಕಲು ಹೋದಾಗ ಆಶ್ಚರ್ಯವೆನಿಸಿದ್ದೇನೆಂದರೆ ಎಲ್ಲರೂ, ನಿನಗೆ ಟೈಪಿಂಗ್ ಮತ್ತು ಶಾರ್ಟ್‌ಹ್ಯಾಂಡ್ (ಶೀಘ್ರಲಿಪಿ) ಬರುತ್ತದೆಯೇ ಎಂದು ಕೇಳಿದ್ದು. ಆ ದಿನಗಳಲ್ಲಿ ಹೆಂಗಸರಿಗೆ ಕೇವಲ ಸೆಕ್ರೆಟರಿ ಅಥವ ಶಾಲಾ ಶಿಕ್ಷಕಿಯ ಕೆಲಸ ಮಾತ್ರ ಸಾಧ್ಯ ಎಂಬ ಪರಿಕಲ್ಪನೆ ಚಾಲ್ತಿಯಲಿತ್ತು. ಆದ್ದರಿಂದ ನಾನು ಟೈಪಿಂಗ್ ಮತ್ತು shorthand ಕಲಿಯಬೇಕಾಯಿತು. ನಾನು ರಾಜ್ಯಶಾಸ್ತ್ರದಲ್ಲಿ ಎಂ.ಎ. ಮುಗಿಸಿದ ಮೇಲೆ ನನಗೆ ಅರ್ಥಶಾಸ್ತ್ರದಲ್ಲಿ ಪಿಎಚ್.ಡಿ. ಮಾಡುವ ಅಪೇಕ್ಷೆ ಇತ್ತು. ಇದನ್ನ ಕಾಲೇಜಿನ ಪ್ರಾಧ್ಯಾಪಕರಿಗೆ ಹೇಳಿದಾಗ ಅವರ ಪ್ರತಿಕ್ರಿಯೆ ನಿರುತ್ಸಾಹಗೊಳಿಸಿತು. ಹೋಗಲಿ, ರಾಜ್ಯಶಾಸ್ತ್ರದಲ್ಲಾದರೂ ಶಿಕ್ಷಣ ಮುಂದುವರಿಸೋಣ ಎಂದು ಬಯಸಿದರೆ, ಆ ಇಲಾಖೆಯೂ ಹೆಂಗಸರನ್ನು Ph.D ಕೋರ್ಸಿನಲ್ಲಿ ಸೇರಿಸಲು ಹಿಂಜರಿಯುತ್ತಿತ್ತು. ಆದರೂ ನಾನು ಹಾಗೂ ಇತರ ಮೂವರು ಮಹಿಳೆಯರು 40 ಪುರುಷರ ಜತೆ ಈ ಕೋರ್ಸ್‌ನಲ್ಲಿ ಪ್ರವೇಶ ಪಡೆಯಲು ಯಶಸ್ವಿಯಾದೆವು. ನಾವು ಭರ್ತಿಯಾಗುವ ಕೆಲವು ದಿನಗಳಲ್ಲೆ, ಹೆಂಗಸರಿಗೆ assistantship ಕೊಡುವ ವಿಷಯದಲ್ಲಿ ಆಡಳಿತ ಹಾಗೂ ಮ್ಯಾನೆಜ್‌ಮೆಂಟ್ ತಂಡದವರ ನಡುವೆ ಗಲಾಟೆಯಾಯಿತು, ನಮ್ಮ ಅದೃಷ್ಟದಿಂದ ನಮ್ಮ ಪುರುಷ ಸಹಪಾಠಿಗಳು ಬೆಂಬಲ ನೀಡಿ ಶಿಕ್ಷಣವನ್ನು ಮುಂದುವರೆಸಲು ಪ್ರೋತ್ಸಾಹಿಸಿದರು." ಇಂತ ಪರಿಸ್ಥಿಯಲ್ಲಿ ಓದಿದ ಎಲಿನೊರ್ ಒಸ್ಟ್ರೊಂ, 'ಮಹಿಳೆಯರೂ ಬೇಕಾದ್ದನ್ನು ಸಾಧಿಸಬಹುದು' ಎಂಬ ನೀತಿಗೆ ಸಾಕ್ಷಿಯಾಗಿ, ತಮ್ಮ ಸಬಲೀಕರಣಕ್ಕಾಗಿ ತಾವೇ ಹೋರಾಡಿ, ಅಡಚಣೆಗಳನ್ನು ಸಡ್ಡುಹೊಡೆದು ನಮ್ಮ ಕನಸುಗಳನ್ನು ನನಸಾಗಿಸಬೇಕು ಎಂದು ತೋರಿಸಿಕೊಟ್ಟಿದ್ದಾರೆ.

ಮೂಲ : Nobelprize.org

ನಾನೊಬ್ಬ ಮಹಿಳೆ ;
ನನ್ನ ಬದುಕು ನನ್ನ ಹಕ್ಕು


■ ಜಾನವಿ ಎ.

ಮೃದು, ಸೂಕ್ಷ್ಮ, ಪ್ರಬುದ್ಧ, ಶಾಂತ, ಕರುಣೆ, ಜ್ಞಾನೆ... ಅಂತೆಯೇ ಕಠಿಣ, ಧೈರ್ಯ, ಅಶಾಂತ, ಹಾಗೂ ವಿಶ್ವಾಸದ ಸಂಕೇತ... ಸುಖ ನೀಡುವ ಆಟಿಕೆ ಮತ್ತು ಪುರುಷನಿಗೊಬ್ಬಳು ಸೇವಕಿ... ಮಗಳು, ತಾಯಿ, ಹೆಂಡತಿ, ಗೆಳತಿ, ಪಾಲಕಿ, ಮತ್ತು... ಹೆಚ್ಚಿದ ಜವಾಬ್ದಾರಿ, ಅಮಂಗಳದ ಸಂಕೇತ, ಆರ್ಥಿಕ ಹೊರೆ.

ನಾನು ಪದಗಳಲ್ಲಿ ಬಳಸಲು ಶಕ್ತಳಾದ ಮಹಿಳೆಯ ಕೆಲವು ಚಿತ್ರಗಳಿವು. ಪ್ರಪಂಚದ ಪ್ರತಿಯೊಬ್ಬ ಮಹಿಳೆಯ ಬದುಕಿನ ಚಿತ್ರಣವೂ ಹೀಗೇ ಸಾಗುತ್ತಿರುತ್ತದೆ. ಇಂದು ಮಹಿಳೆಯ ಬಗ್ಗೆ ಜನರು ದಿನವೆಲ್ಲಾ ಮಾತನಾಡುತ್ತಾರೆ, ಚಿಂತಿಸುತ್ತಾರೆ. ಲಿಂಗಭೇದದ ವಿರುದ್ಧದ ಹೋರಾಟ, ಸಮಾನತೆ ಗಳಿಸಲು ಮಾಡುತ್ತಿರುವ ಪ್ರಯತ್ನ ಎಲ್ಲವೂ ಮುಗಿಯುವಂತೆಯೇ ಕಾಣುವುದಿಲ್ಲ. ಇದಕ್ಕೆ ಯಾವ ಉತ್ತರವೂ ಸಿಕ್ಕಂತಿಲ್ಲ, ಅದರ ಕುರಿತಾಗಿ ಸಮಯ ವ್ಯರ್ಥ ಮಾಡುವುದು ಬೇಡ. ನಾವು ನೀವು ಮಾಡಬಹುದಾದುದೇನೆಂದರೆ ಎಲ್ಲಿ ಬದಲಾವಣೆ ಬೇಕಾಗಿದೆ, ಯಾರಿಂದ ಹಾಗೂ ಹೇಗೆ, ಮತ್ತು ಅದರ ಸಾಧ್ಯತೆಗಳ ಕುರಿತಾಗಿ ಕೆಲವು ನಿಮಿಷಗಳ ಕಾಲ ಚಿಂತನೆಗೆ ನಮ್ಮನ್ನು ಒಡ್ಡಿಕೊಳ್ಳುವುದು. ಈ ಬದಲಾವಣೆ ನಮ್ಮಿಂದಲೆ ಮೊದಲು ಪ್ರಾರಂಭವಾಗಬೇಕು ಎಂದು ನಮಗೆ ಅನಿಸಿದರೆ ನಾವು ಸರಿಯಾದ ಮಾರ್ಗದಲ್ಲಿದ್ದೇವೆಂದು ಖಚಿತ.

ಈ ಪ್ರಕ್ರಿಯೆಯಲ್ಲಿ ನಾವು ಒಬ್ಬರಿಗೊಬ್ಬರು ನೆರವಾಗಬೇಕು, ಬದಲಾವಣೆಯನ್ನು ತರಲಾಗದಿದ್ದರೂ ಬದಲಾಗುವ ಆಸೆಯನ್ನಾದರೂ ತರಬೇಕು. ನಾವೆಲ್ಲರೂ ಸೇರಿದಂತೆ ಯಾವುದೇ ಸಾಮಾನ್ಯ ಹುಡುಗಿ ಎದುರಿಸುವ ಸಣ್ಣ ಪುಟ್ಟ ಸನ್ನಿವೇಶಗಳನ್ನು ನೋಡೋಣ. ನಾವು ಇತರರನ್ನು ನಿಂದಿಸುವಾಗ ಅನಾಗರೀಕ ಪದಗಳನ್ನು ಉಪಯೋಗಿಸಿ ಅವರಿಗೇ ನೇರವಾಗಿ ಹೇಳುತ್ತೇವೆಯೇ ಅಥವಾ ಅವರ ತಾಯಿ ಅಥವಾ ಸಹೋದರಿಯ ಕುರಿತಾಗಿ ನಿಂದಿಸಿ ಅವರ ಸುಪ್ತ ಮನಸ್ಸಿನ ಮೇಲೆ ಪರಿಣಾಮ ಬೀರುವಂತೆ ಮಾಡುತ್ತೇವೆಯೇ? ಅಶ್ಲೀಲವಾಗಿ ನಿಂದಿಸುವಾಗ ಯಾವಾಗಲೂ ತಾಯಿಯನ್ನೇ ಏಕೆ ಗುರಿಪಡಿಸುತ್ತೇವೆ?

ಅಳುವುದು ಹೆಣ್ಣುಮಗುವಿನ ಸ್ವಭಾವ ಎನ್ನುವ ಮೂಢನಂಬಿಕೆಯನ್ನು ಗಂಡುಮಗುವಿನ ಮೇಲೆ ಹೇರಲಾಗುತ್ತಿದೆ. ಆದ್ದರಿಂದ ಹುಡುಗರು ತಮ್ಮ ಮಾನವ ಭಾವಗಳನ್ನು ಮುಚ್ಚಿಟ್ಟು ಸಮಾಜ ಹೊರಿಸುತ್ತಿರುವ ಪುರುಷ ಸ್ವಭಾವಗಳನ್ನು ಅಳವಡಿಸಿಕೊಳ್ಳಬೇಕೆ? ಮಗುವಿನ ಹುಟ್ಟಿಗೆ ತಾಯಿ ಹಾಗೂ ತಂದೆ ಇಬ್ಬರೂ ಸಮಾನ ಜವಾಬ್ದಾರಿಯಾದರು ಮಗುವಿನ ಪಾಲನೆಯನ್ನು ತಾಯಿಯೇ ಮಾಡಬೇಕೆಂದು ಸಮಾಜ ಒತ್ತಾಯಿಸುತ್ತದೆ. ನಮ್ಮ ನಮ್ಮ ಮನೆಗಳಲ್ಲಿಯೇ ಎಷ್ಟು ಜನ ಗಂಡಸರು ತಾವಾಗಿಯೇ ಮನೆಗೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ? ಹಾಗೊಂದು ವೇಳೆ ತೊಡಗಿಸಿಕೊಂಡರೂ ಎಷ್ಟು ಜನ ಅದನ್ನು ಒಪ್ಪಿಕೊಳ್ಳುತ್ತಾರೆ?



ಡ್ರೆಸ್ ಕೋಡ್ ಎಂಬುವುದು ಮಹಿಳೆಯ ಮೇಲೆಯೇ ಏಕೆ ಗಮನ ಹರಿಸುತ್ತದೆ? ಮಹಿಳೆಯ ದೇಹ ಒಂದು ರಹಸ್ಯ ಎಂದು ನಾವು ಒಪ್ಪಿಕೊಳ್ಳಬೇಕೇ?

ಇವೆಲ್ಲಾ ಸಾಧಾರಣವಾದ, ಯಾವುದೇ ಇತರ ಘಟನೆಯಷ್ಟೇ ಸಾಮಾನ್ಯವಾದ ಕೆಲವೇ ಕೆಲವು ಉದಾಹರಣೆಗಳು. ಆದರೆ ಇಂತಹ ಘಟನೆಗಳೆ ಮಹಿಳೆಯನ್ನು ಸಮಾಜದಲ್ಲಿ ಸಮಾನವಾಗಿ ನಿಲ್ಲಲು ಅಡ್ಡಿಪಡಿಸುತ್ತವೆ. ಇಂತಹ ಚಿಕ್ಕ ವಿಷಯಗಳೇ ಪುರುಷಪ್ರಧಾನ ವ್ಯವಸ್ಥೆಯನ್ನು ಬಲಪಡಿಸುತ್ತವೆ.

ಪುರುಷ ಮತ್ತು ಮಹಿಳೆಯನ್ನು ಬೇರ್ಪಡಿಸುವ ಒಂದೇ ಅಂಶವೆಂದರೆ ಅವರ ನಡುವಿನ ದೈಹಿಕ ಹಾಗೂ ಜೈವಿಕ ವ್ಯತ್ಯಾಸಗಳು, ಅದನ್ನು ಬಿಟ್ಟರೆ ಎರಡೂ ಜೀವಗಳ ಭಾವನಾತ್ಮಕ ಸ್ಥಿತಿ ಒಂದೆ ಆಗಿರುತ್ತದೆ ಎಂಬುದನ್ನು ಪ್ರತಿಯೊಬ್ಬರೂ ಅರಿಯಬೇಕಾಗುತ್ತದೆ.

ಸಮಾಜದ ಕಟ್ಟುಪಾಡುಗಳಲ್ಲಿ ನಮ್ಮೆಲ್ಲರ ಕೊಡುಗೆಯೂ ಇದೆ. ಎಲ್ಲಾ ಪೋಷಕರೂ ತಮ್ಮ ಮಕ್ಕಳಲ್ಲಿ ಲಿಂಗಭೇದ ಮಾಡುವುದನ್ನು ನಿಲ್ಲಿಸಬೇಕು, ಎಲ್ಲಾ ಪುರುಷರೂ ಮಹಿಳೆಯ ಸಾಮರ್ಥ್ಯವನ್ನು ಅರಿಯಬೇಕು. ಹಾಗೂ ಎಲ್ಲಾ ಮಹಿಳೆಯರೂ ಅವರ ಜೀವನವನ್ನು ಅವರ ಹಕ್ಕೆಂಬಂತೆ ಭಾವಿಸಿ ಬದುಕಬೇಕು. ಹಾಗಾದಾಗ ಸಮಾಜ ಕೇವಲ ಶೈಕ್ಷಣಿಕ ಹಾಗೂ ಚಿಂತನಾತ್ಮಕ ಬೆಳವಣಿಗೆಯ ಬಗ್ಗೆ ಮಾತ್ರ ಗಮನ ಹರಿಸುತ್ತದೆ. ಮಹಿಳೆಯರು ಎದುರಿಸುತ್ತಿರುವ ಸ್ಥಿತಿಗಾಗಿ ನಾನು ಪುರುಷರನ್ನು ನಿಂದಿಸುತ್ತಲೂ ಇಲ್ಲ. ನಾನು ಹೇಳಬಯಸುವುದೇನೆಂದರೆ ಹೌದು, ನಾನೊಬ್ಬ ಮಹಿಳೆ, ಹಾಗೇ ನಿಮ್ಮಂತೆ ನಾನೊಬ್ಬ ಜೀವಿ. ಇವೆಲ್ಲಾ ಅಷ್ಟು ಸರಳವಲ್ಲ ಎಂದು ನನಗೆ ತಿಳಿದಿದೆ, ಆದರೆ ಇದು ಬದಲಾಯಿಸಲು ಅಸಾಧ್ಯವಾದುದೇನೂ ಅಲ್ಲ ಎಂದು ನನಗೆ ಭರವಸೆಯಿದೆ. ನಾವೆಲ್ಲರೂ ಒಂದಾಗಿ ಬದಲಾವಣೆಯತ್ತ ಹೆಜ್ಜೆಯಿಡೋಣ. ❑

ಭದ್ರತೆಯೇ?...
ಶೋಷಣೆಯೇ?

■ ದಿಶಾ ಕೆ.ಆರ್.

ಗೌರಮ್ಮನಿಗೀಗ 28 ವರ್ಷ. ಮದುವೆಯಾದ 10 ವರ್ಷದಲ್ಲೇ 6 ಮಕ್ಕಳ ತಾಯಿ. ತನ್ನ 18ನೇ ವಯಸ್ಸಿನಲ್ಲಿ ಮದುವೆಯಾಗಿ ಗಂಡನ ಜೊತೆ ಒಂದು ಪುಟ್ಟಹಳ್ಳಿಯಲ್ಲಿ ವಾಸಮಾಡುತ್ತಿರುವ ಗೌರಮ್ಮ ಬಡವಿ. ಗಂಡನಿಗೆ ಹಾಗೂ ಗಂಡನ ಮನೆಯವರಿಗೆ ಗಂಡುಮಗುವಿನ ಮೋಹ. ಗೌರಮ್ಮನ ನತದೃಷ್ಟವೆಂಬಂತೆ 5 ಹೆಣ್ಣುಮಕ್ಕಳಾದ ನಂತರ 6ನೇಯ ಮಗು ಗಂಡಾಗಿದ್ದಕ್ಕೆ ಇನ್ನೂ ಮುಂದುವರೆಯಬಹುದಾಗಿದ್ದ ಗರ್ಭಧಾರಣೆಯಿಂದ ಪಾರಾದಳು.

ಪ್ರತಿ ಬಾಣಂತನದಲ್ಲೂ ಮೊದಲ ತಿಂಗಳಿಗೆ ಮನೆಕೆಲಸ ಮಾಡಲು ಶುರುಮಾಡಿದ ಗೌರಮ್ಮನ ಗರ್ಭಕೋಶ ಜಾರುವ ಸಾಧ್ಯತೆಗಳು ಹೆಚ್ಚಾದವು. ಆಕೆ ಒಂದರ ನಂತರ ಒಂದರಂತೆ ಆಗುತ್ತಿದ್ದ ಗರ್ಭಧಾರಣೆಯನ್ನು ನಿರ್ಲಕ್ಷಿಸತೊಡಗಿದಳು. ಗರ್ಭಧಾರಣೆಯ ಸಂದರ್ಭದಲ್ಲಿ ಪೌಷ್ಟಿಕ ಆಹಾರದ ಕೊರತೆಯಿಂದ ಆಕೆಯ ಇಬ್ಬರು ಹೆಣ್ಣುಮಕ್ಕಳಲ್ಲಿ IUGR (Intra uterine growth retardation) ಎಂಬ ಕಾಯಿಲೆ ಕಂಡುಬಂದಿದೆ. ಒಬ್ಬ ಮಗಳು IUGRನಿಂದಾಗಿ ಕಡಿಮೆ ತೂಕ ಹೊಂದಿದ್ದಾಳೆ ಹಾಗೂ ಮತ್ತೊಬ್ಬಳ ಮೆದುಳಿನ ಒಂದು ಭಾಗ ಸಂಪೂರ್ಣ ಬೆಳವಣಿಗೆ ಹೊಂದಿಲ್ಲ.

ಆರು ಮಕ್ಕಳಾದ ನಂತರ ಈಗ ಗೌರಮ್ಮನ ಗರ್ಭಕೋಶ ಜಾರಿದೆ. ಆಕೆಯ ತೊಡೆಗಳ ಮಧ್ಯೆ ಜಾರಿರುವ ಗರ್ಭಕೋಶವನ್ನು ಕಂಡು ಗೌರಮ್ಮ ದಿಗ್ಭ್ರಾಂತಳಾಗಿದ್ದಾಳೆ. ಇದರಿಂದಾಗಿ ಆಕೆಗೆ ಓಡಾಡಲು ಕಷ್ಟವಾಗುತ್ತಿದೆ, ಗರ್ಭಕೋಶದ ವಾಸನೆ ಹರಡುತ್ತಿದೆ, ಯಾವುದೇ ಕೆಲಸ ಮಾಡಲಿಕ್ಕಾಗುತ್ತಿಲ್ಲ. ಗೌರಮ್ಮನಿಗೆ ಇದು ನಿತ್ಯದ ನರಕಯಾತನೆಯಾಗಿದೆ. ಈ ನರಕಯಾತನೆಯಲ್ಲೇ ಸರಕಾರಿ ಆಸ್ಪತ್ರೆಗೆ, ಗರ್ಭಕೋಶವನ್ನು ತೆಗೆಸಿಕೊಳ್ಳಲು ಓಡಾಡುತ್ತಿದ್ದಾಳೆ.

ಶಾಂತಳಿಗೆ ಈಗ ಕೇವಲ 22 ವರ್ಷ. ಬಡಕುಟುಂಬದಲ್ಲಿ ಜನಿಸಿದ ಶಾಂತಳನ್ನು 14ನೇ ವಯಸ್ಸಿಗೆ ಮದುವೆ ಮಾಡಿಕೊಟ್ಟರು. ಆಕೆಗಿಂತ 15 ವರ್ಷ ದೊಡ್ಡವನಾದ ಆಕೆಯ ಗಂಡ ಲಾರಿ ಚಾಲಕ. ಶಾಂತಳಿಗೆ ಇಬ್ಬರು ಮಕ್ಕಳು ಒಂದು ಗಂಡು ಒಂದು ಹೆಣ್ಣು. ಗಂಡನಿಗೆ ಕುಡಿತದ ಚಟ. ಸಂಸಾರಕ್ಕೆ ಶಾಂತ ಅವರಿವರ ಮನೆಯಲ್ಲಿ ಮಾಡುತ್ತಿದ್ದ ಮನೆಗೆಲಸವೇ ಆಧಾರ. ಆರು ತಿಂಗಳಿಗೊಮ್ಮೆಯಷ್ಟೇ ಮನೆಗೆ ಬರುತ್ತಿದ್ದ ಗಂಡ ಇರುತ್ತಿದ್ದದ್ದು ಕೇವಲ ಒಂದು ವಾರವಷ್ಟೇ, ಆ ಸಮಯದಲ್ಲಿ ಶಾಂತಳ ಗಂಡ ಆಕೆಯೊಂದಿಗೆ ಬಲವಂತವಾಗಿ ಲೈಂಗಿಕ ಸಂಪರ್ಕ ಹೊಂದುತ್ತಿದ್ದ.

ಶಾಂತಳ ಆರೋಗ್ಯದಲ್ಲಿ ಬದಲಾವಣೆಗಳು ಕಂಡುಬಂದವು. ಇತ್ತೀಚೆಗೆ ನಿದ್ದೆಯ ಕೊರತೆ, ಸುಸ್ತು, ಬೆವರುವುದು, ತೂಕ ಕಡಿಮೆಯಾಗುತ್ತಿದ್ದದ್ದನ್ನು ಶಾಂತಳಿಗೆ ನಿರ್ಲಕ್ಷಿಸಲಾಗಲಿಲ್ಲ. ಈ ಸಮಸ್ಯೆಯನ್ನು ತೋರಿಸಿಕೊಳ್ಳಲು, ಆಸ್ಪತ್ರೆಗೆ ಹೋದವಳು ಆಕೆಗೆ AIDS ಇದೆಯೆಂದು ತಿಳಿದ ಕೂಡಲೇ ಗರಬಡಿದವಳಂತಾದಳು. ಮಕ್ಕಳಿಗೂ ಇರುವ ಸಾಧ್ಯತೆಗಳು ಹೆಚ್ಚೆಂದು ಡಾಕ್ಟರ್ ಹೇಳಿದೊಡನೆ ಆಕೆ ಮಕ್ಕಳನ್ನು ಪರೀಕ್ಷೆಗೆ ಕರೆತಂದಳು. ಆಕೆಯ ಮಕ್ಕಳಿಬ್ಬರಿಗೂ HIV ಇರುವುದು ಪತ್ತೆಯಾಗಿದೆ.


ಸ್ಮಿತಾ ಒಂದು ದೊಡ್ಡ ಎಂ.ಎನ್.ಸಿಯಲ್ಲಿ ಸಾಫ್ಟ್‌ವೇರ್ ಡೆವಲಪರ್ ಆಗಿ ಕೆಲಸಮಾಡುತ್ತಿದ್ದಾಳೆ. ತಿಂಗಳಿಗೆ 80 ಸಾವಿರ ಸಂಭಾವನೆ. ಮದುವೆಯಾಗಿ 4 ವರ್ಷಗಳಾಗಿವೆ. 8 ವರ್ಷ ಪ್ರೀತಿಸಿ ನಂತರ ಮದುವೆಯಾದ ಇಬ್ಬರು ಮೊದಲಿನಿಂದಲೇ ಲೈಂಗಿಕ ಸಂಪರ್ಕ ಹೊಂದಿದ್ದರು. ಕೆರಿಯರ್ ಮುಖ್ಯವೆಂದು ವಾದಿಸುತ್ತಿದ್ದ ಆಕೆಯ ಗಂಡ ಮದುವೆಗೂ ಮೊದಲು ಹಾಗೂ ಮದುವೆಯ ನಂತರ *ಕಾಂಟ್ರಾಸೆಪ್ಟಿವ್*ನ ಬಳಕೆಯನ್ನು ವಿರೋಧಿಸಿದ. ಇದರಿಂದಾಗಿ ಸ್ಮಿತ ಮದುವೆಯ ಮೊದಲೇ ಎರಡು ಬಾರಿ ಗರ್ಭಪಾತ ಮಾಡಿಸಿಕೊಳ್ಳಬೇಕಾಯಿತು. ಒಂದು ದೊಡ್ಡ ಕಂಪನಿಯಲ್ಲಿ 1 ಲಕ್ಷ ಸಂಭಾವನೆ ಪಡೆಯುತ್ತಿರುವ ಆತ ಆ ಕಂಪನಿಯ ಮ್ಯಾನೇಜರ್ ಆಗುವವರೆಗೂ ಮಕ್ಕಳು ಬೇಡವೆಂದು ಸ್ಮಿತಾಳಿಗೆ ಮತ್ತೆರಡು ಬಾರಿ ಗರ್ಭಪಾತ ಮಾಡಿಸಿದ. ಆಕೆಯ ಗರ್ಭಕೋಶ 4 ಗರ್ಭಪಾತಗಳಿಂದ ಕುಗ್ಗಿಹೋಯಿತು. ನಂತರ ಮಕ್ಕಳು ಬೇಕೆಂದು ಬಯಸಿದ ಸ್ಮಿತಾಳಿಗೆ ಮಕ್ಕಳಾಗುವ ಸಾಧ್ಯತೆಯೇ ಇಲ್ಲವಾಯಿತು.

ಮಹಿಳಾ ಚಳವಳಿಯ 100ನೇ ವರ್ಷದಲ್ಲೂ ಇಂತಹ ಘಟನೆಗಳು ಕಂಡುಬರುತ್ತಿರುವುದು ಸಾಮಾಜಿಕ ಅವಮಾನ. ಆಧುನಿಕ ಸಮಾಜದಲ್ಲಿ ಮಹಿಳಾ ಸಾಧನೆಯ ಸಾಧ್ಯಾಸಾಧ್ಯತೆಗಳು ಹೆಚ್ಚಿದ್ದರೂ ಮಹಿಳೆಯ ವೈಯಕ್ತಿಕ ಜೀವನದಲ್ಲಿ ಪಿತೃಪ್ರಧಾನವಾದಂತಹ ಕೌಟುಂಬಿಕ ಚೌಕಟ್ಟುಗಳು ಮಹಿಳೆಯಿಂದ ತನ್ನ ದೇಹದ ಮೇಲಿನ ಹಕ್ಕು, ಸಂತಾನೋತ್ಪತ್ತಿಯ ಹಕ್ಕು ಹಾಗೂ ಆಯ್ಕೆಯಂತಹ ಮೂಲಭೂತವಾದ ಹಕ್ಕುಗಳನ್ನೇ ಕಿತ್ತುಕೊಳ್ಳುತ್ತಿರುವುದು ಎಷ್ಟರ ಮಟ್ಟಿಗೆ ಸರಿ?

ನಮ್ಮ ಸಮಾಜದಾದ್ಯಂತ ಒಬ್ಬ ಮಹಿಳೆ ಅಕ್ಷರಸ್ಥಳಾಗಿದ್ದರೂ ಅನಕ್ಷರಸ್ಥಳಾಗಿದ್ದರೂ ಮೂಲಭೂತವಾಗಿ ಎದುರಿಸುತ್ತಿರುವ ಸಮಸ್ಯೆ ಒಂದೇಯಾಗಿದೆ. ಸಮಾಜದಲ್ಲಿ ಮಹಿಳೆಗೆ ಭದ್ರತೆಯನ್ನು ನೀಡುವುದಾಗಿ ನಂಬಿರುವ ಕೌಟುಂಬಿಕ ವ್ಯವಸ್ಥೆಯೇ ಶೋಷಣೆಯ ಮೂಲವಾಗಿ, ಗಂಡನಿಂದಲೇ ಶೋಷಣೆಗೊಳಗಾಗುತ್ತಿರುವ ಮಹಿಳೆಗೆ ಭದ್ರತೆಯಾದರೂ ಎಲ್ಲಿದೆ?

ಮಹಿಳೆಯರಿಗೆ ಸಂತಾನೋತ್ಪತ್ತಿಯ ಹಕ್ಕು, ಆಯ್ಕೆ ಹಾಗೂ ತಮ್ಮ ದೇಹದ ಮೇಲಿನ ಹಕ್ಕು ಸಿಗದಿದ್ದರೆ ಪಿತೃಪ್ರಧಾನ ಮೌಲ್ಯಗಳೊಂದಿಗೆ ಸಾಂಸ್ಥೀಕರಣಗೊಂಡಿರುವ ಕುಟುಂಬಗಳಲ್ಲಿ ಇಂದು ಮಹಿಳೆಯರು ಬದುಕುವುದು ಅಸಾಧ್ಯವಾಗಿದೆ. ❑





ಸೇಫ್ಟಿ ಪಿನ್

■ ಗಿರಿಜಾಶಾಸ್ತ್ರಿ

ಅರವತ್ತು ಸಮೀಪಿಸುತ್ತಿರುವ ಅಕ್ಕ
ಈಗ ಥೇಟ್ ಅಮ್ಮನಂತೆಯೇ ಆಗಿಬಿಟ್ಟಿದ್ದಾಳೆ
ಮೊಗೆ ಮೊಗೆದು ನೀಡುವಾಗಲಂತೂ
ಅವಳದೇ ಛಾಪು ಬಡಿಸಲು ಬಗ್ಗುವಾಗೆಲ್ಲಾ
ಅವಳ ತಾಳಿ ಸರ ತೂಗಾಡುತ್ತದೆ
ಜೊತೆಗೆ ಐದಾರು ಸೇಫ್ಟಿ ಪಿನ್ನುಗಳೂ

ಜಮದಗ್ನಿಯ ಕೈ ಹಿಡಿದವಳು
ಕಲ್ಲಾಗಿ ಎಲ್ಲಮ್ಮನಾಗಲಿಲ್ಲ ಬೆತ್ತಲೆ ಸೇವೆ ಬೇಡಲಿಲ್ಲ
ಭಕ್ತರು ಭಂಡಾರ ಹಚ್ಚಿ ಹುಟಗಿ ಉಟ್ಟು ಸಾಲು ನಿಲ್ಲಲಿಲ್ಲ
ರೋಷಾವೇಷದ ಅಗ್ನಿಯೊಳಗೆ
ಸುಟ್ಟು ಕರಕಾಗಿ
ಹರಿದ ನೀರಿನೊಳಗೆ ಹರಿದು ಹೋಗಲೂ ಇಲ್ಲ.
ನಿಂತೇ ನಿಂತಳು ಹುಲ್ಲಾಗಿ
ಬೆಟ್ಟದಡಿ
ಕಾಲನ ಆವೇಶಕ್ಕೆ ಸಾಕ್ಷಿಯಾಗಿ

✦ ✦ ✦

ಪಕ್ಕೆಗೆ ರೆಕ್ಕೆ ಕಟ್ಟಿಕೊಂಡು ಅಕ್ಕ
ಹೇಗೆ ಹಾರುತ್ತಿದ್ದಳು ಕಾಲೇಜು ಕಾರಿಡಾರುಗಳಲ್ಲಿ
ವಾರದ ಕೊನೆಯೆಂದರೆ ಏನೋ ಲಗುಬಗೆ
ದಿನವಿಡೀ ಗರಿಗರಿ ಗಂಜಿ ಇಸ್ತ್ರಿ ಮಾಡಿ ಸೀರೆಗೆ
ಹೀಲ್ಡು ಚಪ್ಪಲಿ ಹಾಕಿಯೇ ಅದನ್ನುಟ್ಟು
ಕಣ್ಣಿಗೆ ಬೇರೆ ದೊಡ್ಡ ತಂಪು ಕನ್ನಡಕ ತೊಟ್ಟು
ಗರಿಗೆದರಿ ಹಾರಿದಳೆಂದರೆ ಬೀದಿಗೆ
ಪಡ್ಡೆ ಹುಡುಗರ ಪಡೆಯೇ ಹಿಂದುಮುಂದೆ
ಧಿಗ್ಗಡ ದಿಮ್ಮಿಯೆಂದು
ಎಲ್ಲ ಬೈದದ್ದು ಎಷ್ಟು ಸಲ

ಎರೆದುಕೊಂಡ ತಲೆಗೂದಲ ರಾಶಿ ಬೆನ್ನಮೇಲೆ
ಹರಿಯಬಿಟ್ಟು
ನೀಳ ಬೆರಳುಗಳನ್ನು ಮೃದುವಾಗಿ ಮೇಜಿನ ಮೇಲಿಟ್ಟು
ತುಸುವೇ ಬಗ್ಗಿ ಹಗೂರ ಉಗುರ ಸಮ ಕತ್ತರಿಸಿ

ನಯವಾಗಿ ಬಣ್ಣ ಬಳಿದು
ಉಫ್ ಊದುತ್ತಾ ಅದನ್ನೇ ನೋಡುತ್ತಾ ಪ್ರೀತಿಯಿಂದ
ಕೂರುವುದೆಂದರೆ ಅವಳಿಗೆ ಎಷ್ಟು ಇಷ್ಟ.

ಮನೆಗೆ ಟೂಥ್ ಬ್ರಷ್ ಬಂದದ್ದೇ ಅವಳಿಂದಾಗಿ
ಎರೆಡೆರಡು ಸಲ ಕಾಲ್ಗೇಟ್ ಉಜ್ಜಿ
ಕನ್ನಡಿಯಲ್ಲಿ ಹಲ್ಲು ಫಳ ಫಳಿಸಿ ನಿಲ್ಲುವಾಗ
ದಿಮಾಕಿನವಳೆಂದು ಅಮ್ಮ ಬೈದದ್ದು
ಎಂದೂ ಕಿವಿಗೆ ಹಾಕಿಕೊಂಡವಳೇ ಅಲ್ಲ.

ಈಗ ಅರವತ್ತು ಸಮೀಪಿಸುತ್ತಿರುವ ಅಕ್ಕ
ಅಮ್ಮನಂತೇ ಆಗಿಬಿಟ್ಟಿದ್ದಾಳೆ
ಮೂವತ್ತೈದು ಶಿಶಿರ ಕಂಡ ದಾಂಪತ್ಯ
ಈಗಲೂ ತೂಗುತ್ತಿದೆ ಅವಳ ತಾಳಿಸರದಲ್ಲಿ
ಐದೋ ಆರೋ ಸೇಫ್ಟಿ ಪಿನ್ನುಗಳು
ಎಲ್ಲ ಜಂಗು ಹಿಡಿದವುಗಳು.

❑



ಮುರುಟುತ್ತಿರುವ ಮೊಗ್ಗುಗಳು; ನಾಚಿಕೆಗೇಡಿನ ಸಂಗತಿಗಳು

■ ಶಾರದಾ ಗೋಪಾಲ
ಧಾರವಾಡ

ರಾಜ್ಯದಲ್ಲಿ ಮಕ್ಕಳ ಅಪೌಷ್ಟಿಕತೆಯ ಬಗ್ಗೆ ಎನ್. ಉದಯಕುಮಾರ್ ಅವರ ವರದಿ ಬಂದ ಹಿನ್ನೆಲೆಯಲ್ಲೇ 'ಪೌಷ್ಟಿಕತೆಗಾಗಿ ನಾಗರಿಕ ಒಕ್ಕೂಟವು' ಸಿದ್ದಪಡಿಸಿದ 'ಹಸಿವು ಮತ್ತು ಅಪೌಷ್ಟಿಕತೆ' ವರದಿಯನ್ನು ದೇಶದ ಪ್ರಧಾನಿಯವರು ಬಿಡುಗಡೆ ಮಾಡಿ ದೇಶದಲ್ಲಿ ನೂರಕ್ಕೆ 42 ಮಕ್ಕಳು ಅಪೌಷ್ಟಿಕತೆಯಿಂದಿರುವುದು ನಾಚಿಕೆಗೇಡಿನ ವಿಚಾರ ಎಂದಿದ್ದಾರೆ. ಇದು ಪ್ರಧಾನಿಯವರ ಮೆಲುನುಡಿಯ ತುಟಿಯಂಚಿನ ಮಾತಷ್ಟೇ ಆಗಿರದೆ ಹೃದಯದಾಳದಿಂದ ಬಂದ ಮಾತಾಗಿರಲಿ ಎಂದು ನಾನು ಆಶಿಸುತ್ತೇನೆ.

ಯಾಕೆಂದರೆ ಆಹಾರ ಭದ್ರತಾ ಕರಡು ಮಸೂದೆಯನ್ನು ಪಾರ್ಲಿಮೆಂಟಿನ ಮುಂದೆ ಇಟ್ಟುಕೊಂಡಿರುವ ದಿನಗಳಿವು. ಯುಪಿಎ ಸರಕಾರಕ್ಕೆ ನಾಲ್ಕು ವರ್ಷಗಳಾಗಿದ್ದರೂ, ಎರಡು ಅಧಿವೇಶನಗಳು ಕಳೆದರೂ, ಚುನಾವಣಾ ಆಶ್ವಾಸನೆಯಾದ ಆಹಾರ ಭದ್ರತಾ ಮಸೂದೆ ಇನ್ನೂ ಗಂಟಲಿನಿಂದ ಹೊರಗೆ ಬರುತ್ತಿಲ್ಲ. ಪಡಿತರವನ್ನು ಸಾರ್ವತ್ರಿಕಗೊಳಿಸಲು ಸಾಕಷ್ಟು ಹಣವಿಲ್ಲ ಎನ್ನುವ ಶರದ್‌ಪವಾರರಂಥ ಮಂತ್ರಿಗಳ ಹೇಳಿಕೆಗಳು, ಮಸೂದೆಯೊಳಗಿನ 'ಆಹಾರದ ಬದಲಿಗೆ ಹಣ ಕೊಡುವಂಥ' ವಿಚಾರಗಳು, ದೇಶದ ಮಕ್ಕಳನ್ನು ಅಪೌಷ್ಟಿಕತೆಯಿಂದ ಪೌಷ್ಟಿಕತೆಯತ್ತ ಕೊಂಡೊಯ್ಯುವ ಯಾವುದೇ ಹೆಜ್ಜೆಯಾಗಿ ಕಾಣಿಸುತ್ತಿಲ್ಲ. ಒಂದು ಕರಡು ಮಸೂದೆಯನ್ನು ತಯಾರು ಮಾಡಲಿಕ್ಕೇ ಮೂರು ವರ್ಷಗಳು ಹಿಡಿದವು, ಅದೂ ಅಮರ್ತ್ಯಸೇನ್, ಅರುಣಾ ರಾಯ್, ಜೀನ್ ಡ್ರೀಝ್‌ರಂತಹ ಸಾಮಾಜಿಕ ತಜ್ಞರು, ರಾಷ್ಟ್ರ ಮಟ್ಟದ ಸಂಘಟನೆಗಳು, ಮತ್ತೆ ಮತ್ತೆ ಅಪೌಷ್ಟಿಕತೆಯ ಬಗ್ಗೆ ಹೇಳುತ್ತಿರುವಾಗಲೂ ಕೂಡ ಈ ಕರಡು ಮಸೂದೆಯು ವಾಸ್ತವಿಕತೆಯಿಂದ ರಹದಾರಿ ದೂರ ಇದೆ.

ಅಪೌಷ್ಟಿಕತೆ ಹೋಗಲಾಡಿಸಲು ಎಲ್ಲ ಇಲಾಖೆಗಳೂ ಒಗ್ಗಟ್ಟಾಗಿ ಶ್ರಮಿಸಬೇಕೆಂದು ಪ್ರಧಾನ ಮಂತ್ರಿಗಳೇನೋ ಕರೆ ಇತ್ತಿದ್ದಾರೆ. ಆದರೆ ಇಲಾಖೆ-ಇಲಾಖೆಗಳೆಂದರೆ ಆಹಾರ-ಮಕ್ಕಳು-ತಾಯಂದಿರು-ಆರೋಗ್ಯಕ್ಕೆ ಸಂಬಂಧಿಸಿದ ಇಲಾಖೆಗಳಷ್ಟೇ ಎಂದು ಅರ್ಥೈಸುವುದು ಮಾತ್ರ ಖೇದಕರ. ಮಕ್ಕಳಿಗೆ ತಾಯಂದಿರು ಮಾತ್ರ ಸಂಬಂಧವೇ? ಆರೋಗ್ಯ ಇಲಾಖೆ-ಸಮಗ್ರ ಶಿಶು ಅಭಿವೃದ್ಧಿ ಇಲಾಖೆಗಳು ಮಾತ್ರ ಹೊಂದಿಕೊಂಡು ಕೆಲಸ ಮಾಡಿದರೆ ಸಾಕೆ? ಹಣಕಾಸು, ಅರಣ್ಯ, ಪರಿಸರ, ಇವೆಲ್ಲ ಇಲಾಖೆಗಳ ಸಮನ್ವಯತೆ ಬೇಡವೇ? ಗಣಿಗಾರಿಕೆ, ಕೈಗಾರಿಕೆ, ಉದ್ಯೋಗ ಇವಕ್ಕೆಲ್ಲ ಸಂಬಂಧಿಸಿದ ರಾಷ್ಟ್ರೀಯ ನೀತಿಗಳು ದೇಶದ ಜನರ, ಮಹಿಳೆಯರ, ಮಕ್ಕಳ ಆರೋಗ್ಯ, ಅಪೌಷ್ಟಿಕತೆಗಳ ಮೇಲೆ ಯಾವ ಪರಿಣಾಮ ಬೀರುತ್ತವೆ ಎಂದು ಸಂಬಂಧಪಟ್ಟವರು ವಿಚಾರ ಮಾಡಿದ್ದಾರೆಯೇ?

ತಾಯಿ ಹಾಲಿನ ಕೊರತೆಯು ಅಪೌಷ್ಟಿಕ ಮಕ್ಕಳ ಸಂಖ್ಯಾ ಹೆಚ್ಚಳಕ್ಕೆ ಒಂದು ಕಾರಣವಾಗಿರಬಹುದು. ಆದರೆ ಆ ತಾಯಿಯ ಸ್ಥಿತಿ, ಇಡೀ ಕುಟುಂಬದ ಸ್ಥಿತಿ, ಸಮಾಜದ ಸ್ಥಿತಿ ಇವೆಲ್ಲವೂ ಮಕ್ಕಳ ಅಪೌಷ್ಟಿಕತೆಗೆ ಹೆಚ್ಚೆಚ್ಚು ಪುಷ್ಟಿ ಕೊಡುತ್ತವೆ ಎಂಬುದನ್ನು ನಾವು ಮರೆಯಲಾಗದು. ವಲಸೆ ಎಂಬುದು ಈಗ ಸಾಂಕ್ರಾಮಿಕ ರೋಗದಂತೆ ಎಲ್ಲೆಡೆ ವ್ಯಾಪಿಸಿದೆ. ಹೆಚ್ಚು ಹಣ ಕೊಡುವ ಉದ್ಯೋಗ ಅರಸಿ ಯುವ ಜನರು ಮನೆ ಬಿಟ್ಟು, ಹುಟ್ಟಿದೂರಿನ ರಕ್ಷಣಾ ವಾತಾವರಣವನ್ನು ಬಿಟ್ಟು ಹೊರಟಿದ್ದಾರೆ. ಬಾಲ್ಯ ವಿವಾಹ, ವರುಷದೊಳಗೆ ಬಸಿರು, ತಾಯ್ತನದ ಜವಾಬ್ದಾರಿಯ ಬಗ್ಗೆ ಇರದ ಅರಿವು ಈ ಪರಿಸ್ಥಿತಿಯಲ್ಲಿ ಕೆಲಸ ಅರಸಿ ಗಂಡ ದೂರ ಹೋಗುವುದು ಇವೆಲ್ಲವೂ ಆ ಪುಟ್ಟ ತಾಯಿಯ ಮೇಲೆ, ಅವಳು ಹೊತ್ತಿರುವ ಶಿಶುವಿನ ಮೇಲೆ ಯಾವ ಪರಿಣಾಮ ಮಾಡುತ್ತದೆ? ಇಟ್ಟಿಗೆ ಕಾರ್ಮಿಕರು, ಕಟ್ಟಡ ಕಾರ್ಮಿಕರು ಬದುಕುತ್ತಿರುವ ಟೆಂಟುಗಳ ಒಳಗೊಮ್ಮೆ ಇಣುಕಿ ನೋಡುವ ಧೈರ್ಯವನ್ನು ನಮ್ಮ ಧುರೀಣರು ತೋರಿಸಬೇಕು. ಆ ಕುಟುಂಬದ ಚಿತ್ರ ಇಡೀ ವ್ಯವಸ್ಥೆಗೆ ಹಿಡಿಯಬಹುದಾದ ಕೈಗನ್ನಡಿ. ದೇಶದ 50% ತಾಯಂದಿರು ಮಕ್ಕಳಿಗೆ

ಹಾಲೂಡುತ್ತಿಲ್ಲವೆಂದರೆ ಅದಕ್ಕೆ ಕಾರಣ ದೇಶದ 50% ತಾಯಂದಿರು ಇಂಥ ಪರಿಸ್ಥಿತಿಯಲ್ಲಿ ಜೀವಿಸುತ್ತಿರುವುದು. ಇವರು ಹಾಲೂಡಿದರೂ ಅಷ್ಟೇ, ಬಿಟ್ಟರೂ ಅಷ್ಟೇ. ತಮ್ಮ ದೇಹದಲ್ಲೇ ಪೌಷ್ಟಿಕ ಅಂಶಗಳಿಲ್ಲ ದಿರುವಾಗ ಆ ತಾಯಿ ಮಗುವಿಗೆ ಅದೇನನ್ನು ಉಣಿಸಬಲ್ಲಳು?

ಮಾನ್ಯ ಪ್ರಧಾನ ಮಂತ್ರಿಗಳು ಅಪೌಷ್ಟಿಕತೆಯ ನಾಚಿಕೆಗೇಡಿನ ವಿಚಾರದ ಮೇಲೆ ಮಾತಾಡುವುದಕ್ಕೂ ಎರಡು ವರ್ಷಗಳ ಮೊದಲೇ 2010ರಲ್ಲಿ ಬೆಂಗಳೂರಿನಲ್ಲಿ ನೂರಾರು ತಾಯಂದಿರ ಸಾರ್ವಜನಿಕ ಸಂವಾದ ಏರ್ಪಡಿಸಿ ಮಕ್ಕಳ ಹಕ್ಕುಗಳ ಆಯೋಗದ ಅಧ್ಯಕ್ಷರು, ಸುಪ್ರೀಂ ಕೋರ್ಟಿಗೆ ಆಹಾರದ ಸಲಹೆಗಾರರು ನೀಡಿದ ನಿರ್ಣಯ ಗಳನ್ನು ಸರಕಾರಕ್ಕೆ ಒಪ್ಪಿಸಲಾಗಿತ್ತು. ತದ ನಂತರ ಸಾಮಾಜಿಕ ಪರಿವರ್ತನಾ ಜನಾಂದೋಲನವು ರಾಯಚೂರು, ಕೋಲಾರ, ದಾವಣಗೆರೆಗಳಲ್ಲಿ ಚಿಕ್ಕ ಮಕ್ಕಳ ಸರ್ವೆ ನಡೆಸಿ, ಸರಕಾರದಿಂದ ಮಾಹಿತಿ ಸಂಗ್ರಹಿಸಿ ಈ ಜಿಲ್ಲೆಗಳಲ್ಲಿ ಸಾವಿರಾರು ಮಕ್ಕಳು ತೀವ್ರ ಅಪೌಷ್ಟಿಕತೆಯಿಂದ ಸಾವಿನ ಅಂಚಿನಲ್ಲಿ ಬದುಕುತ್ತಿರುವುದನ್ನು ಬಹಿರಂಗಗೊಳಿಸಿತ್ತು. ರಾಜ್ಯದಲ್ಲಿ 70,000ಕ್ಕೂ ಮಿಕ್ಕು ತೀವ್ರ ಅಪೌಷ್ಟಿಕ ಮಕ್ಕಳಿದ್ದಾರೆ ಎಂದು ಸರಕಾರವೇ ಒಪ್ಪಿಕೊಂಡಿತ್ತು. ವಿಷಯ ಕೋರ್ಟ್ ಮೆಟ್ಟಿಲೇರಿ ಸರಕಾರಕ್ಕೆ ಸಾಕಷ್ಟು ಛೀಮಾರಿ ಬಿದ್ದ ಮೇಲೆ ಅಲ್ಲಲ್ಲಿ ಒಂದಷ್ಟು ಬದಲಾವಣೆ ಗಳಾಗಿವೆ.

ಸಾಮಾಜಿಕ ಪರಿವರ್ತನಾ ಜನಾಂದೋಲನವು ಮಕ್ಕಳ ಅಪೌಷ್ಟಿಕತೆ ಯನ್ನು ಅನಾವರಣಗೊಳಿಸಿದಾಗ ಅದರ ಭೀಕರತೆಗೆ ಇಡೀ ರಾಜ್ಯದ ಜನತೆಯೇ ಬೆಚ್ಚಿ ಬಿದ್ದಿತು. ಆದರೆ ನಮ್ಮ ಸರಕಾರ ಮಾತ್ರ ಆಹಾರದ ಮೆನುವನ್ನು ಬದಲಾಯಿಸಿ ಕಂಪನಿಯನ್ನು ಬದಲಾಯಿಸುವಲ್ಲಿಗೆ ಸರಕಾರವು ತನ್ನ ಜವಾಬ್ದಾರಿಯನ್ನು ತೋರಿಸಿ ಮರೆತಿದೆ. ಖಾಸಗಿ ಕಂಪನಿಯ ಕೈಯಿಂದ ಅಂಗನವಾಡಿಗಳನ್ನು ಬಿಡುಗಡೆ ಮಾಡಿಲ್ಲ.

ರಾಜ್ಯ ಹೈಕೋರ್ಟು ಮತ್ತು ಸಾಮಾಜಿಕ ಸಂಘಟನೆಗಳ ಒತ್ತಡದಿಂದ ಕಡೆಗೂ ರಾಜ್ಯದ ಅಂಗನವಾಡಿಗಳಿಗೆ ತಯಾರಿ ಆಹಾರ (ರೆಡಿಮೇಡ್ ಫುಡ್) ಪೂರೈಸುತ್ತಿದ್ದ ಕ್ರಿಸ್ಪಿ ಫ್ರೈಡ್ ಕಂಪನಿಯ ಕಪಿಮುಷ್ಟಿಯಿಂದ ಹೊರ ಬಂದಿತೇನೋ ನಿಜ ಆದರೆ ಅಷ್ಟರೊಳಗೆ ಮತ್ತೊಂದು ಕಂಪನಿ 'ವೇದಾಂತಂ'ಗೆ ತಯಾರಿ ಆಹಾರ ಕೊಡಲು ಒಪ್ಪಂದ ಮಾಡಿಕೊಂಡಿದೆ. ತೀವ್ರ ಅಪೌಷ್ಟಿಕ ಮಕ್ಕಳಿಗೆ ಬಾಳೆಹಣ್ಣು, ತತ್ತಿ, ಹಾಲು ಸರಬರಾಜು ಮಾಡುವ ನಿರ್ಣಯ ತೆಗೆದುಕೊಂಡಿದೆ. ಬಾಳೆಹಣ್ಣು, ತತ್ತಿ, ಹಾಲನ್ನು ಆಯಾ ಅಂಗನವಾಡಿ ಶಿಕ್ಷಕಿಯರೇ ತಮ್ಮ ಹಣದಲ್ಲಿ ಖರೀದಿಸಬೇಕು ಅದೂ ಮಾರುಕಟ್ಟೆ ಬೆಲೆಗಿಂತ ಕಡಿಮೆ ಬೆಲೆಯಲ್ಲಿ. ಮುಂದೆ ಅವರಿಗೆ ಹಣ ಮರುಪಾವತಿ ಮಾಡಲಾಗುವುದಂತೆ.

ಶಿಶು ಆಹಾರಕ್ಕಾಗಿಯೇ 650 ಕೋಟಿಗೂ ಮಿಕ್ಕಿ ಹಣ ಇದೆ. ಆದರೆ ಖಾಸಗಿ ಕಂಪನಿಗೆ ಕೊಡುವ ಔದಾರ್ಯವನ್ನು ಸರಕಾರವು ನಮ್ಮ ಶಿಶುಗಳಾಗಲೀ, ಅವರನ್ನು ಪಾಲಿಸುತ್ತಿರುವ ತಾಯಂದಿರು– ಅಂಗನವಾಡಿ ಶಿಕ್ಷಕಿಯರಿಗಾಗಲೀ ತೋರಿಸುತ್ತಿಲ್ಲ. ಶಿಶು ಅಭಿವೃದ್ಧಿ ಇಲಾಖೆಯ ಜವಾಬ್ದಾರಿಯನ್ನು ತಮ್ಮ ಮೇಲೂ ಸರಕಾರ ಹಾಕಿ ಬಿಟ್ಟಿದೆ ಎಂಬುದು ಆರೋಗ್ಯ ಇಲಾಖೆಯ ಚಿಂತೆ. ಅದು ತಾಯಿ ತಂದೆಯರ ಜವಾಬ್ದಾರಿ, ನಾವು ಬರಿಯ ಪೂರಕ ಆಹಾರ ನೀಡುವವರು ಎಂದು ಶಿಶು ಅಭಿವೃದ್ಧಿ ಇಲಾಖೆಯ ಗೊಣಗು. ಹೆಚ್ಚಿನ ಕೆಲಸ ಬಿತ್ತೆಂದು ಎಲ್ಲರ ಚಿಂತೆಯೇ ಹೊರತು, ಇದು ತಮ್ಮದೂ ಜವಾಬ್ದಾರಿ ಎಂಬ ವಿಚಾರ ಯಾರಲ್ಲಿಯೂ ನುಸುಳದಿರುವುದು ಮಾತ್ರ ಖೇದಕರ.

ಉತ್ತರ ಕರ್ನಾಟಕದಲ್ಲಿ ಒಂದು ವರ್ಷ ಪ್ರವಾಹವಾದರೆ ಮರುವರ್ಷ ಮಳೆ ಇಲ್ಲದೆ ಬರ. ಜನರಿಗೆ ಹಳ್ಳಿಯಲ್ಲೇ ಉದ್ಯೋಗ ಕೊಡಬಹುದಾದ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾನೂನು ಜಾರಿಯಾಗಿ ಆರು ವರ್ಷಗಳು ಕಳೆದಿದ್ದರೂ ಇನ್ನೂವರೆಗೆ ಗ್ರಾಮ ಪಂಚಾಯತಿಗಳು ಜನರಿಗೆ ಉದ್ಯೋಗ ಕೊಡುತ್ತಿಲ್ಲ. 'ಉದ್ಯೋಗ ಪಡಿತರ ಕೊಟ್ಟು ಸರಕಾರವು ಕೂಲಿಕಾರರನ್ನು ಆಲಸಿಗಳನ್ನಾಗಿಸಿದೆ' ಎಂಬ ಅಭಿಪ್ರಾಯ ಎಲ್ಲೆಡೆಯಲ್ಲಿದೆ ಹೊರತು, ಕೆಲಸ ಕೊಟ್ಟರೆ ಹಳ್ಳಿ ಜನರು ವಲಸೆ ಹೋಗುವುದು ತಪ್ಪಬಹುದು, ಆ ಮೂಲಕ ಕೂಲಿಗಳ ಮಕ್ಕಳು ತಾಯ ಹಾಲಿಲ್ಲದೆ ಅಪೌಷ್ಟಿಕರಾಗುವುದು ತಪ್ಪಬಹುದು ಎಂಬ ವಿಚಾರ ಗಾಳಿಯಲ್ಲಿ ಹರಡುವುದಿಲ್ಲ. ಉದ್ಯೋಗ ನೀತಿ, ಕೈಗಾರಿಕಾ ನೀತಿ, ಮರಳು ನೀತಿ ಇವೆಲ್ಲವೂ ಮಕ್ಕಳ ಅಪೌಷ್ಟಿಕತೆಗೆ ಕಾರಣವಾಗುವ ನೀತಿಗಳಾಗಿವೆ ಎಂಬ ವಿಚಾರ ಯಾವುದೇ ನೀತಿ ನಿರೂಪಕರಿಗೆ ಅರ್ಥವಾಗದಿರುವುದು ಖೇದಕರ.

ತಮ್ಮ ಪೂರ್ತಿಗೆ ಹಣ ಮಾಡುವ ದಂಧೆಯಲ್ಲಿ ತೊಡಗಿಕೊಂಡಿರುವ ಮಂತ್ರಿಗಳು, ಅಧಿಕಾರಿಗಳು ತಮ್ಮ ಸ್ಥಾನದ ಜವಾಬ್ದಾರಿ ಯನ್ನು ತೋರಿಸಬೇಕು. ಆ ಜವಾಬ್ದಾರಿ ಮೇಲ್ಮಟ್ಟದಿಂದ ಕೆಳಮಟ್ಟದ ವರೆಗೂ ಇಳಿಯಬೇಕು. ತಾವು ಅಲ್ಲಿ ಇರುವುದು ಈ ಮಕ್ಕಳಿಗೆ, ಈ ತಾಯಂದಿರಿಗೆ ನ್ಯಾಯ ಒದಗಿಸುವುದಕ್ಕಾಗಿ ಮಾತ್ರ ಎಂದು ಎಲ್ಲಿಯವರೆಗೆ ಇವರೆಲ್ಲ ಅರಿಯುವುದಿಲ್ಲವೋ ಅಲ್ಲಿಯವರೆಗೆ ನಮ್ಮ ಕಂದಮ್ಮಗಳು, ಅವರನ್ನು ಹೆತ್ತ ಮುಗ್ಧ ತಾಯಮ್ಮಗಳು ವಿಪರೀತ ಅಪೌಷ್ಟಿಕತೆಯಿಂದ ಸಾವಿನ ಪ್ರಪಾತಕ್ಕೆ ಬೀಳುತ್ತಲೇ ಹೋಗುತ್ತವೆ. ಪ್ರಧಾನಿಗಳು, ಮುಖ್ಯ ಮಂತ್ರಿಗಳು ನಾಚಿಕೆ ಪಡುತ್ತ ಕುಳಿತಿರಬೇಕಷ್ಟೇ.

❑

ಮೌನ–ಕವಿತೆ



ಮೌನಕ್ಕೆ ಶರಣಾಗಿರುವೆ
ಮೌನವನ್ನೇ ಧರಿಸಿರುವೆ
ಮೂಡಿ ಎನ್ನುವರು ಅವರು
ಬೇಸರವಿಲ್ಲ ನನಗೆ
ಅವರು ಸುಳ್ಳಾಡಿಲ್ಲ.
ನನ್ನ–ನಿನ್ನ ಬಾಂಧವ್ಯಕ್ಕೆ
ಮಾತಿನ ನಂಟು ಬೇಕೇ?
ನೋಡು! ಮಾತು ಕಟ್ಟುವ
ಹಠವಿಲ್ಲ ಕವಿತೆಗೆ
ನನಗೂ ಅಷ್ಟೆ...!

■ ಸ್ಮಿತಾ ಅಮೃತರಾಜ್ ಸಂಪಾಜೆ
ಕೊಡಗು



ಮಹಿಳೆ ಮತ್ತು ಆರೋಗ್ಯ

■ ಸಮುದ್ಯತಾ ಕಂಜರ್ಪಣೆ

ಯಾವುದೇ ಪ್ರಗತಿಶೀಲ ದೇಶ ಅಭಿವೃದ್ಧಿ ಹೊಂದಬೇಕಾದರೆ ಆ ದೇಶದ ನಾಗರೀಕರು ಆರೋಗ್ಯವಂತರಾಗುವುದು ಮುಖ್ಯ. ಅನಾರೋಗ್ಯ ಪೀಡಿತ ರಾಷ್ಟ್ರದಲ್ಲಿ ಸಾಮರ್ಥ್ಯದ ಕುಸಿತವಾಗುವುದಷ್ಟೇ ಅಲ್ಲದೆ ಅದರಿಂದ ದುಡಿಯುವ ಕೈಗಳ ಕೊರತೆಯುಂಟಾಗುತ್ತದೆ. ಇದು ಬಡತನಕ್ಕೆ ದಾರಿ ಮಾಡಿಕೊಡುವುದರ ಜೊತೆಗೆ ದೇಶದ ಆರ್ಥಿಕತೆ ಹಾಗೂ ಮಾನವ ಸಂಪನ್ಮೂಲಗಳ ಬೃಹತ್ ನಷ್ಟಕ್ಕೆ ಕಾರಣವಾಗುತ್ತದೆ.

ಮಹಿಳೆ ಇಂದು ಎಲ್ಲಾ ಕ್ಷೇತ್ರದಲ್ಲಿಯೂ ಮುಂದೆ ಬಂದಿದ್ದಾಳೆ. ಸಾಧನೆಗಳ ಮೆಟ್ಟಿಲೇರುತ್ತಿದ್ದಾಳೆ. ದೇಶದ ಆರ್ಥಿಕತೆಗೆ ಮಹಿಳೆಯ ಕೊಡುಗೆ ಬಹಳಷ್ಟೇ ಇದೆ. ತನ್ನ ಕುಟುಂಬ ಹಾಗೂ ವೃತ್ತಿ ಎರಡನ್ನೂ ಸರಿದೂಗಿಸಿಕೊಂಡು ನಿಭಾಯಿಸುವ ಶಕ್ತಿ ಮಹಿಳೆಗಷ್ಟೇ ಇದೆ. ಆದರೆ ಆಕೆ ತನ್ನ ವೈಯಕ್ತಿಕ ವಿಷಯಗಳ ಬಗ್ಗೆ ಗಮನ ಹರಿಸದಿರುವುದು ವಿಪರ್ಯಾಸ. ತನ್ನ ಆರೋಗ್ಯ, ತಾನು ಸೇವಿಸುವ ಆಹಾರದ ಕುರಿತು ಕಾಳಜಿ ನೀಡುವ ವ್ಯವಧಾನವೂ ಆಕೆಗಿಲ್ಲ. ತನಗಾಗಿ ಸಮಯ ಹಾಗೂ ಸ್ವಲ್ಪ ಕಾಳಜಿ ನೀಡಲು ಸಮಾಜದಲ್ಲಿ ಗಟ್ಟಿಯಾಗಿ ಬೇರೂರಿರುವ ಪಿತೃಪ್ರಧಾನ ವ್ಯವಸ್ಥೆ ಅಡ್ಡಿಯಾಗಿದೆ.

ಭಾರತದಲ್ಲಿ ಮಹಿಳೆಯರ ಆರೋಗ್ಯ ಉತ್ತಮ ಸ್ಥಿತಿಯಲ್ಲಿರದುದಕ್ಕೆ ಕಾರಣ ಸಮಾಜದಲ್ಲಿರುವ ಅನೇಕ ದೃಷ್ಟಿಕೋನಗಳು. ಸಮಾಜದ ಅನೇಕ ಸಾಂಪ್ರದಾಯಿಕ ಹಾಗೂ ಸಾಂಸ್ಕೃತಿಕ ಅಂಶಗಳು ಮಹಿಳೆಯ ಆರೋಗ್ಯದ ಮೇಲೆ ಬಹಳಷ್ಟು ಪರಿಣಾಮ ಬೀರುತ್ತವೆ. ಮದುವೆಯ ವಯಸ್ಸು, ವಿವಾಹದ ಕುರಿತಾದ ಅಭಿಪ್ರಾಯ, ಮಗುವಿನ ಲಿಂಗ, ಬಾಲ್ಯ ವಿವಾಹ ಮುಂತಾದ ಅಂಶಗಳು ಮಹಿಳೆಯ ಮಾನಸಿಕ ಹಾಗೂ ದೈಹಿಕ ಆರೋಗ್ಯದ ಮೇಲೆ ಪರಿಣಾಮ ಬೀರುತ್ತವೆ. ಬಡ ಕುಟುಂಬಗಳಲ್ಲಿ ಅಪೌಷ್ಟಿಕತೆ ಕೂಡಾ ಮಹಿಳೆಯನ್ನು ಕಾಡುವ ಸಮಸ್ಯೆಯಾಗಿದೆ. ಹೆಣ್ಣುಮಗು ಹುಟ್ಟಿದಾಗಿನಿಂದ ಅವಳು ಮೈನೆರೆದು, ವಿವಾಹವಾಗಿ ತಾಯಿಯಾಗಿ ಕುಟುಂಬದ ಹಲವಾರು ಜವಾಬ್ದಾರಿಗಳನ್ನು ನಿಭಾಯಿಸುವ ಪ್ರತಿಯೊಂದು ಘಟ್ಟದಲ್ಲಿಯೂ ಮಹಿಳೆ ಎದುರಿಸಬೇಕಾಗುವ ಲಿಂಗಭೇದದಿಂದ ಆಕೆಯ ಆರೋಗ್ಯ ಹದಗೆಡುತ್ತದೆ.

ದಶಕಗಳ ಹಿಂದೆ ಜನರು ಅನಾರೋಗ್ಯ ಪೀಡಿತರಾದಲ್ಲಿ ಆ ಕಾಯಿಲೆಗೆ ಔಷಧಿ ನೀಡುತ್ತಿದ್ದರೇ ವಿನಾ ಕಾಯಿಲೆಯ ಹಿಂದಿನ ಕಾರಣದ ಕುರಿತು ಚಿಂತಿಸಿರಲಿಲ್ಲ. ಆದರೆ ಇಂದು ಭಾರತದಲ್ಲಿ ಅನಾರೋಗ್ಯದ ಮುಖ್ಯ ಕಾರಣವಾದ ಅಪೌಷ್ಟಿಕತೆ ಹೆಮ್ಮರವಾಗಿ ಬೆಳೆದು ನಿಂತಿದೆ. ಕಳೆದ ಹಲವಾರು ವರ್ಷಗಳಿಂದ ಸರಕಾರ ಮತ್ತು ಸಮಾಜ ಕೂಡಾ ಅಪೌಷ್ಟಿಕತೆ ಒಂದು ಗಂಭೀರ ಸಮಸ್ಯೆ ಎಂಬುದನ್ನು ಒಪ್ಪಿಕೊಂಡಿದೆ.

ಭಾರತಲ್ಲಿನ ಅರ್ಧದಷ್ಟು ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿರುವುದಕ್ಕೆ ಮುಖ್ಯ ಕಾರಣ ಲಿಂಗ ತಾರತಮ್ಯವಾಗಿದೆ. 2011ರಲ್ಲೂ ಮಹಿಳೆಯರ ಸಾಕ್ಷರತೆ ಕೇವಲ 65% ಇದೆ. ಹಾಗೂ ಯಾವುದೇ ಅಭಿವೃದ್ಧಿ ಕ್ಷೇತ್ರದಲ್ಲೂ ಮಹಿಳೆಯರ ಪಾಲು ಕಡಿಮೆಯೇ ಇದೆ. ಕೃಷಿಯ ಹೊರತಾಗಿ ಬೇರೆ ಎಲ್ಲ ಕ್ಷೇತ್ರಗಳಲ್ಲಿ ಮಹಿಳೆಯ ದುಡಿಮೆ ಬಹಳ ಕಡಿಮೆಯಿರುತ್ತದೆ. ಇತ್ತೀಚಿನ ದಿನಗಳಲ್ಲಿ ಈ ಸಂದರ್ಭಗಳೂ ಬದಲಾಗುತ್ತಿದ್ದರೂ, ಹೆಚ್ಚಿನ ಮಹಿಳೆಯರು ಅನಕ್ಷರಸ್ಥರು ಹಾಗೂ ನಿರುದ್ಯೋಗಿಗಳಾಗಿರುತ್ತಾರೆ. ವಿವಾಹಿತ ಮಹಿಳೆಯರಿಗೆ ತಮ್ಮ ಜೀವನದ ಕುರಿತಾದ ನಿರ್ಧಾರಗಳನ್ನು ತೆಗೆದುಕೊಳ್ಳುವ ಹಕ್ಕೂ ಇರುವುದಿಲ್ಲ. ಅಲ್ಲದೆ, ಅನಕ್ಷರಸ್ಥ ಮಹಿಳೆಯರು ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸುವುದರಲ್ಲಿಯೂ ವಿಫಲರಾಗುತ್ತಾರೆ. ಆರೋಗ್ಯ ಸೇರಿದಂತೆ ಹಲವಾರು ವಿಷಯಗಳಲ್ಲಿ ಪುರುಷರಿಗೇ ಮಹಿಳೆಯರಿಗಿಂತ ಹೆಚ್ಚಿನ ಪ್ರಾಧಾನ್ಯತೆ ನೀಡುವುದನ್ನು ನಾವು ಗಮನಿಸುತ್ತಾ ಬಂದಿದ್ದೇವೆ. ಮಹಿಳೆಗಿಂತ ಹೆಚ್ಚಾಗಿ ಮನೆಯಲ್ಲಿ ಪುರುಷರು ಹಾಗೂ ಮಕ್ಕಳ ಆರೋಗ್ಯದ ಕಡೆಗೆ ಗಮನ ನೀಡಲಾಗುತ್ತದೆ. ಪುರುಷಪ್ರಧಾನ ಸಮಾಜದಲ್ಲಿ ಮಹಿಳೆಗಿರುವ ಸ್ಥಾನಮಾನದಿಂದಾಗಿ ಆಕೆ ಇಂದು ತನ್ನ ಸಮಸ್ಯೆಗಳನ್ನು ತಾನೊಬ್ಬಳೇ ಅನುಭವಿಸುವ ಸ್ಥಿತಿ ಬಂದೊದಗಿದೆ.

ಮಹಿಳೆಯಾಗಿರುವ ಏಕೈಕ ಕಾರಣಕ್ಕೆ ಆಕೆ ಇಂದು ತನ್ನ ಜೀವನದ ಮೂಲಭೂತ ಹಕ್ಕುಗಳನ್ನು ಕಳೆದುಕೊಳ್ಳುತ್ತಿದ್ದಾಳೆ. ತಾಯಿಯಾಗಿ, ಹೆಂಡತಿಯಾಗಿ ಹೆಣ್ಣನ್ನು ಬಯಸುವ ಈ ಪುರುಷಪ್ರಧಾನ ಸಮಾಜ ಆಕೆಯ ಆರೋಗ್ಯದ ಕಾಳಜಿ ತೆಗೆದುಕೊಳ್ಳಬೇಕಾದಾಗ ತಮಗೆ ಸಂಬಂಧವೇ ಇಲ್ಲ ಎನ್ನುವ ರೀತಿಯಲ್ಲಿ ವರ್ತಿಸುತ್ತದೆ. ಹೆಣ್ಣುಮಗು ಹುಟ್ಟಿದಾಗ ವಿಷಾದಿಸುವ, ಆಕೆಯನ್ನು ಕೊಲ್ಲಲೂ ಪ್ರಯತ್ನಿಸುವ ಸಮಾಜ ಆಕೆಯ ಆರೋಗ್ಯದ ಕಡೆ ಗಮನ ನೀಡದಿರುವುದರಲ್ಲಿ ವಿಶೇಷವೇನೂ ಇಲ್ಲ ಎನಿಸುತ್ತದೆ. ಎಷ್ಟೇ ವಿದ್ಯಾವಂತ ಹೆಣ್ಣುಮಗಳಾದರೂ ತನ್ನ ಕುಟುಂಬದ ವಿಷಯದಲ್ಲಿ ಮೊದಲು ತನ್ನ ಗಂಡ–ಮಕ್ಕಳ ಆರೋಗ್ಯಕ್ಕೇ ಪ್ರಾಮುಖ್ಯತೆ ನೀಡುತ್ತಾಳೆ. ಶೇಕಡಾ 80 ಕುಟುಂಬಗಳಲ್ಲಿ ಹಿಂದಿನ ದಿನದ ಅಡಿಗೆಯನ್ನು ತಾನು ಸೇವಿಸಿ ತನ್ನ ಕುಟುಂಬದ ಇತರ ಸದಸ್ಯರಿಗೆ ಬಿಸಿ ಅಡಿಗೆ ಮಾಡಿ ಬಡಿಸುವ ಸನ್ನಿವೇಶಗಳೇನೂ ನಮಗೆ ಹೊಸದಲ್ಲ.

ಭಾರತೀಯ ಹೆಣ್ಣುಮಕ್ಕಳಲ್ಲಿ ಅಪೌಷ್ಟಿಕತೆ ಹೆಚ್ಚಾಗಿರುವುದಕ್ಕೆ ಲಿಂಗ ತಾರತಮ್ಯವೇ ಮುಖ್ಯ ಕಾರಣವಾಗಿದೆ. ಬಹಳಷ್ಟು ಬಡ ಕುಟುಂಬಗಳಲ್ಲಿ ಹೆಣ್ಣುಮಕ್ಕಳಿಗಿಂತ ಗಂಡುಮಕ್ಕಳಿಗೇ ಹೆಚ್ಚಿನ ಆದ್ಯತೆ ನೀಡುವುದರಿಂದ ಹೆಣ್ಣುಮಕ್ಕಳ ಆರೋಗ್ಯದ ಕಡೆಗೆ ವಹಿಸುವ ಕಾಳಜಿ ಕಡಿಮೆಯಾಗುತ್ತದೆ, ಚಿಕ್ಕ ವಯಸ್ಸಿನಿಂದಲು ಅಂತಹ ವಾತಾವರಣದಲ್ಲಿ ಬೆಳೆದ ಹೆಣ್ಣು ಮಕ್ಕಳು ಮುಂದೆ ತಮ್ಮ ಆರೋಗ್ಯದ ಬಗ್ಗೆ ಅಸಡ್ಡೆ ತಳೆಯುತ್ತಾರೆ. ಸಾಮಾನ್ಯವಾಗಿ ಗಂಡ ಹಾಗೂ ಮಕ್ಕಳ ಊಟದ ನಂತರವೇ ಆಹಾರ ಸೇವಿಸುವ ಅಭ್ಯಾಸವೂ ಕೂಡಾ ಪಿತೃಪ್ರಧಾನ ಸಂಸ್ಕೃತಿಯ ಒಂದು ಭಾಗವಾಗಿದೆ. ಬಡ ಕುಟುಂಬಗಳಲ್ಲಿ ಎಲ್ಲರಿಗಿಂತ ಕೊನೆಗೆ ಊಟ

ಮಾಡುವವರಿಗೆ ಅಗತ್ಯವಿದ್ದಷ್ಟು ಆಹಾರ ಮಿಕ್ಕಿರುವುದಿಲ್ಲ, ಸಾಮಾನ್ಯವಾಗಿ ಮಹಿಳೆಯರೇ ಇಂತಹ ಸನ್ನಿವೇಶಗಳನ್ನು ಎದುರಿಸುವುದರಿಂದ ದೇಹಕ್ಕೆ ಬೇಕಾದ ಪೋಷಕಾಂಶಗಳ ಕೊರತೆಯಿಂದ ಅಪೌಷ್ಟಿಕತೆಗೆ ತುತ್ತಾಗುತ್ತಾರೆ. ಮಹಿಳೆಯರಲ್ಲಿ ಈ ತೊಂದರೆ ಬಹಳ ಚಿಕ್ಕ ವಯಸ್ಸಿನಲ್ಲಿಯೇ ಆರಂಭವಾಗುತ್ತದೆ. ಅಪೌಷ್ಟಿಕತೆಯಿಂದ ಬಳಲುತ್ತಿರುವ ತಾಯಂದಿರ ಮೂಲಕ ಮಕ್ಕಳು ಕೂಡಾ ಅಪೌಷ್ಟಿಕತೆಗೆ ತುತ್ತಾಗುತ್ತಾರೆ. ಇದರಿಂದ ಮಹಿಳೆಯರು ಮಾನಸಿಕವಾಗಿ ಹಾಗೂ ದೈಹಿಕವಾಗಿ ಕುಗ್ಗುತ್ತಾರೆ, ಆಕೆಯ ಹಾಗೂ ಆಕೆಯ ಕುಟುಂಬದ ಮೇಲಿನ ಕಾಳಜಿ ಕುಂಠಿತ ವಾಗುತ್ತದೆ. ಮಕ್ಕಳ ಅಪೌಷ್ಟಿಕತೆಯ ಕುರಿತಾಗಿ ಗಮನ ಹರಿಸುವ ಮೊದಲು ಸಮಾಜ ಮಹಿಳೆಯ ಆರೋಗ್ಯದ ಕಡೆಗೆ ಗಮನ ಹರಿಸುವುದು ಮುಖ್ಯವಾಗುತ್ತದೆ

ವಿದ್ಯಾವಂತ ಹುಡುಗಿಯರಲ್ಲೂ ಅನೀಮಿಯಾದ ತೊಂದರೆ ಇರುವುದು ಇತ್ತೀಚಿನ ಅಧ್ಯಯನಗಳಿಂದ ತಿಳಿದು ಬರುತ್ತಿದೆ. ಐತಿಹಾಸಿಕ ವಾಗಿ ಹಾಗೂ ಸಾಂಪ್ರದಾಯಿಕವಾಗಿ ಬೆಳೆದು ಬಂದ ಲಿಂಗ ತಾರತಮ್ಯ ಇದಕ್ಕೆ ಮುಖ್ಯ ಕಾರಣವಾಗುತ್ತದೆ. ಭಾರತದ ಹಲವಾರು ಬಡ ಕುಟುಂಬ ಗಳಲ್ಲಿ ಹೆಣ್ಣುಮಕ್ಕಳಿಗಿಂತ ಗಂಡುಮಕ್ಕಳಿಗೇ ಹೆಚ್ಚಿನ ಆದ್ಯತೆ ತೋರುವುದು ಸಾಮಾನ್ಯವಾಗಿದೆ. ಇದರಿಂದಾಗಿ ಗಂಡುಮಕ್ಕಳಿಗೆ ನೀಡುವ ಉತ್ತಮ ಗುಣಮಟ್ಟದ ಆಹಾರವನ್ನು ಹೆಣ್ಣುಮಕ್ಕಳಿಗೆ ಕೊಡದಿರುವುದು ವಿಪರ್ಯಾಸ. ಉತ್ತಮ ಗುಣಮಟ್ಟದ ಆಹಾರವನ್ನು ನೀಡದಿರುವುದು ಅವಶ್ಯಕ ಪೋಷಕಾಂಶಗಳ ಕೊರತೆಯನ್ನುಂಟು ಮಾಡುತ್ತದೆ

ಭಾರತದ ಹಲವಾರು ಹಳ್ಳಿಗಳಲ್ಲಿ ಅನಕ್ಷರಸ್ಥ ಕುಟುಂಬಗಳಲ್ಲಿನ ಮಕ್ಕಳು ಹೆಚ್ಚಾಗಿ ಅಪೌಷ್ಟಿಕತೆಯಿಂದ ಬಳಲುತ್ತಿರುವುದನ್ನು ನಾವು ನೋಡಬಹುದು. ಜೀವನದುದ್ದಕ್ಕೂ ಎದುರಿಸಬೇಕಾದ ಲಿಂಗ ತಾರತಮ್ಯದ ಪರಿಣಾಮಗಳು ಬಹಳಷ್ಟಿವೆ. ಮಹಿಳೆಯರೇ ಹೆಚ್ಚಾಗಿ ಇದಕ್ಕೆ ಗುರಿಯಾಗುವುದರಿಂದ ಅನಾರೋಗ್ಯ ಪೀಡಿತರಾಗುವುದು ಕೂಡಾ ಹೆಚ್ಚಿರುತ್ತದೆ. ಬಡತನದ ಪರಿಣಾಮವಾಗಿ ಮನೆಯಲ್ಲಿ ಉತ್ತಮ ಪೌಷ್ಟಿಕ ಆಹಾರದ ಕೊರತೆಯುಂಟಾಗುತ್ತದೆ, ಲಿಂಗ ತಾರತಮ್ಯಕ್ಕೆ ಗುರಿಯಾಗುವ ಮಹಿಳೆಯರು ತಮಗೆ ಬೇಕಾದ ಪೋಷಕ ಆಹಾರದ ಕುರಿತಾಗಿ ಗಮನ ಹರಿಸದೇ ಅಪೌಷ್ಟಿಕತೆಗೆ ತುತ್ತಾಗುತ್ತಾರೆ. ಜೊತೆಗೆ, ಗರ್ಭಿಣಿ ಮಹಿಳೆಯರು ಅನಕ್ಷರಸ್ಥರಾಗಿದ್ದಲ್ಲಿ ಅವರು ತಮ್ಮ ದೇಹಕ್ಕೆ ಹಾಗೂ ಮಗುವಿಗೆ ಬೇಕಾದ ಪೌಷ್ಟಿಕ ಆಹಾರದ ಕುರಿತು ಕಾಳಜಿ ತೆಗೆದುಕೊಳ್ಳದಿರುವುದು ಮಗುವಿನ ಆರೋಗ್ಯದ ಮೇಲೂ ಪರಿಣಾಮ ಬೀರುತ್ತದೆ. ಇದೆಲ್ಲದರ ಪರಿಣಮವಾಗಿ ಮಕ್ಕಳಲ್ಲಿ ಅಪೌಷ್ಟಿಕತೆ ಹೆಚ್ಚಾಗುತ್ತದೆ.

ಹೆಣ್ಣುಮಕ್ಕಳಲ್ಲಿ ಅಪೌಷ್ಟಿಕತೆ ಉಂಟಾಗುವುದಕ್ಕೆ ಇನ್ನೊಂದು ಮುಖ್ಯ ಕಾರಣ ಬಾಲ್ಯ ವಿವಾಹ. 18 ವಯಸ್ಸಿನ ಒಳಗಿನ ಹೆಣ್ಣು ಮಕ್ಕಳಿಗೆ ವಿವಾಹ ಮಾಡುವುದರಿಂದ ಅವರು ಬಹಳಷ್ಟು ದುಷ್ಪರಿಣಾಮ ಗಳನ್ನು ಎದುರಿಸಬೇಕಾಗುತ್ತದೆ. ಮಾನಸಿಕವಾಗಿ ಹಾಗೂ ದೈಹಿಕವಾಗಿ ದುರ್ಬಲವಾಗಿರುವ ಮಕ್ಕಳು ಎಳೆಯ ವಯಸ್ಸಿನಲ್ಲಿಯೇ ಗರ್ಭಿಣಿಯ ರಾಗುವುದರಿಂದ ಕಡಿಮೆ ತೂಕದ ಮಕ್ಕಳು ಜನಿಸಿ ಮರಣ ಹೊಂದುವ ಸಾಧ್ಯತೆಗಳಿವೆ. ಅಂಗಾಂಗಗಳ ಬೆಳವಣಿಗೆ ಪೂರ್ಣಗೊಳ್ಳುವ ಮೊದಲೆ ಮದುವೆ ಮಾಡುವುದರಿಂದ ಗರ್ಭಕೋಶದ ಬೆಳವಣಿಗೆಯೂ ಕುಂಠಿತ ವಾಗಿದ್ದು ಮಗು ಸರಿಯಾಗಿ ಬೆಳೆಯದೇ ಹೊಟ್ಟೆಯಲ್ಲಿಯೆ ಸಾವನ್ನಪ್ಪುವ ಸಾಧ್ಯತೆಗಳು ಹೆಚ್ಚಾಗಿರುತ್ತವೆ. ಹಾಗೂ ಹೆಣ್ಣುಮಕ್ಕಳು ರಕ್ತಹೀನತೆಯಿಂದ ಬಳಲಬೇಕಾಗುತ್ತದೆ. ಹೆಣ್ಣುಮಗುವಿನ ಆರೋಗ್ಯ ಹಾಗೂ ಭವಿಷ್ಯದ ದೃಷ್ಟಿಯಿಂದ ಬಾಲ್ಯ ವಿವಾಹವನ್ನು ತಡೆಗಟ್ಟುವುದು ಎಲ್ಲ ನಾಗರಿಕರ ಕರ್ತವ್ಯವಾಗಿರುತ್ತದೆ.

ಕೀಟನಾಶಕ ಮತ್ತು ಮಹಿಳೆಯರ ಆರೋಗ್ಯ

■ ಲೇಖಾ ಅಡವಿ

ಭಾರತದಲ್ಲಿ ಹಸಿರು ಕ್ರಾಂತಿಯನ್ನು ಅದರ ದುಷ್ಪರಿಣಾಮಗಳಿಂದಾಗಿ ಶಾಪವೆಂದು ಪರಿಗಣಿಸಲಾಗಿದೆ. ಕೇವಲ ಬೆಳೆಯ ಮೇಲೆ ಮಾತ್ರವಲ್ಲದೆ ಆರೋಗ್ಯದ ಮೇಲೂ ಹೆಚ್ಚಿನ ಪ್ರಭಾವ ಬೀರುತ್ತಿದೆ.

ಹಸಿರು ಕ್ರಾಂತಿಯ ಯಶಸ್ಸಿಗೆ ಕಾರಣವಾದ ಕೀಟನಾಶಕಗಳ ಬಳಕೆಯಿಂದಾಗುವ ಅಪಾಯಗಳಿಗೆ ಮಹಿಳೆಯರೂ ಕೂಡಾ ತುತ್ತಾಗುತ್ತಿದ್ದಾರೆ. ನಾವು ಗಮನಿಸ ಬೇಕಾದ ಸಂಗತಿಯೆಂದರೆ ತೃತೀಯ ಜಗತ್ತಿನ ರಾಷ್ಟ್ರಗಳಲ್ಲಿ ಕ್ರಿಮಿನಾಶಕ ಗಳಿಂದಾಗುವ ಹಾನಿಗಳನ್ನು ತೀವ್ರವಾಗಿ ನಿರ್ಲಕ್ಷಿಸಲಾಗಿದೆ. ನಮ್ಮ ಸಮಾಜವು, ವ್ಯವಸಾಯದಲ್ಲಿ ಮಹಿಳೆಯರ ಪಾತ್ರವನ್ನು ಕಡೆಗಣಿಸುತ್ತಲೇ ಬಂದಿದೆ. ನಗರ ಪ್ರದೇಶಗಳಿಗೆ ವಲಸೆ ಹೆಚ್ಚುತ್ತಿರುವ ಈ ಸಂದರ್ಭದಲ್ಲಿ ಶೇಕಡ 43ರಷ್ಟು ಹೆಚ್ಚು ಮಹಿಳೆಯರು ವ್ಯವಸಾಯದಲ್ಲಿ ತೊಡಗಿ ಕೀಟನಾಶಕಗಳ ದುಷ್ಪರಿಣಾಮ ಗಳಿಗೆ ಇನ್ನಷ್ಟು ಬಲಿಯಾಗುತ್ತಿದ್ದಾರೆ.

United nations environment program *ಪ್ರಕಾರ, ಕೀಟನಾಶಕ ಗಳಿಂದ ಸ್ಥನ ಕ್ಯಾನ್ಸರ್, ನ್ಯೂನ್ಯತೆಗಳಿರುವ ಮಗು ಜನಿಸುವುದು, ಗರ್ಭಪಾತ, ಜನನ ಸಂದರ್ಭದಲ್ಲಿ ತೊಂದರೆ ಹೀಗೆ ವಿವಿಧ ಬಗೆಗಳಲ್ಲಿ ಆಗುತ್ತಿರುವ ಸಾವಿನ ಸಂಖ್ಯೆ* ***20,000****ಕ್ಕೆ ಏರಿದೆ ಹಾಗೂ ಒಂದು ಮಿಲಿಯನ್‌ನಷ್ಟು ಜನರು ಅನಾರೋಗ್ಯದಿಂದ ಬಳಲುತ್ತಿದ್ದಾರೆ. ವ್ಯವಸಾಯದಲ್ಲಿರುವ ಮಹಿಳೆಯರಿಗೆ ಕೀಟನಾಶಕಗಳ ವಿಷಕಾರಿ ಗುಣದ ಬಗ್ಗೆ ಅರಿವಿಲ್ಲ. ಕೆಲವೇ ಕೆಲವು ಮಹಿಳೆಯರು ಮಾತ್ರ ಇದನ್ನು ಅರ್ಥಮಾಡಿಕೊಂಡಿದ್ದಾರೆ. ಕೀಟನಾಶಕಗಳನ್ನು ಸಿಂಪಡಿಸುವ ಸಮಯದಲ್ಲಿ ಬಳಸಬೇಕಾದ ಪ್ರತ್ಯೇಕ ವಸ್ತ್ರಗಳು ದುಬಾರಿಯಾದ್ದರಿಂದ ಅದನ್ನು ಕೊಂಡುಕೊಳ್ಳಲು ಹಿಂಜರಿಯುವ ಕಾರಣದಿಂದ ಹಾಗೂ ಕೊಂಡುಕೊಂಡರು ಬಳಸುವ ಪರಿಯು ಸಂಕೀರ್ಣವಾಗಿರುವುದರಿಂದ ಅದನ್ನು ಕೃಷಿ ಕಾರ್ಮಿಕರು ನಿರ್ಲಕ್ಷಿಸುತ್ತಿದ್ದಾರೆ.*

ಅನೇಕ ಕೃಷಿ ಮಹಿಳೆಯರು ಅನಕ್ಷರಸ್ಥರಾಗಿರುವುದರಿಂದ ಬಾಟಲುಗಳ ಮೇಲೆರುವ ಎಚ್ಚರಿಕೆಯ ಸೂಚನೆಗಳನ್ನು ಓದಲಾಗುತ್ತಿಲ್ಲ ಅದೂ ಅಲ್ಲದೆ ಸೂಚನೆಗಳು ಚಿಕ್ಕದಾಗಿ ಅಚ್ಚಾಗಿರುವುದರಿಂದ ಅಕ್ಷರಸ್ಥ ಮಹಿಳೆಯರೂ ಸಹ ಅದರ ಗಮನ ಹರಿಸುತ್ತಿಲ್ಲ.

ಅಮೆರಿಕಾದಂತಹ ಪಾಶ್ಚಾತ್ಯ ದೇಶಗಳು ಅನುಸರಿಸುತ್ತಿರುವ, ಕೃಷಿಯ ಯಾಂತ್ರೀಕರಣವನ್ನು ತೃತೀಯ ಜಗತ್ತಿನ ಮೇಲೂ ಹೇರುತ್ತಿರುವುದರಿಂದ, ಮಹಿಳೆಯರು ಅನುಸರಿಸುತ್ತ ಬಂದಿರುವ ಸಾಂಪ್ರದಾಯಿಕ ಕೃಷಿ ವಿಧಾನಗಳು ಮೂಲೆ ಗುಂಪಾಗುತ್ತಿವೆ. ಇದರ ಜೊತೆಗೆ ಸರ್ಕಾರ ಏಜೆಂಟುಗಳು ಹಾಗೂ ಕೆಲವು ಕೃಷಿ ರಾಸಾಯನಿಕ ಕಂಪನಿಗಳ ಪ್ರತಿನಿಧಿಗಳು ನಡೆಸುವ ಸಮಾವೇಶ ಗಳಲ್ಲಿ ಪುರುಷರೇ ಅಧಿಕ ಸಂಖ್ಯೆಯಲ್ಲಿ ಪಾಲ್ಗೊಳ್ಳುವುದರಿಂದ ಮಹಿಳಾ ಅನಿಸಿಕೆಗಳು ವ್ಯಕ್ತವಾಗುತ್ತಿಲ್ಲ. ಬಹಳಷ್ಟು ಕೃಷಿ ಕುಟುಂಬ ಪಿತೃಪ್ರಧಾನ ಮೌಲ್ಯ ಗಳನ್ನು ಹೊಂದಿರುವುದರಿಂದ ಮಹಿಳೆಯರಿಗೆ ನಿರ್ಧರಿಸುವ ಹಕ್ಕನ್ನು ತಿರಸ್ಕರಿಸಲಾಗಿದೆ. ಬಹುತೇಕ ಸಂದರ್ಭಗಳಲ್ಲಿ ಗಂಡಸರೇ ರಾಸಾಯನಿಕಗಳನ್ನು ಕೊಂಡುತರುವುದಲ್ಲದೇ ಅದನ್ನು ಬಳಸುವ ಮಾಹಿತಿಯನ್ನೂ ಮಹಿಳೆಯರಿಗೆ ನೀಡುತ್ತಿಲ್ಲ. ಇವೆಲ್ಲ ಕಾರಣಗಳಿಂದ ಮಹಿಳೆಯ ಸ್ಥಾನಮಾನ ಹಾಗೂ ಆರೋಗ್ಯದ ಮೇಲೆ ನಕಾರಾತ್ಮ ಪರಿಣಾಮ ಬೀರುತ್ತಿದೆ.

ಇಂತಹ ಪರಿಸ್ಥಿತಿಗಳಲ್ಲಿ ಮಹಿಳೆ ತನ್ನ ಆರೋಗ್ಯವನ್ನು ಕಾಪಾಡಿಕೊಳ್ಳಬೇಕಾದರೆ ಆಕೆಯ ಮುಂದಿರುವ ಆಯ್ಕೆಗಳಾದರೂ ಏನು? ಪ್ರಸ್ತುತ ಮಾದರಿಯನ್ನೇ ಮುಂದುವರೆಸುತ್ತ ಕೀಟನಾಶಕಗಳ ಬಳಕೆಯ ಸೂಕ್ತ ಅರಿವನ್ನು ಪಡೆದು ಕೊಳ್ಳಬೇಕೇ ಅಥವಾ ಪಾಶ್ಚಾತ್ಯ ಕೃಷಿ ಮಾದರಿಯನ್ನೇ ಸಂಪೂರ್ಣವಾಗಿ ನಿರಾಕರಿಸಿ ಸಾಂಪ್ರದಾಯಿಕ ಕೃಷಿ ಮಾದರಿಯನ್ನೇ ಮುಂದುವರೆಸಬೇಕೇ?

ಅಪೌಷ್ಟಿಕತೆ ಸಾಧಾರಣವಾಗಿ ಗರ್ಭಿಣಿಯರಲ್ಲೇ ಸಾಮಾನ್ಯವಾಗಿ ಪ್ರಾರಂಭವಾಗಿ ನಂತರ ವಯಸ್ಕರಲ್ಲಿಯೂ ಮುಂದುವರಿಯುತ್ತಿರುತ್ತದೆ. ಆದ್ದರಿಂದಲೇ ತಾಯಿಯ ಆರೋಗ್ಯದ ಮಟ್ಟವೇ ಮಗುವಿನ ಆರೋಗ್ಯದ ಮಟ್ಟವೂ, ಹಾಗೂ ಸಮಾಜದ ಆರೋಗ್ಯವೂ ಆಗಿರುತ್ತದೆ. ತಾಯಿ ತೆಗೆದುಕೊಳ್ಳುವ ಕಾಳಜಿಯ ಮೇಲೆಯೇ ಮಗುವಿನ ಆರೋಗ್ಯದ ಮಟ್ಟವೂ ನಿರ್ಧಾರವಾಗುತ್ತದೆ. ಆದರೆ ತಾಯಿ ತೆಗೆದುಕೊಳ್ಳುವ ಕಾಳಜಿಯು ಆಕೆಯ ಆರೋಗ್ಯ, ನಿರ್ದಿಷ್ಟ ಕಾಲಾವಧಿಯವರೆಗೆ ಹಾಲುಣಿಸುವ ದೈಹಿಕ ಸಾಮರ್ಥ್ಯ, ಹಾಗೂ ಸಮಾಜದಲ್ಲಿ ಆಕೆಯ ಸ್ಥಾನದ ಮೇಲೆ ಅವಲಂಬಿತವಾಗಿರುತ್ತದೆ.

ಮಹಿಳೆಯರಲ್ಲಿ ಅಪೌಷ್ಟಿಕತೆ ಹಲವಾರು ತೊಂದರೆಗಳಿಗೆ ಕಾರಣವಾಗುತ್ತದೆ. ಗರ್ಭಿಣಿಯರಲ್ಲಿ ಉಂಟಾಗುವ ಅಪೌಷ್ಟಿಕತೆ ಹಾಗೂ ಕಬ್ಬಿಣಾಂಶದ ಕೊರತೆಯಿಂದಾಗುವ ಅನೀಮಿಯಾದಿಂದ ಹೆರಿಗೆಯ ಸಂದರ್ಭದಲ್ಲಿ ತಾಯಿಯ ಸಾವಿಗೂ ಕಾರಣವಾಗುತ್ತದೆ. ಗರ್ಭಿಣಿಯರಲ್ಲಿ ಕಂಡುಬರುವ ಅನೀಮಿಯಾದ ಪರಿಣಾಮವಾಗಿ ಗರ್ಭಪಾತವಾಗಬಹುದು, ಹೆರಿಗೆಯ ಸಂದರ್ಭದಲ್ಲಿ ಮಗುವಿನ ಅಥವಾ ತಾಯಿಯ ಸಾವು ಉಂಟಾಗುವುದು, ಶಿಶುವಿನ ತೂಕ ಕಡಿಮೆಯಾಗಿರುವುದು, ಮಗುವಿನ ಆರೋಗ್ಯದಲ್ಲಿ ಏರುಪೇರಾಗುವುದು, ಶಿಶುವಿನ ದೈಹಿಕ ಹಾಗೂ ಬೌದ್ಧಿಕ ಬೆಳವಣಿಗೆ ಕುಗ್ಗುವುದು ಮುಂತಾದ ತೊಂದರೆಗಳು ಕಂಡುಬರುತ್ತವೆ. ಹೆರಿಗೆಯ ಸಮಯದಲ್ಲಿ ತಾಯಂದಿರ ಸಾವಿಗೆ ಅನೀಮಿಯಾ ಮುಖ್ಯ ಕಾರಣವಾಗಿದೆ. ಅನಕ್ಷರಸ್ಥ ಮಹಿಳೆಯರಿಗೆ ತಮ್ಮ ಆಹಾರದಲ್ಲಿ ಅಳವಡಿಸಬೇಕಾದ ಪೋಷಕಾಂಶಗಳ ಕುರಿತು ಅರಿವಿರುವುದಿಲ್ಲ. ಗಂಡುಮಕ್ಕಳಿಗೇ ಹೆಚ್ಚು ಆದ್ಯತೆ ನೀಡುವ ತಾಯಂದಿರಿಂದಾಗಿ ಉತ್ತಮ ಆಹಾರ ಹಾಗೂ ಆರೋಗ್ಯ ಎರಡೂ ಗಂಡಸರ ಪಾಲಾಗುತ್ತದೆ. ಹೆಣ್ಣುಮಕ್ಕಳು ಪುನಃ ಅಪೌಷ್ಟಿಕತೆಗೆ ತುತ್ತಾಗುತ್ತಾರೆ, ಇದು ಒಂದು ವಿಷವರ್ತುಲವಾಗಿ ಪರಿಣಮಿಸಿದೆ, ತಾಯಿಯಿಂದ ತನ್ನ ಮಕ್ಕಳಿಗೆ, ಪುನಃ ಅದೇ ಹೆಣ್ಣುಮಕ್ಕಳಿಂದ ತಮ್ಮ ಮಕ್ಕಳಿಗೆ. ಇದೇ ರೀತಿ ಅಪೌಷ್ಟಿಕತೆಯ ವಿಷಚಕ್ರ ಸುತ್ತುತ್ತಲೇ ಹೋಗುತ್ತದೆ. ಗರ್ಭಿಣಿಯರಲ್ಲಿ ಉಂಟಾಗುವ ಅಪೌಷ್ಟಿಕತೆಯು ಮಗುವಿನ ದೈಹಿಕ ಹಾಗೂ ಬೌದ್ಧಿಕ ಬೆಳವಣಿಗೆಯ ಮೇಲೆ ಬಹಳಷ್ಟು ಕೆಟ್ಟ ಪರಿಣಾಮ ಬೀರುತ್ತದೆ. ತಾಯಿಯ ದೇಹದಲ್ಲಿನ ಪೋಷಕಾಂಶಗಳ ಕೊರತೆಯಿಂದಾಗಿ ಮಗುವಿನ ತೂಕ ಕುಂಠಿತವಾಗುತ್ತದೆ. ಅತಿ ಕಡಿಮೆ ತೂಕವಿರುವ ಮಹಿಳೆಯರಿಗೆ ಹೆರಿಗೆಯ ನಂತರದ ಆರು ತಿಂಗಳ ಕಾಲ ಮಗುವಿಗೆ ಎದೆಹಾಲುಣಿಸುವ ಸಾಮರ್ಥ್ಯ ಇರುವುದಿಲ್ಲ, ಪರಿಣಾಮವಾಗಿ ಮಕ್ಕಳ ಆರೋಗ್ಯ ಹಾಗೂ ಮೆದುಳಿನ ಬೆಳವಣಿಗೆಗೆ ಹಲವಾರು ತೊಂದರೆಗಳಾಗುತ್ತವೆ. ಜೊತೆಗೆ ಅನಕ್ಷರಸ್ಥ ಮಹಿಳೆಯರಲ್ಲಿ ಆರೋಗ್ಯದ ಕುರಿತಾದ ಅರಿವಿಲ್ಲದಾಗ ಮಕ್ಕಳ ಸರಿಯಾದ ಆರೈಕೆ ನೀಡಲಾಗುವುದಿಲ್ಲ, ಇದರಿಂದಾಗಿ ಮಕ್ಕಳು ಡಯೇರಿಯಾ, ಹಾಗೂ ಇತರ ಕಾಯಿಲೆಗಳಿಗೆ ತುತ್ತಾಗಿ ಹಸುಗೂಸುಗಳು ಸಾವಿಗೆ ತುತ್ತಾಗುತ್ತಿರುವ ದಾರುಣ ಪರಿಣಾಮಗಳು ಎದುರಾಗುತ್ತವೆ. ಮಾನಸಿಕ ಹಾಗೂ ದೈಹಿಕ ಬೆಳವಣಿಗೆ ಕುಂಠಿತವಾದ ಮಕ್ಕಳಲ್ಲಿ ಶೈಕ್ಷಣಿಕ ಸಾಧನೆಗಳಲ್ಲಿ ಸೋಲು ಕಂಡುಬಂದು ವಿದ್ಯಾಭ್ಯಾಸವನ್ನು ಅರ್ಧಕ್ಕೆ ನಿಲ್ಲಿಸುವ ಪರಿಸ್ಥಿತಿಯೂ ಉಂಟಾಗಿರುವುದನ್ನು ನಾವು ನೋಡಬಹುದಾಗಿದೆ. ಇದು ಮಕ್ಕಳ ಸಮಗ್ರ ಬೆಳವಣಿಗೆಯ ಮೇಲೂ ಪರಿಣಾಮ ಬೀರುತ್ತದೆ.

ಹನ್ನೊಂದನೆಯ ಪಂಚವಾರ್ಷಿಕ ಯೋಜನೆಯು ಹೆಂಗಸರು ಹಾಗೂ ಹೆಣ್ಣು ಮಕ್ಕಳಲ್ಲಿನ ಅನೀಮಿಯಾವನ್ನು 2012ರ ವೇಳೆಗೆ 50% ರಷ್ಟು ತಡೆಗಟ್ಟುವ ಗುರಿಯನ್ನು ಹೊಂದಿತ್ತು. 2005–06ರಲ್ಲಿ ಶೇಕಡಾ 55.3% ರಷ್ಟು 15–49ರ ವಯಸ್ಸಿನ ಮಹಿಳೆಯರು ಅನೀಮಿಯಾದಿಂದ ಬಳಲುತ್ತಿರುವುದು ಕಂಡುಬಂದಿತ್ತು. ಹಲವಾರು ಕೆಳ ಆರ್ಥಿಕ ಮಟ್ಟದ ರಾಜ್ಯಗಳಲ್ಲಿ 60% ಮಹಿಳೆಯರು ಅನೀಮಿಯಾದಿಂದ ಬಳಲುತ್ತಿದ್ದರು ಹಾಗೂ ಈ ಕುರಿತಾದ ಯಾವುದೇ ಸುಧಾರಣೆಯೂ ಇದುವರೆಗೂ ಕಂಡುಬಂದಿಲ್ಲ.



ನಾವು ಗಮನಿಸಬೇಕಾದ ಅಂಶವೇನೆಂದರೆ ಯಾವ ಪ್ರದೇಶ/ಜಿಲ್ಲೆ/ರಾಜ್ಯದಲ್ಲಿ ಸಾಮಾಜಿಕ ಹಾಗೂ ಆರ್ಥಿಕ ಬೆಳವಣಿಗೆ ಉತ್ತಮವಾಗಿದೆಯೋ ಅಂತಹ ರಾಜ್ಯಗಳಲ್ಲಿ ಅಪೌಷ್ಟಿಕತೆಯ ಸಮಸ್ಯೆ ಕಡಿಮೆಯಿರುತ್ತದೆ. ಮಕ್ಕಳಿಗೆ ಶಾಲೆಯಲ್ಲಿ ಪೌಷ್ಟಿಕ ಆಹಾರ ದೊರೆಯುವಂತೆ ಮಾಡಬಹುದು, ಆದರೆ ಹೆಂಗಸರಿಗೆ ಗುಂಪಿನಲ್ಲಿ ಪೌಷ್ಟಿಕ ಆಹಾರ ಸಿಗುವಂತೆ ಮಾಡುವುದು ಕಷ್ಟವಾಗುತ್ತದೆ. ಈ ಸಮಸ್ಯೆಯನ್ನು ತಡೆಗಟ್ಟಲು ಸಮಾಜದ ಅಭಿವೃದ್ಧಿ ಮುಖ್ಯವಾಗುತ್ತದೆ. ಮಹಿಳೆಯರಲ್ಲಿ ಅಪೌಷ್ಟಿಕತೆಯನ್ನು ತಡೆಗಟ್ಟಲು ಸರ್ಕಾರ ಅಂಗನವಾಡಿಗಳ ಮೂಲಕ ಅನೇಕ ಯೋಜನೆಗಳನ್ನು ಜಾರಿಗೊಳಿಸಿದೆ. ಆದರೆ ಯಾವುದೇ ರಾಜ್ಯದಲ್ಲೂ ಮಹಿಳೆಯರ ಆರೋಗ್ಯದ ಕುರಿತಾಗಿ ಜಾರಿಗೊಂಡ ಯೋಜನೆಗಳು ಗಂಭೀರವಾಗಿ ಕಾರ್ಯರೂಪಕ್ಕೆ ಬಂದಿರುವ ಉದಾಹರಣೆಗಳು ಎಲ್ಲೂ ಇಲ್ಲ.

ಸಮಾಜದ ಪ್ರತಿಯೊಬ್ಬರೂ ತಮ್ಮ ತಮ್ಮ ಮನೆಯ ಹೆಣ್ಣುಮಕ್ಕಳನ್ನು, ಮಹಿಳೆಯರನ್ನು ಉತ್ತಮ ಆರೋಗ್ಯವಂತರನ್ನಾಗಿ ಬೆಳೆಸಿದಾಗಷ್ಟೇ ಉತ್ತಮ ಆರೋಗ್ಯವಂತ ಸಮಾಜ ನಿರ್ಮಾಣವಾಗುವುದಕ್ಕೆ ಸಾಧ್ಯ. ಪೋಷಕರು ಹೆಣ್ಣುಮಗುವನ್ನು ಗಂಡು ಮಗುವಿನಂತೆಯೇ ಪ್ರೀತ್ಯಾದರಗಳಿಂದ ಬೆಳೆಸಬೇಕು. ಗಂಡುಮಗು ಹಾಗೂ ಹೆಣ್ಣುಮಗುವಿಗೆ ಸಮಾನವಾಗಿ ಆಹಾರ ಉಣಿಸಬೇಕು. ಹೆಣ್ಣುಮಗುವಿಗೆ ಸಾಕಷ್ಟು ಪ್ರಮಾಣದಲ್ಲಿ ಪೌಷ್ಟಿಕ ಆಹಾರವನ್ನು ಕೊಟ್ಟಾಗ ಮಾತ್ರ ಅವಳು ಆರೋಗ್ಯವಂತ ಯುವತಿಯಾಗಿ ಹಾಗೂ ಆರೋಗ್ಯವಂತ ಮಹಿಳೆಯಾಗಿ ಬೆಳೆಯುತ್ತಾಳೆ ಮತ್ತು ಆಕೆ ಆರೋಗ್ಯವಂತ ಮಗುವನ್ನು ಹೆರುವುದಕ್ಕೆ ಅಂತಹ ಬೆಳವಣಿಗೆ ಅವಶ್ಯಕವಾಗಿ ಆಕೆಗೆ ಇರಬೇಕಾಗುತ್ತದೆ. ಹೆಣ್ಣುಮಗುವಿಗೆ ಉತ್ತಮ ಆಹಾರ ನೀಡುವುದಲ್ಲದೆ ಅದರ ಪ್ರಾಮುಖ್ಯತೆ, ಅವಳ ಸ್ವಂತ ಆರೋಗ್ಯವನ್ನು ಮಾತ್ರ ಕಾಪಾಡುವುದಲ್ಲದೆ ಮುಂದಿನ ಪೀಳಿಗೆಯ ಆರೋಗ್ಯವನ್ನೂ ಕಾಪಾಡುವುದಾಗಿದೆ ಎಂದು ವಿವರಿಸಿ ಹೇಳಬೇಕು.

ಸಮಾಜ ಮಹಿಳೆಯನ್ನು ನೋಡುವ ದೃಷ್ಟಿ ಬದಲಾಗಬೇಕು. ಮಹಿಳೆಯರಿಗೆ ಎಲ್ಲ ರೀತಿಯ ವೈದ್ಯಕೀಯ ಸೌಲಭ್ಯಗಳು ದೊರಕುವಂತಾಗಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಮಹಿಳೆಯರು ವಿದ್ಯಾವಂತರಾಗಿ ತಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸುವಂತಾದಾಗ ಮಾತ್ರ ಸಮಾಜ ಈ ಅಪೌಷ್ಟಿಕತೆಯ ವಿಷವರ್ತುಲದಿಂದ ಹೊರಬರಲು ಸಾಧ್ಯ.

❑

ಕಳೆದ ಸಂಚಿಕೆಯಲ್ಲಿ ಪ್ರಕಟವಾಗಿದ್ದ 'ಲಂಕೇಶರ ಚಿಂತನೆಗಳಲ್ಲಿ: ಸ್ತ್ರೀತ್ವದ ಚಹರೆಗಳು' ಎಂಬ ಲೇಖನದಲ್ಲಿ
ಮೂಡಿಬಂದಿದ್ದ ಲಂಕೇಶರ ಚಿತ್ರದ ಚಿತ್ರಕಾರರು ಬಿ.ಜಿ. ಗುಜ್ಜಾರಪ್ಪ.

ಸಂವೇದನಾಶೀಲ ಲೇಖಕಿಯರ ಎರಡು ಕವಿತೆಗಳ ವಿಶ್ಲೇಷಣೆ

■ ಡಾ. ಎಂ.ಡಿ. ಒಕ್ಕುಂದ

ಸವಿತಾ ನಾಗಭೂಷಣ ಅವರ 'ಮಹಮದನ ಪ್ರೇಮಪತ್ರ'

ಸವಿತಾ ನಾಗಭೂಷಣ ಕನ್ನಡ ಮಹಿಳಾ ಕಾವ್ಯದ ಒಂದು ವಿಶಿಷ್ಟ ದನಿ. ಕನ್ನಡ ಸಾಂಸ್ಕೃತಿಕ ಲೋಕದಲ್ಲಿ ಎಲ್ಲ ಬಗೆಯ ಜನಪರ ಚಳವಳಿಗಳು ಹೆಚ್ಚು ಕ್ರಿಯಾಶೀಲವಾಗಿರುವ ಕಾಲದಲ್ಲಿ ಬರೆಯ ತೊಡಗಿದ ಸವಿತಾ, ಯಾವದೇ ನಿರ್ದಿಷ್ಟ ಸಿದ್ಧಾಂತಕ್ಕೆ ಬದ್ಧತೆಯನ್ನು ತೋರ್ಪಡಿಸಿದವರಲ್ಲ. ಬದುಕನ್ನು ಸರಳವಾಗಿ, ಸಹಜವಾಗಿ, ಮಾನವೀಯ ದೃಷ್ಟಿಯಿಂದ ಮುಖಾಮುಖಿಯಾಗುತ್ತ ತಮ್ಮ ಸೃಜನಶೀಲತೆಯ ತಾತ್ವಿಕತೆಯನ್ನು ರೂಪಿಸಿಕೊಂಡವರು. ಉದಾರವಾದಿ ತಾತ್ವಿಕತೆಯ ಆಳದಲ್ಲಿ ಕಂಡುಬರುವ ವೈರುಧ್ಯಗಳನ್ನು ಜನಪರ ಸಂವೇದನೆಯಿಂದ ಮೀರಿದವರು. ಸ್ತ್ರೀಯಾತ್ಮಕ ಅನನ್ಯತೆ ಹಾಗೂ ವ್ಯಕ್ತಿಯಾಗಿ ಬದುಕಿಗೆ ಮುಖಾಮುಖಿಯಾಗಿರುವುದು ಇವರ ವೈಶಿಷ್ಟ್ಯ. ಸರಳವೂ ಸಹಜವೂ ಆದ ನಿರೂಪಣೆಯನ್ನೊಳಗೊಂಡ ಇವರ ರಚನೆಗಳು ಆಳದಲ್ಲಿ ಸಂಕೀರ್ಣ ಅನುಭವಗಳನ್ನು ಕಟ್ಟಿ ಕೊಡುತ್ತವೆ. ನಿರ್ದಿಷ್ಟ ಪ್ರಣಾಳಿಕೆಯಿಂದ ಹೊರಡುವ ಕಾವ್ಯ ಹಾಗೂ ಕಾವ್ಯವೇ ಹೊಸ ಪ್ರಣಾಳಿಕೆಯನ್ನು ರೂಪಿಸುವ ಮಾದರಿಗೂ ಇರುವ ವ್ಯತ್ಯಾಸವನ್ನು ಇವರ ಕಾವ್ಯದ ಮೂಲಕ ಅರಿಯಬಹುದಾಗಿದೆ. 80ರ ದಶಕದ ದಲಿತ ಬಂಡಾಯ ಚಳವಳಿ, ಸ್ತ್ರೀವಾದಿ ಚಿಂತನೆ ಮತ್ತು ಜನಪರ ಹೋರಾಟಗಳು ಇವರನ್ನು ಗಾಢವಾಗಿ ಪ್ರಭಾವಿಸಿದ್ದರೂ ಅದು ಇವರಲ್ಲಿ ವಾಚ್ಯವಾಗಿ ಅಭಿವ್ಯಕ್ತಗೊಳ್ಳುವುದಿಲ್ಲ. ಚಿಂತನೆಗಳು ಬದುಕಿನ ಅನುಭವದ ಮೂಲಕ ಸಂವೇದನೆಗಳಾಗಿ ಅಭಿವ್ಯಕ್ತಗೊಳ್ಳುತ್ತವೆ. ಸರಳ ಸಹಜ ತೀವ್ರ ಆದರೆ ಅಷ್ಟೇ ಸಂಕೀರ್ಣ ಅನುಭವಗಳನ್ನು ಇವರ ಕವಿತೆಗಳು ಸರಳವಾಗಿಯೇ ಅಭಿವ್ಯಕ್ತಿಸುತ್ತವೆ. ಕನಿಷ್ಠ ಸಂವಹನಶೀಲತೆಯನ್ನುಳಿಸಿ ಕೊಂಡೇ ವಿಸ್ತೃತ ಅರ್ಥಗಳೆಡೆಗೆ ಚಲಿಸುವ ಕಾವ್ಯದ ಮಾದರಿ ಇವರದು. ವಚನಕಾರರ ಹಾಗೂ ಬೇಂದ್ರೆಯವರ ಮಾದರಿ ಇದು. 'ಮಹಮದನ ಪ್ರೇಮ ಪತ್ರ' ಈ ಮೇಲಿನ ಮಾತುಗಳಿಗೆ ಉದಾಹರಣೆ ಯಾಗಿದೆ.

ನಿತ್ಯಜಗತ್ತಿನ ಭಾಗವಾಗಿರುವ ನಿಸರ್ಗಸಹಜ ಪ್ರೇಮ, ಅದನ್ನು ನಿರ್ಬಂಧಿಸುವ ಸಮಾಜ, ಸಮಾಜವನ್ನು ನಿಯಂತ್ರಿಸುವ ಧರ್ಮ ಹಾಗೂ ಆ ನಿಯಂತ್ರಣದಾಚೆ ಪುಟಿದು ನಿಲ್ಲುವ ಗಂಡು ಹೆಣ್ಣಿನ ಪ್ರೇಮದ ಒಂದು ಅಖಂಡ ಸಂಬಂಧವನ್ನು ಅದರೆಲ್ಲ ಸೂಕ್ಷ್ಮತೆ ಸಂಕೀರ್ಣತೆಗಳೊಂದಿಗೆ ಸರಳವಾಗಿ ಅಭಿವ್ಯಕ್ತಿಸಿರುವುದು ಈ ಕವಿತೆಯ ವೈಶಿಷ್ಟ್ಯ. ಕರಾವಳಿಯ ಪರಿಸರದಲ್ಲಿ ಕವಿತೆ ಮೈದಾಳಿರುವುದರಿಂದ ಮತ್ತು 90ರ ದಶಕದ ಕೊನೆಯಲ್ಲಿ ಬರೆಯಲ್ಪಟ್ಟಿದ್ದರಿಂದ ಕರಾವಳಿಯ ಹೆಜ್ಮಾಡಿಯಲ್ಲಿ ನಡೆದ ಘಟನೆಯನ್ನು ತಟ್ಟನೇ ನೆನಪಿಸುತ್ತದೆ. ಹೊಟ್ಟೆಪಾಡಿಗಾಗಿ ಕೂಲಿಕೆಲಸ ಕೇಳಿ ವನಿತಾ ಎಂಬ 17ರ ಪ್ರಾಯದ ಹುಡುಗಿ ಮುಸ್ಲಿಂ ಗೃಹಸ್ಥನೊಬ್ಬನನ್ನು ಮಾತನಾಡಿಸಿದ ತಪ್ಪಿಗೆ ಹಿಂದೂ ಸಮುದಾಯದ ಯುವಕರ ಗುಂಪು ಇಬ್ಬರ ಮೇಲೆ ಹಲ್ಲೆ ನಡೆಸುತ್ತದೆ. ವನಿತಾ ಆತ್ಮಹತ್ಯೆಮಾಡಿಕೊಂಡು ಸಾವನ್ನಪ್ಪುತ್ತಾಳೆ. ಇಸ್ಮಾಯಿಲ್ ಎಂಬ ಅಮಾಯಕ, ವೃಷಣಗಳಿಗೆ ಮಾರಣಾಂತಿಕ ಪೆಟ್ಟು ತಿಂದು ಬದುಕಿದ್ದಾನೆ. ಗಾಬರಿ ಹುಟ್ಟುವುದು ಕ್ರೌರ್ಯ ಮೆರೆದ ಯುವಕರ ಗುಂಪಿನ ಬಗ್ಗೆ ಅಲ್ಲ. ಇಂಥ ಮತಾಂಧ ಫ್ಯಾಸಿಸ್ಟ್ ಮನೋಧರ್ಮವನ್ನು ರೂಪಿಸುತ್ತಿರುವ ಕೋಮುವಾದಿ ಚಿಂತನೆಯ ಬಗ್ಗೆ. ಹಿಂದೂ ಮುಸ್ಲಿಂ ಗಂಡು ಹೆಣ್ಣಿನ ಸಂಬಂಧವನ್ನು ಕುರಿತಂತೆ ಇಂಥ ಅಸಂಖ್ಯ ಘಟನೆಗಳು ದೇಶದಾದ್ಯಂತ ನಿರಂತರವಾಗಿ ಜರಗುತ್ತಲೇ ಇರುತ್ತವೆ. ಮುಸ್ಲಿಂ ಗಂಡು ಮತ್ತು ಹಿಂದೂ ಹೆಣ್ಣು ಮಾತನಾಡಿದ ಮಾತ್ರಕ್ಕೆ ಪ್ರೇಮದ ಬಣ್ಣಕಟ್ಟಿ ಹಿಂಸೆಗಿಳಿದ ಸಾಮಾಜಿಕ ಮನಸ್ಥಿತಿಯಲ್ಲಿ ನಿಜವಾಗಿಯೂ ಪ್ರೀತಿಸಿದರೆ ಉಂಟಾಗ ಬಹುದಾದ ಆಕ್ರೋಶ ಹಾಗೂ ಅದರಿಂದ ಪ್ರೇಮಿಗಳು ಅನುಭವಿಸ ಬಹುದಾದ ತಲ್ಲಣ ಆತಂಕಗಳನ್ನು ಊಹಿಸುವುದೂ ಕಷ್ಟ. ಈ ಕವಿತೆ ಸಮಾಜದ ಕ್ರೌರ್ಯ ಮತ್ತು ಪ್ರೇಮಿಗಳ ತಲ್ಲಣವನ್ನು ನಿರುಮ್ಮಳವಾಗಿ ಹಿಡಿದಿಟ್ಟಿದೆ.

ವಸಾಹತುಶಾಹಿ ಇತಿಹಾಸ ತನ್ನ ಒಡೆದು ಆಳುವ ನೀತಿಯ ಭಾಗವಾಗಿ ಹಿಂದೂ ಮುಸ್ಲಿಂ ಸಂಬಂಧದಲ್ಲಿ ಹಲವಾರು ಹುಸಿ ಮಿತ್‌ಗಳನ್ನು ಸೃಷ್ಟಿಸಿದೆ. ಸಂಶಯ, ಅಪನಂಬಿಕೆ, ದ್ವೇಷಗಳನ್ನು ವ್ಯವಸ್ಥಿತವಾಗಿ ಬಿತ್ತಿದೆ. ಆಕ್ರಮಣಶೀಲರಾಗಿ ಮುಸ್ಲಿಂ ರಾಜರು ಹಿಂದೂ ಹೆಣ್ಣು ಮಕ್ಕಳನ್ನು ಬಲಾತ್ಕರಿಸಿದರೆಂಬುದು ಅವುಗಳಲ್ಲಿ ಒಂದಾಗಿದೆ. ಯುದ್ಧದಲ್ಲಿ ಸೋತ ಮತ್ತು ಸತ್ತ ರಾಜನ ಹೆಂಡಂದಿರನ್ನು ದಾಸಿಯರನ್ನಾಗಿಸಿಕೊಳ್ಳುವುದು, ಮಧ್ಯಯುಗೀನ ಪ್ರಭುತ್ವದ ಲಕ್ಷಣ ವಾಗಿತ್ತು. ಇದು ರಾಜಶಾಹಿಯ ನೀಚ ಕೃತ್ಯವಾಗಿತ್ತು. ಇದಕ್ಕೆ ಹಿಂದೂ ಮುಸ್ಲಿಂ ಎಂಬ ವರ್ಗೀಕರಣ ವಿರಲಿಲ್ಲ. ಸ್ತ್ರೀ ಸಮುದಾಯದ ಮೇಲಿನ ದೌರ್ಜನ್ಯ ಹಿಂದೂ ಮುಸ್ಲಿಂ ಎರಡೂ ಧರ್ಮಗಳ ರಾಜರಿಂದ ನಡೆಯುತ್ತಿತ್ತು.



ಪ್ರಭುತ್ವದ ಲಕ್ಷಣವನ್ನು ಧರ್ಮಕ್ಕೂ ಜನಾಂಗಕ್ಕೂ ಆರೋಪಿಸುವ ಮೂಲಕ ದ್ವೇಷ ವನ್ನು ಬಿತ್ತಲಾಯಿತು. ವಸಾಹತುಶಾಹಿ ಕಾಲಘಟ್ಟದಲ್ಲಿ ಹಿಂದೂ ಮುಸ್ಲಿಮರ ನಡುವೆ ಬಿರುಕನ್ನು ಹುಟ್ಟುಹಾಕಿದ ಈ ಬಗೆಯ ಮಿತ್‌ಗಳು 90ರ ದಶಕದ ನಂತರದಲ್ಲಿ ನವವಸಾಹತುಶಾಹಿ ಆಗಮಿಸುವು ದರೊಂದಿಗೆ ಮತ್ತೆ ಪ್ರಚಲಿತಗೊಳ್ಳತೊಡಗಿದವು. ಸ್ವಾತಂತ್ರ್ಯದ ಕಾರಣದಿಂದ ಮಸಕಾಗುತ್ತಿದ್ದ ಮಿತ್‌ಗಳು ಕ್ರಿಯಾಶೀಲವಾದವು. ನವವಸಾಹತುಶಾಹಿಯ ಆರ್ಥಿಕ ಆಕ್ರಮಣವನ್ನು ದೇಶ ಒಪ್ಪಿಕೊಳ್ಳುವಂತೆ ಮಾಡಲು ಕೋಮುವಾದಿ ರಾಜಕಾರಣ ಮತ್ತೆ ಪ್ರಕಾಶಮಾನವಾಯಿತು. ಸ್ವಾತಂತ್ರ್ಯೋತ್ತರ ಕಾಲಘಟ್ಟದಲ್ಲಿ ಸಹಬಾಳ್ವೆಯನ್ನು ರೂಢಿಸಿಕೊಳ್ಳುತ್ತಿದ್ದ ಹಿಂದೂ ಮುಸ್ಲಿಂ ಸಂಬಂಧದಲ್ಲಿ ಮತ್ತೆ ದೊಡ್ಡ ಕಂದಕ ನಿರ್ಮಾಣ ವಾಯಿತು. ಆದರೆ ನಾಡಿನ ಸಾಹಿತಿ, ಕಲಾವಿದರು, ಚಿಂತಕರು ಹೋರಾಟಗಾರರು ಸೌಹಾರ್ದತೆಯ ಪರವಾದ ದನಿಯನ್ನು ಎತ್ತತೊಡಗಿದರು. 90ರ ದಶಕದ ಹೊಸ ಆರ್ಥಿಕ ಸಾಮಾಜಿಕ ಪರಿಸರದಲ್ಲಿ ಈ ಕವಿತೆ ರೂಪತಾಳಿದೆ.

ಪ್ರೇಮ ಮತ್ತು ಪ್ರೇಮ ವಿವಾಹಗಳನ್ನು ಜಾತಿಬದ್ಧ ಸಮಾಜ ಯಾವಾಗಲೂ ವಿರೋಧಿಸುತ್ತಲೇ ಬಂದಿದೆ. ಪ್ರೀತಿಸುವ ಹಕ್ಕನ್ನು ಕಸಿದುಕೊಂಡ ಜಾತಿವ್ಯವಸ್ಥೆಗೆ ಪ್ರತಿಕ್ರಿಯೆಯಾಗಿ ಕನ್ನಡದಲ್ಲಿ ಹಲವಾರು ಕವಿತೆಗಳು ಪ್ರಕಟವಾಗಿವೆ. ವಚನಕಾರರ ಹೋರಾಟ ಅಂತ್ಯಕಾಣಲು ಒಂದು ಅಂತರ್ಜಾತಿ ವಿವಾಹ ನೆಪವಾಗಿತ್ತು. 'ನಾವು ಹುಡುಗಿಯರೇ ಹೀಗೆ' (ಪ್ರತಿಭಾ ನಂದಕುಮಾರ) 'ಇದು ಭಾರತ ಇಲ್ಲಿ ಪ್ರೀತಿಸಿದರೆ

ಮಹಾಭಾರತ' (ಬಿ.ಎಂ.ಹನೀಫ್) 'ನನ್ನ ಮದವ್ಯಾಗ ನನ್ನ ಲಗ್ನಾನ ಆಗಲಿಲ್ಲ', (ಡಾ.ಸಿದ್ದನಗೌಡ ಪಾಟೀಲ) ಮೊದಲಾದ ಕವಿತೆಗಳು 90ರ ದಶಕದಲ್ಲಿ ಜಾತಿವ್ಯವಸ್ಥೆಯನ್ನು ಪ್ರೇಮದ ಹಿನ್ನೆಲೆಯಲ್ಲಿ ತಿರಸ್ಕರಿಸುತ್ತವೆ. ಜಾತಿನಾಶಕ್ಕೆ ಪ್ರೇಮವಿವಾಹ ಒಂದು ಪರಿಹಾರವೆಂದು ಸಮಾಜವಾದಿ ಚಿಂತಕರು ಪ್ರತಿಪಾದಿಸಿದ್ದಾರೆ. ತನ್ನ ಬೇರುಗಳನ್ನು ಅಲ್ಲಾಡಿಸುವ ಪ್ರೇಮವಿವಾಹಗಳನ್ನು ಜಾತಿವ್ಯವಸ್ಥೆ ನಾಶಗೊಳಿಸುವ ಎಲ್ಲ ಪ್ರಯತ್ನ ವನ್ನೂ ಮಾಡುತ್ತವೆ. ಅಂತರ್ಧರ್ಮೀಯ ಪ್ರೇಮ ಮತ್ತು ಪ್ರೇಮ ವಿವಾಹದ ವಿಷಯದಲ್ಲಿ ಸಮಾಜ ಇನ್ನೂ ಕ್ರೂರವಾಗಿ ವರ್ತಿಸುತ್ತದೆ. ಇತ್ತೀಚೆಗೆ ಕರಾವಳಿ ಕರ್ನಾಟಕದಲ್ಲಿ ಒಂದು ಜೋಡಿಯನ್ನು ಕೊಲೆಮಾಡಲಾಯಿತು. ವಿಶಾಲ ಹಿಂದುತ್ವದ ಪ್ರತಿಪಾದನೆ ಮಾಡುತ್ತಿರುವ ಕೋಮುವಾದಿ ಪರಿಸರದಲ್ಲಿ ಅಂತರ್ಜಾತಿ ವಿವಾಹಕ್ಕಿಂತ ಅಂತರ್ಧರ್ಮೀಯ ಪ್ರೇಮವಿವಾಹ ಒಂದು ಮಹಾ ಅಪರಾಧವಾಗಿ ಕಾಣತೊಡಗಿದೆ. ಇಂಥ ಸಾಮಾಜಿಕ ವಾಸ್ತವದ ಹಿನ್ನೆಲೆಯಲ್ಲಿ ಕವಿತೆ ಹುಟ್ಟಿಕೊಂಡಿದೆ.

ಗಂಡು ಹೆಣ್ಣಿನ ಸಂಬಂಧವನ್ನು ಲೈಂಗಿಕ ಸಂಬಂಧದ ಭಾಗ ವಾಗಿಯೇ ಗ್ರಹಿಸುವ ಅನಾರೋಗ್ಯಕರ ಮನೋಧರ್ಮ ನಮ್ಮ ಸಮಾಜದ್ದು. ಹುಡುಗನೊಬ್ಬನ ಪತ್ರ ಹುಡುಗಿಗೆ ನೇರವಾಗಿ ಮುಟ್ಟಲು ಸಾಧ್ಯವಿಲ್ಲ. ಗಂಡು ಹೆಣ್ಣಿನ ಸಂಬಂಧ ಸಮಾಜ ಮತ್ತು ಅದರ ಭಾಗವಾದ ಕುಟುಂಬದ ಕಣ್ಣಲ್ಲಿ ಹುಟ್ಟಿಸಿರುವ ಆತಂಕ, ಸಂಶಯಗಳನ್ನು ನಿರೂಪಿಸುತ್ತಾ ಕವಿತೆ ಆರಂಭವಾಗುತ್ತದೆ. ಮೂಲಭೂತವಾದಿ ಸಾಮಾಜಿಕ ಪರಿಸರ ಹಾಗೂ ಲಿಂಗ ಅಸಮಾನತೆಯನ್ನು ನಂಬಿದ ವ್ಯವಸ್ಥೆಗಳು ಮನುಷ್ಯರ ಖಾಸಗೀ ಬದುಕಿನಲ್ಲಿ ಪ್ರವೇಶ ಪಡೆಯುತ್ತದೆ. ವೈಯಕ್ತಿಕ ಸ್ವಾತಂತ್ರ್ಯವನ್ನು ಅಪಹರಿಸುತ್ತದೆ. ಅಂತರ್ಧರ್ಮೀಯ ಪ್ರೇಮಕ್ಕೆ ತುಡಿಯುತ್ತಿರುವ 'ಹೆಣ್ಣು' ಪುರುಷಪ್ರಧಾನ ವ್ಯವಸ್ಥೆಯಿಂದ ಪರೀಕ್ಷೆಗೊಳ ಪಡುತ್ತಾಳೆ. ಪತ್ರ ಬರೆದವ ಮಹಮದ ಮುಸ್ಲಿಂ ಹುಡುಗ. ಬರೆದದ್ದು ಹಿಂದೂ ಹುಡುಗಿಗೆ. ಅದು ಅವಳ ಕೈಗೆ ತಲುಪುವ ಮುಂಚೆ ಹತ್ತಾರು ಜನ ಓದಿಯಾಗಿದೆ.

ಪತ್ರದಲ್ಲಿ ನಿರೂಪಿತವಾದ ಸಂಗತಿಗಳು ಕವಿತೆಯನ್ನು ಪರಿಸರಬದ್ಧ ಗೊಳಿಸುತ್ತದೆ. ಪ್ರಾದೇಶಿಕ ಅನನ್ಯತೆಯನ್ನು ನೀಡುತ್ತವೆ. ಸಮುದ್ರದ ಹಿನ್ನೀರು, ಮಲ್ಪೆಯ ಮೀನು, ಗೇರು ಹಣ್ಣು, ಗುಳ್ಳಗಳ ಬಗ್ಗೆ ಅಚ್ಚಗನ್ನಡದಲ್ಲಿ ಬರೆದಿದ್ದ. 'ಅಚ್ಚಗನ್ನಡ' ಎಂಬ ಒತ್ತನ್ನು ಗಮನಿಸಬೇಕು. ಅಲ್ಪಸಂಖ್ಯಾತ ಮನಸ್ಸು ತನ್ನ ಮಾತೃಭಾಷೆಯೊಂದಿಗೆ ಪರಿಸರದ ಭಾಷೆಯ ಜತೆಗೂ ಪಡೆಯುವ ಬೆಸುಗೆಯನ್ನು ಧ್ವನಿಸುತ್ತದೆ. ಎಲ್ಲರಿಗೂ ತಿಳಿಯುವಂಥ ಅಚ್ಚಗನ್ನಡದಲ್ಲಿ ಬರೆದಿದ್ದರೂ ಸಮುದಾಯ ತನ್ನ ಭಾಷೆಯಲ್ಲಿ ಸಂವಹನಗೊಂಡ ಅರ್ಥವನ್ನೇ ನಿರಾಕರಿಸುತ್ತದೆ. ಪ್ರೇಮಪತ್ರವೆಂದು ಭಾವಿಸುತ್ತದೆ. ಗೇರು, ಮೀನು, ಸಮುದ್ರ ಇವಾವೂ ಸಮಾಜದ ನಿಯಂತ್ರಣಕ್ಕೆ ಒಳಪಟ್ಟಿಲ್ಲ. ಮನುಷ್ಯರಾಗಿ ಹುಟ್ಟಿದ್ದೇ ಈ ನಿರ್ಬಂಧಕ್ಕೆ ಕಾರಣ. ಬಹುದೊಡ್ಡ ಬುದ್ಧಿಜೀವಿಯೆಂದು ಭಾವಿಸಿರುವ ಮನುಷ್ಯ ಪಡೆದುಕೊಳ್ಳುವ ನಿರ್ಬಂಧಗಳು ಪ್ರಕೃತಿಯ ಸಾಮೀಪ್ಯದಲ್ಲಿ ವಿಡಂಬನೆಗೆ ಒಳಗಾಗಿವೆ. ಮನುಷ್ಯನ ಪಾರತಂತ್ರ್ಯದ ದುರಂತ ಪ್ರಜ್ಞೆ ಮತ್ತು ಪ್ರಕೃತಿಯ ಸ್ವಾತಂತ್ರ್ಯದ ಉಲ್ಲಾಸಗಳು ಮುಖಾಮುಖಿಯಾಗಿವೆ.

ಪತ್ರ ಬರೆದವ 'ಮುಸ್ಲಿಂ' ಗಂಡು ಎಂಬ ಕಾರಣಕ್ಕೆ ಅದು 'ಪ್ರೇಮ ಪತ್ರ'ವೆಂಬ ಮುದ್ರೆಯನ್ನು ಪಡೆಯುತ್ತದೆ. ಗಂಡು ಹೆಣ್ಣಿನ ಸಂಬಂಧದಲ್ಲಿ ಈ ಬಗೆಯ ಪೂರ್ವಾಗ್ರಗಳು ಸೃಷ್ಟಿಯಾಗಲು ಕಾರಣ ಧರ್ಮ ಮತ್ತು ಜಾತಿಗಳ ನಡುವಿನ ಅಸ್ಪೃಶ್ಯತೆ. ಮಾನವ ಸಹಜ ಪ್ರೇಮಕ್ಕೆ ಅವಕಾಶ ನೀಡದ ಜಡ ಧರ್ಮಗಳು ಮಾನವೀಯವಾಗಿರಲು ಸಾಧ್ಯವಿಲ್ಲ. ಧಾರ್ಮಿಕ ಸ್ಪೃಶ್ಯತೆಗೆ ನಡೆಯುವ ಪ್ರಯತ್ನಗಳನ್ನು ಧರ್ಮಗಳು ಕಾಯತೊಡಗುತ್ತವೆ. ಧರ್ಮ ಮತ್ತು ಸಮುದಾಯಗಳು ಮನುಷ್ಯರನ್ನು ತಮ್ಮ ಖಾಸಗೀ ಆಸ್ತಿ ಎಂದು ಭಾವಿಸುತ್ತವೆ. ಸಂಬಂಧಪಡದ ಯಾವ ಯಾವುದೋ ಶಕ್ತಿಗಳು ಕಾವಲು ಕಾಯತೊಡಗುತ್ತವೆ. ಆಗ ವ್ಯಕ್ತಿಗಳು ಅನುಭವಿಸುವ ಮಾನಸಿಕ ಹಿಂಸೆ ತಳಮಳಗಳನ್ನು ಕವಿತೆ ವಿವರಿಸುತ್ತದೆ. 'ಮಹಮದನಿಗೆ ಗುದ್ದು ಮತ್ತು ತನಗೆ ಎಚ್ಚರಿಕೆ'.

ಒಮ್ಮೆ ಮಹಮ್ಮದನನ್ನು
ಭೇಟಿಯಾಗಬೇಕು
ಪ್ರೇಮಭಾವ ಅರಳಿಸಿದ್ದಕ್ಕೇ
ಕ್ಷಮೆ ಬೇಡಬೇಕು ಎಂದೆಲ್ಲಾ
ಅಂದುಕೊಂಡೆನಾದರೂ...
ಪ್ರತಿಬಾರಿ...
ನಮ್ಮಿಬ್ಬರ ನಡುವೆ
ಮಸೀದಿಯ ಗುಡ್ಡ
ಅಡ್ಡ ಬರುತ್ತಿತ್ತು
ಅದೊಂದು ದಿನ
ದೊಡ್ಡ ದೇವರ ಪಲ್ಲಕ್ಕಿ ಉತ್ಸವ
ಇಬ್ಬರನ್ನೂ ಸೀಳಿಕೊಂಡು
ಹೊರಟುಹೋಯಿತು

ಅವರಿಬ್ಬರ ಪ್ರೇಮಕ್ಕೆ ಎರಡೂ ಧರ್ಮಗಳು ಅಡ್ಡಬರುತ್ತವೆ ಮತ್ತು ಹೊಸಕಿ ಹಾಕುತ್ತವೆ. ಈ ಆತಂಕದಲ್ಲಿ ಮಹಮದನನ್ನು ಭೆಟ್ಟಿಯಾಗಿ ಪ್ರೇಮಭಾವ ಅರಳಿಸಿದ್ದಕ್ಕೆ ಕ್ಷಮೆ ಕೇಳುವ ಸ್ವಾತಂತ್ರ್ಯ ಕೂಡ ಇಲ್ಲದೇ ವ್ಯವಸ್ಥೆಯ ಸರ್ವಾಧಿಕಾರದ ನಡುವೆ ಮೌನವಾಗಿ ಮಿಡಿಯುತ್ತಾಳೆ. ನಿಸರ್ಗ ಸಹಜ ಪ್ರೇಮವನ್ನು ಹೊಸಕಿಹಾಕುವ ಮಾನವ ನಿರ್ಮಿತ ಧರ್ಮ ಮತ್ತು ಸಮಾಜಗಳು ನಿಸರ್ಗ ನಿರ್ಮಿತಿಯ ಮುಂದೆ ತಮ್ಮ ಕ್ರಿಯೆಗಳ ಕಾರಣದಿಂದ ಕ್ಷುದ್ರವಾಗುತ್ತವೆ. ಜಡಧರ್ಮಗಳ ಕ್ಷುದ್ರತೆಯನ್ನು ನಿಸರ್ಗತತ್ವದ ಮೂಲಕ ಪ್ರಶ್ನಿಸಲಾಗಿದೆ.

ಮೃದುತ್ವ ಮತ್ತು ಕಾಠಿಣ್ಯದ ಆತ್ಯಂತಿಕ ರೂಪಗಳನ್ನು ಪ್ರೇಮ ಮತ್ತು ಧರ್ಮಗಳ ಸ್ವಭಾವವನ್ನು ಧ್ವನಿಸುವ ಸಮರ್ಥರೂಪಕಗಳಾಗಿ ಬಳಸಿಕೊಳ್ಳಲಾಗಿದೆ. 'ಕುಸುಮಕ್ಕಿಂತ ಕೋಮಲ ಮತ್ತು ವಜ್ರಕ್ಕಿಂತ ಕಠೋರ' ಎಂಬ ಸಾಂಪ್ರದಾಯಿಕ ರೂಪಕಗಳನ್ನು ಅತ್ಯಂತ ಸಮರ್ಥ ವಾಗಿ ಹೊಸ ಸಂದರ್ಭದಲ್ಲಿ ಬಳಸಿಕೊಳ್ಳಲಾಗಿದೆ.

ಹೂವಿನಷ್ಟೇ ತಾಜಾ-ಕೋಮಲ
ಮಹಮದನ ಪ್ರೇಮ
ವಜ್ರದಷ್ಟೇ ಕಠಿಣ-ಕಠೋರ
ಸುತ್ತಣ ಜನರ ಆತ್ಮ

ಕವಿತೆಯು ಕೊನೆಯಲ್ಲಿ ಈ ಎಲ್ಲ ವೈರುಧ್ಯಗಳನ್ನು ಧಾರ್ಮಿಕ ಹಿಂಸೆಯನ್ನು ಪ್ರೇಮದ ಮೂಲಕವೇ ಎದುರಿಸುವ ದಾರ್ಷ್ಟ್ಯವನ್ನು ತೋರಿಸುತ್ತದೆ. ಹಿಂದೂ ಮುಸ್ಲಿಂ ಕೋಮುವಾದವು ಗಾಳಿ ಮತ್ತು ಬೆಂಕಿ ಸೇರಿದಂತೆ ವ್ಯಾಪಕವಾಗಿ ಹೊತ್ತಿ ಉರಿಯುವಾಗ ಆ ಬೆಂಕಿಯಲ್ಲಿ ಪ್ರೇಮಪುಷ್ಪ ಸುಟ್ಟು ಹೋಗುವದಿಲ್ಲ; ಬಿರಿಯುತ್ತದೆ, ಬೆಳಗುತ್ತದೆ. ದ್ವೇಷದ ಬೆಂಕಿಗೆ ಪ್ರೇಮದ ಬೆಳಕೇ ಪರ್ಯಾಯವಾಗಿ ಪ್ರತಿಪಾದನೆ ಗೊಂಡಿದೆ. ಮನುಕುಲ ತನ್ನ ಮಾನವ ಸಮುದಾಯದಲ್ಲಿ ಪಡೆದ ಸಣ್ಣತನ, ದ್ವೇಷ, ಕ್ರೌರ್ಯಗಳ ಮೂಲಕ ಪತನಗೊಂಡು ನಿಸರ್ಗದ ಮುಂದೆ ನಿಂತಿರುವ ದುರಂತವನ್ನೂ ಮತ್ತು ನಿಸರ್ಗದ ಮೂಲಕವೇ ಕಲಿಯಬೇಕಾದ ಪಾಠಗಳನ್ನೂ ಕವಿತೆ ಹೇಳಿಕೊಡುತ್ತದೆ.

'ಮಹಮದ' ಎಂಬ ಹೆಸರು ಒಂದು ಧರ್ಮದ ಪ್ರವಾದಿಯ ಹೆಸರಾಗಿದ್ದರಿಂದ ಒಂದು ಧರ್ಮ ಮತ್ತು ದಾರ್ಶನಿಕ ಲೋಕವನ್ನು ಸಂಕೇತಿಸುತ್ತದೆ. ಆ ಲೋಕವನ್ನು ಮುಸ್ಲಿಂ ಎಂಬ ಏಕೈಕ ಕಾರಣಕ್ಕೆ ಅನ್ಯವೆಂದು ಪರಿಭಾವಿಸಲಾಗಿದೆ. ಹಿಂದೂ ಒಬ್ಬರಿಗೆ ಇಸ್ಲಾಂ ಧರ್ಮದ


ಜತೆಗಿನ ಸಂಬಂಧದಲ್ಲಿ ದೈನಿಕ ಅನುಭವದ ಭಾಗವಾಗಿ ಧಾರ್ಮಿಕ ಆಧ್ಯಾತ್ಮಿಕ ಅನುಸಂಧಾನದ ಸಾಧ್ಯತೆಯನ್ನು ಧಾರ್ಮಿಕ ಕಾರಣಕ್ಕೆ ನಿರಾಕರಿಸುವ ಸಮಕಾಲೀನ ವಾಸ್ತವದ ಚಿತ್ರಣವಿದೆ. ಧಾರ್ಮಿಕ ಕೊಡುಕೊಳೆ ಅನುಸಂಧಾನಗಳನ್ನು ನಿಷೇಧಿಸುವ ಮೂಲಭೂತ ವಾದಿತನದ ಮೂಲಕ ಮನುಷ್ಯರು ಕಳೆದುಕೊಳ್ಳುತ್ತಿರುವ ಅನುಭವಲೋಕಗಳ ಬಗ್ಗೆ ವಿಷಾದ ವ್ಯಕ್ತವಾಗುತ್ತದೆ. ❑

ಬಿ.ಎನ್. ಸುಮಿತ್ರಾಬಾಯಿಯವರ 'ರಾತ್ರಿಯ ನೆರಳುಗಳು'

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಮಹಿಳಾ ಸಂವೇದನೆಯ ಸ್ಪಷ್ಟ ಮತ್ತು ಅಧಿಕೃತ ನಿಲುವುಗಳನ್ನು ಗುರುತಿಸಲು ಸಾಧ್ಯ. ಇದು ಎಪ್ಪತ್ತರ ದಶಕದ ಸ್ತ್ರೀವಾದಿ ಚಿಂತನೆಯ ಪ್ರವೇಶದಿಂದ ಹೆಚ್ಚು ಖಚಿತವಾಯಿತು. ಸ್ತ್ರೀವಾದವು ಬದುಕಿನ ವಿಭಿನ್ನ ಕಲ್ಪಿತಗಳನ್ನು, ಪೂರ್ವ ಪರಿಕಲ್ಪನೆಗಳನ್ನು ಮರಳಿ ವಿಶ್ಲೇಷಿಸುವ ಸೈದ್ಧಾಂತಿಕತೆಯನ್ನು ಪ್ರಕಟಿಸಿದೆ. ಅಂತಹ ಖಚಿತ ರಾಜಕೀಯ ಪ್ರಜ್ಞೆಯನ್ನು ಅಂತರಂಗೀಕರಿಸಿಕೊಂಡ ಕವಿತೆಯಿದು. ಕನ್ನಡಕ್ಕೆ ಸ್ತ್ರೀವಾದಿ ಚಿಂತನೆಯನ್ನು ತಂದ ಮೊದಲಿಗರಲ್ಲಿ ಬಿ. ಎನ್. ಸುಮಿತ್ರಾಬಾಯಿ ಮುಖ್ಯರು. ಇವರಿಗೆ ಕವಿತೆ ಅಭಿವ್ಯಕ್ತಿಯ ಮೊದಲ ಆದ್ಯತೆಯಲ್ಲ. ಆದರೆ ಗುಜರಾತ್ ಗಲಭೆಯ ಭೀಕರತೆ ಕವಿತೆಗೆ ಕಾರಣವಾಗಿದೆ. ಈ ಪದ್ಯ ಕೋಮುವಾದಿ ಹಿಂಸೆಯನ್ನು ಸ್ತ್ರೀವಾದಿ ತಾತ್ವಿಕತೆಯಿಂದ ಗ್ರಹಿಸುತ್ತದೆ ಮತ್ತು ವಿಶ್ಲೇಷಿಸುತ್ತದೆ.

ಎಂಬತ್ತರ ದಶಕದ ಕನ್ನಡ ಮಹಿಳಾ ಕಾವ್ಯ ಹೆಣ್ಣಿನ ನೋವಿನ ನೆನಪುಗಳಲ್ಲಿ ಒದ್ದೆಯಾಗಿದೆ. ಹೆಣ್ಣೆಂಬ ಸ್ಥಿತಿ ಜೈವಿಕವಾಗಿ, ಕೌಟುಂಬಿಕವಾಗಿ, ಸಾಮಾಜಿಕವಾಗಿ ಎದುರಿಸುವ ಬಿಕ್ಕಟ್ಟುಗಳನ್ನು ಸ್ಪಷ್ಟೀಕರಿಸಿಕೊಂಡಿದೆ. ವಿವಿಧ ಜಾತಿ, ವರ್ಗ, ಧರ್ಮ, ವಯೋಮಾನಗಳ ಹೆಸರಿಲ್ಲದ ಹಿಂಸೆಯನ್ನು ಬರೆದುಕೊಂಡಿದೆ ಮತ್ತು ಈ ಎಲ್ಲವನ್ನು ದಾಟುವ ಸ್ವಾವಲಂಬಿ ಸ್ವಾಭಿಮಾನಿ ಬದುಕಿನ ಕನಸುಗಾರಿಕೆಯನ್ನು ಪ್ರಕಟಿಸಿದೆ. ಬಿಡುಗಡೆಯ ಭಾವದಲ್ಲಿ ಬಿರುಸಾಗಿ ಸಾಗುತ್ತಿದ್ದ ಮಹಿಳಾ ಸಂವೇದನೆಗೆ ತೊಂಬತ್ತರ ದಶಕ ಬಹುದೊಡ್ಡ ಆಘಾತವನ್ನೊಡ್ಡಿತು. ಮುಕ್ತ ವ್ಯಾಪಾರ ನೀತಿಯ ಆರ್ಥಿಕ ಉದಾರೀಕರಣ ಮತ್ತು ಖಾಸಗೀಕರಣಗಳು ಮಹಿಳಾ ಸಮಸ್ಯೆಯನ್ನು ಆದ್ಯತೆಯ ವಲಯದಿಂದ ಹೊರ ಹಾಕಿದವು. ಇವುಗಳೊಂದಿಗೆ ಜನಿಸಿದ ಕೋಮುವಾದಿ ಹಿಂಸಾಕಾಂಡ ಮಹಿಳೆಯ ಬದುಕನ್ನು ವಿಧ್ವಂಸಗೊಳಿಸಿತು. ಮನುಷ್ಯ ಚರಿತ್ರೆ ರೂಪಿಸಿಕೊಂಡ ಯಾವೆಲ್ಲ ಕಾರ್ಯಕ್ಷೇತ್ರಗಳು ಕೂಡ ಪುರುಷ ಪ್ರಧಾನ ಯಜಮಾನ್ಯವನ್ನು ಸ್ಥಿರೀಕರಿಸಿಕೊಂಡವು. ಧರ್ಮ ಇವುಗಳ ಪೋಷಕ ಶಕ್ತಿಯಾಗಿ ನಿಂತಿತು. ಧಾರ್ಮಿಕ ಜಡತೆಯನ್ನು ಮೂಲಭೂತ ವಾದವನ್ನು ವಿರೋಧಿಸಿ ಪುನರ್‌ನಿರ್ವಚನಕ್ಕೊಳಗಾದ ಧರ್ಮಗಳೂ ಹೆಣ್ಣಿನ ಸಮಾನತೆಯನ್ನು ಅನಗತ್ಯವೆಂದೇ ತಿಳಿದವು. ಧರ್ಮಗಳು ಹೆಣ್ಣನ್ನು ಗುಲಾಮಳನ್ನಾಗಿಯೇ ಕಂಡವು. ಆಧುನಿಕ ಕಾಲದಲ್ಲಿಯೂ ಧರ್ಮದ ಹಿತಾಸಕ್ತಿ ಹಾಗೇ ಮುಂದುವರಿಯಿತು. ನವಬಂಡವಾಳ ವಾದದ ಕಾಲದಲ್ಲಿ ಧರ್ಮವು ಲಾಭದಾಯಕ ಉದ್ದಿಮೆಯಾಗಿ ಕಾರ್ಯರೂಪಕ್ಕಿಳಿದಿದ್ದರಿಂದ ಹೆಣ್ಣನ್ನು ಇನ್ನಷ್ಟು ಒತ್ತಡಕ್ಕೆ ಒಳಗು ಮಾಡಿತು. ಅವಳು ಧರ್ಮದ ಚಹರೆಯಾಗಿ, ಧರ್ಮ ರಕ್ಷಣೆಯ ಪದಾತಿಯಾಗಿ, ಖಾಸಗಿ ಆಸ್ತಿಯಾಗಿ ಬಂಧನಕ್ಕೊಳಗಾಗುತ್ತಲೇ ಇದ್ದಳು. ಧಾರ್ಮಿಕ ಹಿಂಸೆಯ ಕೆಟ್ಟ ಪರಿಣಾಮಕ್ಕೆ ನೇರವಾಗಿ ಒಳಗಾಗುತ್ತಿದ್ದಳು ಮತ್ತು ಧಾರ್ಮಿಕ ಹಿಂಸೆಯನ್ನು ಪ್ರಚೋದಿಸುವ ಪ್ರಚೋದನಕಾರಿಯಾಗಿಯೂ ಬಳಕೆಗೆ ಒಳಗಾಗತೊಡಗಿದಳು. ಇಂತಹ ಧರ್ಮ ಸಂಕಟದ ಕಾಲದಲ್ಲಿ ತನ್ನನ್ನು ಸುತ್ತುವರಿದಿರುವ ಅಸಂಗತ ವಾಸ್ತವಗಳನ್ನು ಮೀರಿ, ಅನನ್ಯತೆಯನ್ನು ಉಳಿಸಿಕೊಳ್ಳುವ ಸವಾಲನ್ನು ಮಹಿಳಾ ಪ್ರಜ್ಞೆ ಎದುರಿಸಿದೆ. ಇಂತಹ ತಾತ್ವಿಕ ಕಾರಣದಲ್ಲಿ ರೂಪುಗೊಂಡ ಕವಿತೆ, 'ರಾತ್ರಿಯ ನೆರಳುಗಳು'

ಮತ್ತೆ ಅದೇ ಕಡಲು, ಅದೇ ನಡುರಾತ್ರಿ
ಅದೇ ಅಲೆಯಬ್ಬರ



ಎಂದು ಕವಿತೆ ಆರಂಭವಾಗುತ್ತದೆ. 'ಮತ್ತೆ' ಎಂಬ ಪದ ಮತಾಂಧ ಹಿಂಸೆಯ ಚರಿತ್ರೆಯನ್ನು ನೆನಪಿಸುತ್ತದೆ. ಹಿಂಸಾಕಾಂಡದ ಹೆಜ್ಜೆ ಗುರುತುಗಳನ್ನು ಜೋಡಿಸುತ್ತದೆ. ಮತ್ತೆ ಮತ್ತೆ ನೋವಿಗೆ ಎದುರಾಗಬೇಕಾದ ಸಾಕ್ಷೀಭಾವದ ಸಂಕಟವನ್ನು ಹೇಳುತ್ತದೆ. ನೋವು ನೋವನ್ನು ಹಡೆಯುವಂತೆ ಒಂದು ದೌರ್ಜನ್ಯ ಮತ್ತೊಂದು ದೌರ್ಜನ್ಯದ ನೆನಪನ್ನು ಜೊತೆ ಹಾಕಿಕೊಂಡು ಕಂಪಿಸುತ್ತದೆ. 'ಅದೇ ನಡುರಾತ್ರಿ' ಎನ್ನುವುದು ದೇಶ ವಿಭಜನೆಯ ಕರಾಳ ಇತಿಹಾಸವನ್ನು ಎದುರಿಸುತ್ತದೆ. ಅದೇ ಸಮಾಜ, ಅದೇ ಬದುಕು. ಅಲೆಯ ಅಬ್ಬರದಂತೆ ಮತೀಯ ಉನ್ಮಾದ. ಈ ರೂಪಕವು ಕಡಲಿನ ಅಲೆ ಮತ್ತು ಸಮಾಜದ ಮತೀಯ ಉನ್ಮಾದಗಳನ್ನು ಹೋಲಿಸುವುದು ತೀವ್ರ ನಿರ್ಧಾಸೆಯನ್ನು ವ್ಯಕ್ತಪಡಿಸುವ ಮಾರ್ಗೋಪಾಯವಾಗಿದೆ.

ಮಹಿಳಾ ಸಂವೇದನೆ ಹಿಂಸಾ ವಿರೋಧಿಯಾದದ್ದು, ಮನುಷ್ಯ ಜೀವವನ್ನು ಹಿಂಸಿಸುವ ಸಮಾಜ ಹೆಣ್ಣಿನ ತಾಯ್ತನವನ್ನು, ಸಂಗೋಪನಶೀಲತೆಯನ್ನು ಪಾಲನೆಯ ಗುಣವನ್ನು ನಿತ್ರಾಣಗೊಳಿಸುತ್ತದೆ. ಮಹಿಳಾ ಬರವಣಿಗೆಯಲ್ಲಿ ಯುದ್ಧ, ಕೋಮುದಂಗೆಗಳ ವಿರೋಧ ದೊಡ್ಡ ಪ್ರಮಾಣದಲ್ಲಿದೆ. 'ದಾರಿಯಲ್ಲಿ ಅರಳುತ್ತಿರುವ ಮಗು ಪಕ್ಕದಲ್ಲಿ ಬಂದೂಕು, ಸತ್ತು ಒರಗಿದ ತಾಯ ಮೊಲೆತುಂಬ ಮದ್ದುಗುಂಡು.' (ಪ್ರತಿಭಾ ನಂದಕುಮಾರ) ಎಂಬ ಹತಾಶೆ ಮರಳಿ ಮರಳಿ ಬಂದಿದೆ. ದೇಶ ವಿಭಜನೆಯ ಮತೀಯ ಹಿಂಸಾಕಾಂಡವನ್ನು ಮಹಿಳಾ ಸಂವೇದನೆ ಉಪೇಕ್ಷಿಸಲಿಲ್ಲ. ಆ ದುರಂತ, ನೊಂದ ನೋವಿನ ನೇವರಿಕೆಯಂತೆ, ಅನುಭವದ ಕಥನದಂತೆ ಮತ್ತೆ ಮತ್ತೆ ಅಭಿವ್ಯಕ್ತಗೊಳ್ಳುತ್ತಿದೆ. ವೈದೇಹಿಯವರ 'ಕ್ರೌಂಚ ಪಕ್ಷಿಗಳು' ಇದಕ್ಕೊಂದು ಉದಾಹರಣೆ. ಪ್ರಸ್ತುತ 'ರಾತ್ರಿಯ ನೆರಳುಗಳು' ಕವಿತೆ ಕೂಡ ವಿಭಜನೆಯ ಇತಿಹಾಸವನ್ನು ಸೃಜನಶೀಲವಾಗಿ ನೆನಪಿಸಿಕೊಳ್ಳುತ್ತದೆ.

ಈ ಕವಿತೆಯು ಹಿಂಸೆಯ ವಾಸ್ತವಿಕ ಕಾರಣಗಳನ್ನು ಶೋಧಿಸುವುದರಲ್ಲಿ ಆಸಕ್ತವಲ್ಲ. ಹಿಂಸೆಯ ಪರಿಣಾಮದ ಭೀಕರತೆಯನ್ನು ಮನಗಾಣಿಸಲು ಯತ್ನಿಸುತ್ತದೆ. ಮತೀಯ ಮನೋನ್ಮಾದವೇ ಹಿಂಸೆಯ ಕಾರಣ ಬೀಜವೆಂದು ತಿಳಿಯುತ್ತದೆ. ಇದು ಸ್ತ್ರೀವಾದದ ತಾತ್ವಿಕತೆಗಿಂತಲೂ ಬೇರೆಯಾದದ್ದು. ಕವಿತೆಯು ಹಿಂಸಾತ್ಮಕ ಜಗತ್ತಿಗೆ ತನ್ನನ್ನು ಒಡ್ಡಿಕೊಳ್ಳುವಾಗಿನ ಅನಿವಾರ್ಯತೆಯದು. ಇಲ್ಲಿ 'ನನ್ನ', 'ನಿನ್ನ' ಎಂಬ ಸೂಚಕಗಳು ಅಕ್ಕಪಕ್ಕದ, ಎದುರು ಬದರಿನ, ವ್ಯಕ್ತಿ, ಜಾತಿ, ಧರ್ಮ, ದೇಶ ಯಾವುದೂ ಆದೀತು. ಯುದ್ಧಮುಖಿ ನಿಲುವು ಸ್ಫೋಟ ನಿರೀಕ್ಷೆಯ

ವರ್ತಮಾನಕ್ಕೆ ಕಾರಣವಾಗಿದೆ. ಮದ್ದುಗುಂಡು, ಬಾಂಬು, ಬಂದೂಕುಗಳ ಮೂಲಕ ಜನಪ್ರಜ್ಞೆಯನ್ನು ದಮನಿಸುವ ಬಂಡವಾಳವಾದವನ್ನು ಪ್ರಭುತ್ವವನ್ನು ಕವಿತೆ ಪ್ರಶ್ನಿಸುತ್ತಿರುವಂತಿದೆ. ಇದು 'ಕೊನೆ'ಗಾಗಿ ಸಿದ್ಧಗೊಳ್ಳುವ ಸ್ಥಿತಿಯೇ ಹೊರತೂ ಬೇರೆ ಯಾವ ಸಾರ್ಥಕತೆಯೂ ಇಲ್ಲ. ಅನ್ಯವನ್ನು ನಾಶ ಮಾಡುವ ವಿಷ ಮೊದಲು ತನ್ನ ಒಳಲೋಕವನ್ನು ವಿಧ್ವಂಸಗೊಳಿಸುತ್ತದೆ. ಒಳಗೆ ವಿಷ ತುಂಬಿಕೊಂಡ ಮೇಲೆ ವ್ಯಕ್ತಿ ಬದುಕಿಗೆ ಅನರ್ಹನಾಗುತ್ತಾನೆ. ತನ್ನ ಸುತ್ತಲ ಪರಿಸರವನ್ನು ಸರ್ವನಾಶಗೊಳಿಸುತ್ತಾನೆ. ಯಂತ್ರಗಳನ್ನು ಅವಲಂಬಿಸುತ್ತ ತಾನೇ ಯಂತ್ರವಾಗಿ ಬಿಡುವಂತೆ, ಆಯುಧಗಳನ್ನು ಮೋಹಿಸುತ್ತ ಅವಲಂಭಿಸುತ್ತ ತಾನೇ ಆಯುಧವಾಗಿ ಬಿಡುವ ವಿಪರಾಸ್ಯವಿದು. ಇದರ ಕೊನೆ ಮಸಣ ಮಾತ್ರ.

ಕವಿತೆಯ ಎರಡನೆಯ ಭಾಗ, ಹಿಂದೂ ಮುಸ್ಲಿಂ ಸೌಹಾರ್ದತೆಯ ಬಹುದೊಡ್ಡ ರೂಪಕವಾಗಿದ್ದ ಗಾಂಧೀಜಿಯನ್ನು ಕಾಣಿಸುತ್ತದೆ. ಈ ಕಾಣುವ ಕಣ್ಣಿನ ತಾಯ್ತನ ಕವಿತೆಯೊಳಗಿನ ಬೆಳಕಿನಂತೆ ಹೊಸ ದೀಪ್ತತೆಯನ್ನು ಒಡ್ಡುತ್ತದೆ. 'ಎಂದೋ ಒಮ್ಮೆ ಈ ಪೋರಬಂದರಿನಲ್ಲಿ, ಕಣ್ಣುತೆರೆದಿದ್ದ ಒಬ್ಬ ಪೋರ' ಗಾಂಧೀಜಿಯನ್ನು ಅಬೋಧ ಬಾಲನ ಮಮಕಾರದಲ್ಲಿ ನೋಡುವುದು ಕವಿತೆಯ 'ತಾಯ್ತನದ ಕಣ್ಣ'ನ್ನು ಕಾಣಿಸಲಿಕ್ಕಾಗಿ. ಒಳ್ಳೆಯ ಮಗನ ನೆನಪಿಗೆ ಮುದಗೊಳ್ಳುವ ತಾಯಿಯಂತೆ, ಕವಿತೆಯೊಳಗೊಂದು ಹಿಗ್ಗಿನ ಸ್ಮೃತಿ ಅರಳುತ್ತದೆ. 'ನೋಡ ನೋಡುತ್ತಲೇ ಬೆಳೆ ಬೆಳೆಯುವ ಪೋರ' ತಾಯೆಂಬ ಹಿಗ್ಗಿನ ಕಾರಣವಾದರೆ; ಬೆಳೆದವನು ತನ್ನ ಜ್ಞಾನ-ಶ್ರದ್ಧೆಗಳಿಂದ ಪೂರ್ವ-ಪಶ್ಚಿಮಗಳೆರಡನ್ನೂ ತೊಳೆದನೆನ್ನುವುದು ತಾಯ್ತನದ ಸಂಭ್ರಮಕ್ಕೆ ಕಾರಣವಾಗುತ್ತದೆ. ಕೇರಿಕೇರಿಗಳನ್ನು ತಿರುಗಿ ಎದೆಎದೆಯಲ್ಲಿ ಕರುಣೆಯ ಬೀಜ ಬಿತ್ತಿದ ನೆನಪು ಆರ್ದ್ರವಾಗಿ ನಿರೂಪಣೆಗೊಂಡಿದೆ. ಸಮಾಜದ ಸ್ವಾಸ್ಥ್ಯಕ್ಕೆ ಪ್ರತಿಯೊಬ್ಬ ವ್ಯಕ್ತಿಯ ಅಂತರಂಗ ಶುದ್ಧೀಕರಣಗೊಳ್ಳಬೇಕು ಎಂದು ನಂಬಿದ್ದರು ಗಾಂಧೀಜಿ. ವೈಯಕ್ತಿಕ ಪಲ್ಲಟದ ಮೂಲಕ ಉಂಟಾಗುವ ಪರಿವರ್ತನೆ ಹೆಚ್ಚು ಗಟ್ಟಿಯಾದದ್ದು ಎಂದು ತಿಳಿದಿದ್ದರು. ಜಗತ್ತಿನ ಧಾರ್ಮಿಕ ದರ್ಶನಗಳಿಂದ ಪ್ರೇರಿತವಾದ ನಿಲುವು ಕವಿತೆಯ ಸ್ತ್ರೀವಾದಿ ತಾತ್ವಿಕತೆಯ ನಿಲುವಲ್ಲ. ಆದರೆ ಅಂತಹ ಅನುಸಂಧಾನವನ್ನು ಕವಿತೆ ಏರ್ಪಡಿಸಿಕೊಳ್ಳುತ್ತದೆ. ಯಾಕೆಂದರೆ ಇದು ತಾಯ್ತನದ ನಂಬಿಕೆಯೂ ಆಗಿರುತ್ತದೆ.

ಗಾಂಧಿ ಸ್ಮೃತಿ ಇಲ್ಲಿ ಚೇತನ ಶಕ್ತಿಯಾಗಿ ಪ್ರತಿಪಾದನೆಗೊಂಡಿದೆ. ದೇಶ ಸ್ವಾತಂತ್ರ್ಯದ ಹಬ್ಬವನ್ನಾಚರಿಸುತ್ತಿದ್ದಾಗ ಗಾಂಧಿ ನೌಕಾಲಿಯಲ್ಲಿ ನಡುರಾತ್ರಿ ಕಂದೀಲು ಹಿಡಿದು ನಡೆದಾಡುತ್ತಿದ್ದರು. ಕೋಮುಗಲಭೆಯನ್ನು ಶಾಂತಗೊಳಿಸಲು ಅಲೆದಾಡುತ್ತಿದ್ದರು. ಅವರ ಪ್ರಭಾವ ಹರಡಿತ್ತು. ವ್ಯಕ್ತಿಯಾಗಿದ್ದ ಗಾಂಧೀ ತತ್ತ್ವವಾಗಿ ವ್ಯಾಪಿಸಿಕೊಳ್ಳುತ್ತಿದ್ದರು. ಅಂತಹ 'ಗಾಂಧೀಯನ್ನೇ ಕೊಂದವರಿಗೆ ಇನ್ಯಾರ ಹಂಗೂ?' ಎಂದು ಕವಿತೆ ವಿಶಣ್ಣತೆಯಿಂದ ನುಡಿಯುತ್ತದೆ. ಕವಿತೆ ಹಿಂಸೆಯ ಚರಿತ್ರೆಯನ್ನು ಭಾವೋದ್ವೇಗದ ಏಕಮುಖಿ ನಿರೂಪಣೆಗೆ ತೊಡಗಿಸುವುದಿಲ್ಲ. ಹಿಂಸೆಯೊಂದಿಗೆ ಸಾಮರಸ್ಯದ ಪ್ರಯತ್ನವೂ ನಡೆಯುತ್ತಲೇ ಬಂದದ್ದನ್ನು ಇಡಿಯಾಗಿ ಗ್ರಹಿಸುತ್ತದೆ.

ಕವಿತೆಯ ಕೊನೆಯ ಭಾಗ ವರ್ತಮಾನದ ಹಿಂಸೆಗೆ ಛಿದ್ರವಾಗಿ ಹೋದ ತಲ್ಲಣವನ್ನು ಹೇಳುತ್ತದೆ. ಹಿಂಸೆಯ ಸಾಕ್ಷಿಪ್ರಜ್ಞೆಯನ್ನು 'ರಾತ್ರಿ' ಮತ್ತು ಅದರ ಪರಿಣಾಮ ಸತ್ಯವಾದ ಕತ್ತಲು ಸೂಚಿಸುತ್ತದೆ. ಹಿಂಸಾವಿರೋಧಿ ಕಾವ್ಯದಲ್ಲಿ ಕತ್ತಲು ರೂಪಕವಾಗಿ ಮತ್ತೆ ಮತ್ತೆ ಮರುಕಳಿಸುತ್ತದೆ. ಎಂದಿನಿಂದಲೂ ಕತ್ತಲು ಮೌಢ್ಯದ ಸಂಕೇತವಾಗಿ ಬಳಕೆಯಲ್ಲಿದೆ. ಈ ಮೌಢ್ಯಕ್ಕೆ ಮತಾಂಧತೆಯು ಸೇರಿದರೆ ಉಂಟಾಗುವ ಭಯಾನಕತೆಯನ್ನು 'ಹಬ್ಬಿದೆ ರಕ್ತದಧಾರೆ ಸುತ್ತಿ ಸುತ್ತಿ ಕಗ್ಗತ್ತಲೆಯಲ್ಲಿ' ಎಂಬ ಸಾಲು ಹೇಳುತ್ತದೆ. ಸ್ವಾತಂತ್ರ್ಯದ ನಂತರದಲ್ಲಿಯೂ ಈ ಧರ್ಮ ಕಾರಣದ ಹಿಂಸೆಯಿಂದ ಬಿಡುಗಡೆಯೇ ಇಲ್ಲವೇ? ಎಂಬ ಗಾಬರಿಯಿದೆ. ಇನ್ನಾದರೂ ವಿಶ್ರಮಿಸಿಕೊಳ್ಳಬೇಕು ಅನ್ನುವಾಗಲೇ ಗುಜರಾತ್ ಹೊತ್ತಿ ಉರಿಯಿತು. ಇಡೀ ದೇಶದ ಜನತೆ ಆ ಹಿಂಸಾಕಾಂಡವನ್ನು ಸುಮ್ಮನೆ ಗಮನಿಸಿದರು. ಅಂಕಿ ಸಂಖ್ಯೆಗಳನ್ನು ಎಣಿಸುತ್ತ, ತಪ್ಪು ಸರಿಗಳನ್ನು ಲೆಕ್ಕ ಹಾಕುತ್ತ, ತಮ್ಮ ತಮ್ಮ ಇರುವಿಕೆಯನ್ನು ಹಿತಾಸಕ್ತಿಯನ್ನು ಬಿಟ್ಟುಕೊಡದಂತೆ, ಸುದ್ದಿಯಾಗಿ, ಚಿತ್ರವಾಗಿ ಮರುಕ ಮತ್ತು ವಿಸ್ಮಯದಲ್ಲಿ. ಕಾವ್ಯ ಗುಜರಾತನ್ನು ಆ ತುಂಬು ಗರ್ಭಿಣಿಯ ಹೊಟ್ಟೆಸೀಳುವಾಗಿನ ಅವಳ ಆರ್ತಕೂಗಿನಲ್ಲಿ ಕಾಣುತ್ತದೆ. ಅನ್ಯ ಧರ್ಮವೆಂಬ ಕಾರಣಕ್ಕಾಗಿ ತುಂಬು ಗರ್ಭಿಣಿಯ ಗರ್ಭ ಸೀಳಿ ಗರ್ಭವನ್ನು ಆಹುತಿಯಾಗಿಸುವ ಬರ್ಬರತೆಯನ್ನು 'ತಾಯಪ್ರಜ್ಞೆ' ಮರೆಯುವುದು ಹೇಗೆ? ಈ ಭಯಂಕರ ವರ್ತಮಾನ ಪ್ರಜ್ಞೆಯ ತಳಾತಳದಲ್ಲಿಯೂ ನೆರಳಿನಂತೆ ಕಾಡುತ್ತದೆ. ಕೌಸರಬಾನು ದೇಶ ಕಾಲಧರ್ಮಾತೀತವಾಗಿ ಎಲ್ಲ ತಾಯಂದಿರ ಭಾವ ವಲಯದಲ್ಲಿ ಭಯವಾಗಿ ಕಾಡುತ್ತಾಳೆ. ಜಗತ್ತಿನ ತಾಯಂದಿರ ಆರ್ತ ಕೂಗಿನ ಹಾಗೆ ಕವಿತೆಯೂ ಕೋಪದಿಂದ ರೋದಿಸುತ್ತದೆ.

ಕಂಸ ಕುಲವೇ ಸೀಳಬಾರದೇ ಧರ್ಮ ಪಿಶಾಚಿಯನ್ನು
ಸುಟ್ಟು ಬಿಟ್ಟರಾ ಬಿದ್ದು ಹೊರಳುವ ತಾಯ ಜೀವವನ್ನು

'ಕಂಸ ಕುಲವೇ' ಎನ್ನುವಾಗ ಸೋದರಿ ದೇವಕಿಯನ್ನು ಸೆರೆಯಲ್ಲಿಟ್ಟು ಹುಟ್ಟುವ ಕೂಸುಗಳ ಸಂಹಾರಕ್ಕೆ ಕಾರಣನಾದ ಕಂಸನ ಸ್ಮೃತಿಯಿದೆ. ಈ ರೂಪಕ ಅಭಿವ್ಯಕ್ತಿಯು ಅನುಭವಿಸುವ ಭಾಷಿಕ ಅಡಚಣೆಗೂ ಉದಾಹರಣೆಯಾಗಿದೆ. ಕೃಷ್ಣಜನ್ಮವನ್ನು ಎತ್ತಿಹಿಡಿಯುವ ಉದ್ದೇಶ ಕವಿತೆಗಿಲ್ಲ. ಆದರೆ ವರ್ತಮಾನವನ್ನು ವ್ಯಾಖ್ಯಾನಿಸಿಕೊಳ್ಳುವಾಗ ಪರಂಪರಾಗತ ಭಾಷೆ ತನ್ನ ಪೂರ್ವವಾಸನೆಗಳೊಂದಿಗೆ ಹಲವು ಗೋಜಲುಗಳನ್ನೂ ತಂದಿಡುವುದನ್ನು ಗಮನಿಸಬೇಕಿದೆ.

ಸನಾತನ ಧರ್ಮದಲ್ಲಿ ಹೆಣ್ಣಿಗೆ ಕಿಂಚಿತ್ತಾದರೂ ಮಾನ್ಯತೆ ದೊರೆತಿದ್ದರೆ ಅದು ಅವಳ ತಾಯ್ತನಕ್ಕೆ. ಆದರೆ ಪಿತೃ ಪ್ರಧಾನ ಧರ್ಮಸಂಹಿತೆಗಳು ತಾಯ್ತನವನ್ನು ಅಪಮಾನಕ್ಕೆ, ಸಂಶಯಕ್ಕೆ ಈಡು ಮಾಡುತ್ತಲೇ ಬಂದಿವೆ. ಹೆಣ್ಣಿನ ಬದುಕಿನ ಹಕ್ಕನ್ನು ಧರ್ಮಪಿಶಾಚಿ ಕಬಳಿಸಿದೆ. ಕಂಸ ಒಂದು ರೂಪಕವಾದರೆ ತುಂಬು ಗರ್ಭಿಣಿ ಹೆಂಡತಿಯನ್ನು ಕಾಡುಪಾಲು ಮಾಡುವ ರಾಮ ಇನ್ನೊಂದು ರೂಪಕವಾಗುತ್ತಾನೆ. ಹೆಣ್ಣನ್ನು ಅಗೌರವದಿಂದ ನೋಡುವ ಮೂಲಭೂತವಾದಿ ಮನಸ್ಸು ಮಾತ್ರ ಇಂತಹ ಪಾಶವೀಯತೆಯನ್ನೆಸಗಬಲ್ಲದು. ಅನ್ಯಸ್ತ್ರೀಯನ್ನು ಕ್ರೂರವಾಗಿ ಹಲ್ಲೆ ಮಾಡುವ ಮನಸ್ಸು ತನ್ನ ರಕ್ತ ಸಂಬಂಧದ, ಕುಲಸಂಬಂಧದ ಹೆಣ್ಣುಗಳನ್ನು ಪ್ರೀತಿಯಿಂದ ಗೌರವದಿಂದ ನೋಡಲಾರದು. ಈ ಅರಿವು ಮಹಿಳಾ ಪ್ರಜ್ಞೆಯನ್ನು ಗಾಸಿಗೊಳಿಸಿದೆ. ಕೋಮು ದಂಗೆಯಲ್ಲಿ ಹೆಣ್ಣಿನ ಮೇಲೆ ಹಿಂಸೆ ಅತ್ಯಾಚಾರಗಳನ್ನು ನಡೆಸುವವರು ತಾಯಿ, ಮಡದಿ, ಮಗಳೊಂದಿಗರೇ ಅಲ್ಲವೇ? ಇಂಥವರ ತಾಯಂದಿರು, ಸೋದರಿಯರು, ಮಡದಿಯರು, ಮಕ್ಕಳು ಅನುಭವಿಸುವ ಧರ್ಮಸಂಕಟಗಳೇನು? ಇವರನ್ನೆಲ್ಲ ಮತಾಂಧ ಪ್ರೇರಕರನ್ನಾಗಿ ಮಾಡುವುದರಿಂದ ಸ್ವಾಸ್ಥ್ಯ ಲಭಿಸಿತೆ? ಗುಜರಾತ್ ನರಮೇಧದ ನಂತರದ ದಿನಗಳಲ್ಲಿ ಅಲ್ಲಿಯ ಮತ ಮಂದಿರಗಳಲ್ಲಿ ತಮ್ಮ ಧರ್ಮದ ಮಹಿಳೆಯರಿಗಾಗಿ ಸಾಮೂಹಿಕ ಪೂಜೆ, ಜಪ, ಭಜನೆ, ಧ್ಯಾನಗಳನ್ನು ಏರ್ಪಡಿಸಬೇಕಾಯಿತು. ಇದು ಆ ಹೆಣ್ಣುಗಳ ಸಂಕಟವನ್ನು ಉಪಶಮನಗೊಳಿಸೀತೆ? ಮತಾಂಧತೆಯ ಅಪರಾಧಗಳು ಅನ್ಯರನ್ನು ಮಾತ್ರ ನೋಯಿಸುವುದಿಲ್ಲ. ತಮ್ಮವರನ್ನೂ ಜರ್ಜರಿತ ಗೊಳಿಸುತ್ತದೆ.

ಹೆಣ್ಣಿನ ಮಾತೃತ್ವವನ್ನು ಗೌರವಿಸುತ್ತೇವೆಂದು ಹೇಳುವ ಮೂಲಭೂತ ವಾದಿಗಳ ಘೋಷ ವಾಕ್ಯದಲ್ಲಿರುವುದು ಮುಖವಾಡವೇ ವಿನಃ ವಸ್ತುಸತ್ಯವಲ್ಲ ಎಂಬ ಆಕ್ರೋಶದ ವ್ಯಂಗ್ಯ ಕವಿತೆಯಲ್ಲಿದೆ.

ಮಾತೃದೇವೋಭವ ! ಉದ್ಧಾರವಾಯಿತು ಕುಲ
ಮಾತೃದೇವೋಭವ ! ಬೆಳಗಿತು ಸಂಸ್ಕೃತಿ
ಮಾತೃದೇವೋಭವ ! ನಡೆಯಲಿ ಕೋಟಿ ಜಪ
ಆಹುತಿಗೆ ಮಾತೆಯರದೇ ಪ್ರಾಣ.

ಕುಲ, ಸಂಸ್ಕೃತಿ, ಧರ್ಮಗಳೆಂಬ ಪಿತೃಪ್ರಧಾನ ವ್ಯವಸ್ಥೆಯ ಅಂಗಗಳ ರಕ್ಷಣೆಗಾಗಿ ಹೆಣ್ಣುಗಳನ್ನು ಬಳಸಿಕೊಳ್ಳಲಾಗುತ್ತದೆಯೇ ವಿನಃ ಈ ಯಾವವೂ ಹೆಣ್ಣುಗಳಿಗೆ ರಕ್ಷಣೆಯನ್ನೊದಗಿಸಲಿಲ್ಲ. ಕೋಮುವಾದವು ತೀವ್ರವಾಗುತ್ತಿರುವ ಕಾಲದಲ್ಲಿ ಮಹಿಳೆಯರನ್ನು ಧರ್ಮದ ಮೂಲಕ ಒಗ್ಗೂಡಿಸುವ ದೇವಿ ಸಹಸ್ರನಾಮಾರ್ಚನೆ, ಸೌಂದರ್ಯಲಹರಿ ಪಠಣ, ಉಡಿ ತುಂಬುವ ಕಾರ್ಯ, ಪೂರ್ಣಕುಂಭ ಮೆರವಣಿಗೆ ಇಂತಹ ನೂರಾರು ಆಚರಣೆಗಳು ಭರ್ಜರಿಯಾಗಿ ನಡೆಯುತ್ತಿವೆ. ಇವು ಮಹಿಳೆಯರ ಮೂಲಕ ಸ್ವಧರ್ಮವನ್ನು ಗಟ್ಟಿಗೊಳಿಸುವ ಉಪಾಯ ಮಾತ್ರವಾಗಿಲ್ಲ. ನಾಗರಿಕ ಸಂವೇದನೆಯಲ್ಲಿ ಒಗ್ಗೂಡಬಹುದಾದ ಮಹಿಳಾ ಪ್ರಜ್ಞೆಯನ್ನು ವ್ಯವಸ್ಥಿತವಾಗಿ ಒಡೆದಿಡುವ ಕಾರ್ಯಾಚರಣೆಯಾಗಿದೆ. ಇದು ಮಹಿಳಾ ಸಂವೇದನೆಯನ್ನು ಗೊಂದಲಕ್ಕೆ ದೂಡಿ ಯಾವುದೇ ತಾತ್ವಿಕ ಒಮ್ಮತಕ್ಕೆ ತಲುಪಲಾರದಂತೆ ಮಾಡುತ್ತದೆ. ಮತಾಂಧತೆಯನ್ನು ಕೋಮುವಾದವನ್ನು ಪ್ರತಿರೋಧಿಸುವ ಮಹಿಳಾ ಶಕ್ತಿಯನ್ನು ಹೀಗೆ ಹಂಚಿ ಹರಡಲಾಗುತ್ತದೆ. ಧರ್ಮರಕ್ಷಣೆಯ ಮಹಾನ್ ಯಜ್ಞಕ್ಕೆ ಮಾತೆಯರ ಪ್ರಾಣವೇ ಆಹುತಿಯಾಗುವ ಗಾಢ ವಿಷಾದ ಇಲ್ಲಿದೆ.

ಮೂರು ಭಾಗಗಳಲ್ಲಿ ರಚನೆಯಾದ ಈ ಕವಿತೆಯು ಕೋಮುವಾದಿ ಸಮಾಜವನ್ನು ವಿಷಾದದಿಂದ, ಸಂಯಮದಿಂದ ಮತ್ತು ಹತಾಶೆಯಿಂದ ನಿರೂಪಿಸುತ್ತದೆ. ತಾಯ್ತನದ ಸಂವೇದನೆಯು ತೀವ್ರ ನಿರಾಸೆಯನ್ನು ಹತಾಶೆಯನ್ನು ಅನುಭವಿಸುತ್ತದೆ. ಭೂತಕಾಲ ಮತ್ತು ವರ್ತಮಾನಗಳು ಭವಿಷ್ಯತ್ತಿನ ನಂಬುಗೆಯನ್ನು ಕಸಿಯುವಂತಿದೆ. ಭವಿಷ್ಯತ್ತಿನ ಬಗ್ಗೆ ಆಶಾವಾದಿಯಾಗುವುದೇ ಸಿನಿಕತನವಾಗಿಬಿಡಬಹುದಾದ ದುರಂತ ಇದು. ಕೋಮುವಾದವನ್ನು ಸ್ತ್ರೀವಾದಿ ನೆಲೆಯಿಂದ ಪುನರ್ ನಿರ್ವಚಿಸುವ ಕವಿತೆಯಿದು. ಮಹಿಳಾ ಸಾಹಿತ್ಯ ನಿರಂತರವಾಗಿ ಧರ್ಮ ಮತ್ತು ಅದರ ಅಮಾನವೀಯ ಮೋಸವನ್ನು ಪ್ರಶ್ನಿಸುತ್ತಲೇ ಬಂದಿದೆ. ಎಚ್. ವಿ. ಸಾವಿತ್ರಮ್ಮ 'ಸೀತೆ ರಾಮ ರಾವಣ', 'ವಿಮುಕ್ತಿ'ಯಂತಹ ಕೃತಿಗಳನ್ನು ಬರೆದ ಚಾರಿತ್ರಿಕತೆಯಿಂದ ಮೊದಲ್ಗೊಂಡು ಧರ್ಮದ ರಾಜಕಾರಣವನ್ನು ಪ್ರಶ್ನಿಸುವ ನೂರಾರು ಕವಿತೆಗಳು ಬಂದಿವೆ. ಕೋಮುವಾದದ ಕರಾಳತೆಗೆ ಮಹಿಳಾ ಸಂವೇದನೆ ತೀವ್ರವಾಗಿ ಸ್ಪಂದಿಸಿದೆ. ಸ್ತ್ರೀಯೆಂಬ ಅನನ್ಯತೆಯ ಒಟ್ಟೂ ಶಕ್ತಿ ಸಂಚಯಿತ ರೂಪದಲ್ಲಿ ಪ್ರತಿಕ್ರಿಯಿಸಿದೆ. ಪ್ರಸ್ತುತ ಕವಿತೆಯೂ ಅಂತಹ ಪ್ರತಿಕ್ರಿಯೆಯಾಗಿದೆ. ಇದು ಕೋಮು ಹಿಂಸೆಯನ್ನು ಸ್ತ್ರೀ ವಾದವು ಪ್ರಶ್ನಿಸುವ ಬಯಲು ಮಾಡುವ ಕ್ರಮವೂ ಆಗಿದೆ. ❑

ನಮ್ಮ ಮಾನಸಕ್ಕೆ ಲೇಖನ, ವಿಮರ್ಶೆ, ಕವನಗಳನ್ನು
ಇ-ಮೇಲ್ ಮೂಲಕ ಕಳುಹಿಸುವವರು
ನುಡಿ ಅಥವಾ ಬರಹ ಲಿಪಿಯಲ್ಲಿ ಕಳುಹಿಸಿ.

ಕನಸುಗಳು

ಕಣ್ಣುಗಳಿರುವುದು ಎರಡೇ
ಕನಸುಗಳು ಸಾವಿರ
ಹೆಡೆಯೆತ್ತಿ ನಿಲ್ಲುತ್ತವೆ
ಉಸಿರಿಗಾಗಿ ಜೀವ ಬಿಡುತ್ತವೆ
ಸಾವಿರ ಜೀವಗಳಿಗೆ ಉಸಿರು ತುಂಬಲಿ ಹೇಗೆ
ಪುಪ್ಪಸಗಳಿರುವುದೂ ಎರಡೇ

ಕನಸುಗಳಾಚೆ ಮೋಹಿಸಿ ಮುಟ್ಟುವಾಸೆ
ಹಿಡಿದೇ ಬಿಟ್ಟೆನೆಂದರೆ
ಬೆಟ್ಟಗಳಂತೆ ಬೆಳೆದು ಬಿಡುತ್ತವೆ
ಕಣ್ಣೊಳಗೆ ನುಣ್ಣಗೆ
ಜಾರಿಕೊಂಡುಬಿಡುತ್ತವೆ
ಸನಿಹದಿಂದ ತಬ್ಬಲಾರೆ
ದೂರದಿಂದ ಕಾಣಲಾರೆ

ಬೆಟ್ಟಗಳ ಸುಟ್ಟು ಕರಕಾಗಿಸಿದೆ ಹಗಲು
ಸ್ವರ್ಗದಿಂದ ಜಾರಿಬಿದ್ದಿವೆ ಉದ್ದ ಇರುಳುಗಳು
ಚಂದಿರನ ಬೆಳಕಲ್ಲಿ ಅನಾಥ ಹೆಣಗಳು

ಮತ್ತೆ ಹೊಸ ಮಳೆಯೊಂದಿಗೆ
ಎದ್ದಿವೆ ಬೂದಿಯಿಂದಲೇ
ಸಗರ ಸಂತತಿಯ ಚಿಗುರುಗಳು

ಬೆಟ್ಟ ಇಳಿದು ಭೋರ್ಗರೆದಿವೆ
ನದಿಯ ಜಾಡಿನೊಂದಿಗೆ
ಬಿದ್ದಲ್ಲಿ ಬಿದ್ದು ಎದ್ದಲ್ಲಿ ಎದ್ದು
ಕೊರಕಲು ಕೊಳ್ಳ ಅನಾಮತ್ತು ಆತಂಕಗಳ ತಳ್ಳಿ
ಸಾಗರ ಬಿದ್ದು ಓಡಿವೆ
ಉರುಳುರುಳಿ ಆಕಾರಗೊಂಡು
ಮತ್ತೆ ಹೆಡೆಯೆತ್ತಿ ನಿಂತಿವೆ
ಬೆಂಕಿಯಲ್ಲಿ ಬೇಯದೇ
ನೀರಿನಲ್ಲಿ ಸಾಯದೇ
ಬೆದೆಗೆ ಬಂದು ಬೆನ್ನೇರಿ
ಗಾಳಿಯಲಿ ಮೊಟ್ಟೆ ಇಡುತ್ತವೆ
ಚಿಟ್ಟೆ ಬಿರಿದು ಹೊರಬರುವ ಅಲೆಯಲಿ
ನೆಲದ ನಂಟು ನಿಲ್ಲದು
ಮುಗಿಲ ಮೋಹ ಮುಗಿಯದು
ನೇತಾಡುತ್ತವೆ ನಿಂತಲ್ಲೇ
ದೇಹ ಒದ್ದು ಹೊರಹಾಕಿದ
ಅಲೆಮಾರಿ ಆತ್ಮಗಳು.

■ ಗಿರಿಜಾಶಾಸ್ತ್ರಿ

(ಪ್ರೇರಣೆ: ಮಿರ್ಜಾ ಗಾಲಿಬ್‌ನ "ಹಜಾರೋಂ ಖ್ವಾಯಿಷೇಂ")

ಪತ್ರಿಕೆಗೊಂದು ಪತ್ರ

ಆತ್ಮೀಯರೇ,

ಆತ್ಮೀಯ ಸ್ನೇಹಿತೆ ಮಾಲತಿ ಶೆಣೈವರಿಂದ 'ನಮ್ಮ ಮಾನಸ' ಪತ್ರಿಕೆಯ ಇತ್ತೀಚಿನ ಪ್ರತಿಗಳು ದೊರಕಿದವು. 'ನಮ್ಮ ಮಾನಸ' ಮಹಿಳೆಯರಿಂದ ಮೂಡಿಬರುತ್ತಿರುವ ಉತ್ತಮ ಕಿರುಪತ್ರಿಕೆ. ಮಹಿಳೆಯರ ಸಮಸ್ಯೆ, ಹೋರಾಟಗಳ ಮುಖವಾಣಿಯಾಗಿದೆ. ಬಹುಶಃ ಪತ್ರಿಕೆಯ ಮುದ್ರಣಕ್ಕೂ ಸಾಲದಷ್ಟು ಚಂದಾದಾರ ಹೊಂದಿರುವ ಪತ್ರಿಕೆಯನ್ನು ಎದೆಗುಂದದೆ ಮುನ್ನಡೆಸುತ್ತಿರುವ ಸಂಪಾದಕ ವರ್ಗ ನಿಜಕ್ಕೂ ಅಭಿನಂದನಾರ್ಹ. 'ನಮ್ಮ ಮಾನಸ' ತುಸು ನವೀಕರಣಗೊಂಡರೆ ಇನ್ನೂ ಚಂದ. ಇದೇ ಲೇಖನಗಳನ್ನು ಅಂತರ್ಜಾಲ ತಾಣದಲ್ಲಿಯೂ ಪ್ರಕಟಿಸಿದರೆ ಹೆಚ್ಚು ಹೆಚ್ಚು ಓದುಗರನ್ನು ಸೆಳೆಯಬಹುದು.

–ರಾಧಿಕಾ, ಬೆಂಗಳೂರು

✦ ✦

ಈ ಪತ್ರಿಕೆಯಲ್ಲಿರುವ ನನ್ನ ಗೆಳತಿಯರು ಮಾನಸವನ್ನು ಓದಲೆಂದು ನನಗೊಂದು ಪ್ರತಿ ನೀಡಿದಾಗ ಓದುವೆಂದಷ್ಟೆ ಹೇಳಿ ಪಕ್ಕಕ್ಕಿಟ್ಟೆ. ಕೆಲ ದಿನದ ನಂತರ ಓದಲೇಬೇಕೆಂದು ಹೇಳಿದಾಗ ಮಾನಸವನ್ನು ಓದಿದೆ. ನಿಜವಾಗಿಯು ಬಹಳ ಇಷ್ಟವಾಯಿತು. ಈ ಪತ್ರಿಕೆಯಲ್ಲಿ ಮಹಿಳಾ ಸಮಸ್ಯೆಗಳನ್ನು ಬಿಂಬಿಸುತ್ತಿರುವುದು ಮೆಚ್ಚುಗೆಯಾಯಿತು. ಕಹಾನಿಯ ವಿಮರ್ಶೆ ಪುಟ್ಟದಾದರು ಚೆನ್ನಾಗಿತ್ತು. 'ಇನ್ನೊಬ್ಬಳು ಶಕುಂತಲೆ' ಎಂಬ ನಾಟಕದ ವಿಮರ್ಶೆಯಲ್ಲಿ ಮೂಡಿಬಂದಿರುವ ಶಾಕುಂತಲೆಯ ವ್ಯಕ್ತಿತ್ವ ಮನಸ್ಸಿಗೆ ಹತ್ತಿರವಾಯಿತು.

–ಮಮತ.ಎನ್

'ನಮ್ಮ ಮಾನಸ' ಓದುಗರಲ್ಲಿ ವಿನಂತಿ

ನಮ್ಮ ಮಾನಸ ಪತ್ರಿಕೆಯನ್ನು ಓದಿ ನಿಮ್ಮ ಅನಿಸಿಕೆಗಳನ್ನು ಇ-ಮೇಲ್ ಅಥವಾ 'ನಮ್ಮ ಮಾನಸ' ವಿಳಾಸಕ್ಕೆ ಕಳುಹಿಸಿ. ಲೇಖನಗಳಿಗೆ ಸಂಬಂಧಪಟ್ಟ ನಿಮ್ಮ ಅಭಿಪ್ರಾಯ ಮತ್ತು ಅನಿಸಿಕೆ ಸ್ವಾಗತಾರ್ಹ.

ಇ-ಮೇಲ್ ಐಡಿ: nammamanasa@gmail.com

ನಮ್ಮ ಮಾನಸ ವಿಳಾಸ:

'ನಮ್ಮ ಮಾನಸ'

114/5, 9ನೇ ತಿರುವು, 2ನೇ ಮುಖ್ಯರಸ್ತೆ, ಚಾಮರಾಜಪೇಟೆ,
ಬೆಂಗಳೂರು – 560 018

ಆತ್ಮೀಯರೇ,

ಕಳೆದ ತಿಂಗಳ ಸಂಚಿಕೆಯಲ್ಲಿ ಪ್ರಕಟವಾಗಿದ್ದ 'ಮಹಿಳೆ ಮತ್ತು ನ್ಯಾಯ' ಎಂಬ ಲೇಖನ ಬಹಳ ಚೆನ್ನಾಗಿ ಮೂಡಿಬಂದಿದೆ. ಅಮೆರಿಕದ ನ್ಯಾಯದ ಬಗ್ಗೆ ಬಹಳ ಮಾಹಿತಿ ದೊರಕಿದ್ದು ಇಂತಹ ಲೇಖನ ಭಾರತದಲ್ಲಿರುವ ಮಹಿಳಾ ಪರ ನ್ಯಾಯದ ಕುರಿತು ಪ್ರಕಟವಾದರೆ ಚೆನ್ನಾಗಿರುತ್ತದೆ.

–ಕವನ ಪಿ.

✦ ✦

'ನಮ್ಮ ಮಾನಸ' ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಎಲ್ಲಾ ಲೇಖನಗಳು ಸೊಗಸಾಗಿವೆ. ಹೊಸ ಲೇಖಕಿಯರ ಬರಹ ಸ್ವಾಗತಾರ್ಹ. ಮೇ ತಿಂಗಳ ಸಂಚಿಕೆಯಲ್ಲಿ ಪ್ರಕಟವಾಗಿದ್ದ 'ವಾರಿಸ್ ಡೇರಿಯ' ಎಂಬ ಲೇಖನವಂತೂ ಮನಕಲಕುವಂತಿತ್ತು.

–ಸುಕನ್ಯ, ಬೆಂಗಳೂರು

✦ ✦

ಮಹಿಳಾ ವಿಜ್ಞಾನಿಗಳ ಕುರಿತಾದ ಲೇಖನ ಬಹಳ ಮಾಹಿತಿದಾಯಕ ವಾಗಿತ್ತು. ಎಲ್ಲಾ ವಿಜ್ಞಾನಿಗಳ ಸಾಧನೆಯ ಜೊತೆಗೆ ಅವರು ಎದುರಿಸಬೇಕಾದ ತೊಂದರೆಗಳ ಬಗ್ಗೆ ಇನ್ನಷ್ಟು ಮಾಹಿತಿ ನೀಡಿದಿದ್ದರೆ ಚೆನ್ನಿತ್ತು.

–ಸುಧ.

✦ ✦

ಚಂದಾದಾರರಲ್ಲಿ ಮನವಿ

ನವೀಕರಣ

ಈಗಾಗಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಕೂಡಲೇ ನವೀಕರಿಸಿ. ಚಂದಾ ಅವಧಿ ಮುಗಿಯುವ 2–3 ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ದಯವಿಟ್ಟು ಕೂಡಲೇ ಚಂದಾ ನವೀಕರಿಸಬೇಕೆಂದು ವಿನಂತಿಸುತ್ತೇವೆ.

–ಸಂಪಾದಕ ಮಂಡಳಿ

ನಿಮ್ಮ ಸ್ನೇಹಿತರನ್ನೂ ಚಂದಾದಾರರನ್ನಾಗಿಸಿ

Registered with Registrar of Newspapers of India under No. KARKAN/2007/22289
'NAMMA MANASA', REGD.No.: MAG(3) NPP/399(A)/2006-07 **Reg.KA/BGS/2074/2010-12**

ಕವಿತೆ



ಅವ್ವನ ಕಣ್ಣೀರು
ಕಡೆಯ ಬದುಕು
ಆ ಮಡಿಲ ಸಿರಿಯಾಗಿ
ಕಣ್ಣೀರ ಮರಿಯಾಗಿ
ಹರಿದೆ ಹಾಡಿದೆ ನಲಿದೆ
ಬೀಗಿದೆ ಜಿಗಿದೆ ಬೆಳೆದೆ
ತಿಂದುಂಡು ಉಬ್ಬಿದ ಹಕ್ಕಿಯಾಗಿ
ಹಾರಾಡಿದೆ ಕೊಂಬೆ ಕೊಂಬೆಗು
ಕುಳಿತು ಆಲಾಪಿಸಿದೆ
ಹಾಡ ಆರಾಧಿಸಿದೆ
ಅಲ್ಲಾಗ ಪ್ರೀತಿಯ ಕೈಗಳು
ಮೈದಡವಿ ಮುದ್ದಿಸಿದವು
ನೆತ್ತಿ ಚುಂಬಿಸಿ
ಬೆಳಕಿನ ಸೆಳಕಿಗೆ ಸೆಳೆದವು
ಅದೊಂದು ಆಶುಕವಿತೆ
ಬೆಳಕಿನಾ ಸೆಳಕು
ಮಿಂಚಿ ಹರಿದು
ನೆರೆಮನೆಯ ಸಿರಿದೇವಿಯಾಗಿ
ಪರಂಪರೆಯ ಮಿಣುಕಾಟ
ತಿಣುಕಾಟ ಇನ್ನೇನು ಭಾವಗಳು
ಬತ್ತಿ ಬಯಲಾಗುವ ಹೊತ್ತು
ನಡುವೆಯೆ ತುಂತುರು ಮಳೆ
ತಡವಿಲ್ಲದೆಯೆ ಬತ್ತಿದ
ಒಡಲ ಮಣ್ಣೊಳಗೆ
ಆಚೀಚೆ ಹರಿದಾಡಿ
ಮುಲುಕಿಗೂ ನೋವಿಗೂ
ನಡುವಿನ ಹೆರಿಗೆ ವೈಭವವ
ಕರಗಿಸಿ ಇಗೋ ಬಂದೇ ಎನುತ
ಇಳಿದಿತ್ತು ಕವಿತೆ
ಹುಟ್ಟು ಸಾವು ಬೆರಗಾಗುವಂತೆ.

■ ಸುಶೀಲಾ ಸೋಮಶೇಖರ್

Registered Magazine



Posted on 9th of every month at MBC, Bangalore GPO
Total No. of Pages: 24

ವಿಳಾಸ :
ನಮ್ಮ ಮಾನಸ
114/5, 9ನೇ ತಿರುವು, 2ನೇ ಮುಖ್ಯರಸ್ತೆ,
ಚಾಮರಾಜಪೇಟೆ
ಬೆಂಗಳೂರು - 560 018